ಕರ್ಮವೀರ

ಹುಬ್ಬಳ್ಳಿ ತಾ. ೧೨—೧—೪೯

ಸಂಪುಟ ೨೦] [ಸಂಚಿಕೆ [illegible]

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು:
ಹ. ರಾ. ಪುರೋಹಿತ]

[ಸಂಸ್ಥಾಪಕರು:
ರಂ. ರಾ. ದಿವಾಕರ

- ಬಲ್ಲವರ ನುಡಿಗಳು -

ತಾನು ಪಡೆದ ವಸ್ತುಗಳಿಗಾಗಿ ಯಾರೂ ಎಂದೂ ಗೌರವಿಸಲ್ಪಟ್ಟಿಲ್ಲ, ಗೌರವ ದೊರೆತದ್ದು ತಾನು ಕೊಟ್ಟದ್ದಕ್ಕಾಗಿ.

—ಕಾಲ್ವಿನ್ ಕೂಲಿಜ

ಇರುವೆಗಿಂತ ದೊಡ್ಡ ಗುರುವಿಲ್ಲ; ಆದಾದರೋ ಏನನ್ನೂ ಹೇಳುವದೇ ಇಲ್ಲ.

—ಫ್ರಾಂಕ್ಲಿನ್

ಉಳಿದೆಲ್ಲ ಸ್ವಾತಂತ್ರ್ಯಗಳಿಗಿಂತಲೂ ನಾನು ಬೇಡುವದೆಂದರೆ, ನನ್ನ ಮನಸ್ಸಾಕ್ಷಿಗೆ ಸರಿಯಾಗಿ ಅರಿಯುವ, ಆಡುವ ಮತ್ತು ನಿರಾತಂಕವಾಗಿ ವಾದಿಸುವ ಸ್ವಾತಂತ್ರ್ಯ

—ಮಿಲ್ಟನ್



ಹತ್ತೀಸಿಂಗನ ಗೋರಿ

ಅಹಮುದಾಬಾದಿನ ಪ್ರೇಕ್ಷಣೀಯ ಕಟ್ಟಡಗಳಲ್ಲಿ ಇದು ಪ್ರಮುಖವಾಗಿದೆ. ಭಾರತೀಯ ಮತ್ತು ಇಸ್ಲಾಮಿ ಶಿಲ್ಪ ಕಲೆಗಳ ಸುಂದರ ಸಮ್ಮಿಶ್ರಣವನ್ನು ಇದರಲ್ಲಿ ಕಾಣಬಹುದು.

ಮುಖ್ಯ ಸೇನಾಪತಿ

ಜನರಲ್ ಕಾರ್ಯಪ್ಪನವರು (ವ್ಯಕ್ತಿ ಪರಿಚಯ) — ಪುಟ ೫

ಭದ್ರತಾಮಂಡಲದಲ್ಲಿ ಕುಡುಕರ ದೂರು

(ನಗೆ ಬರಹ) — ಪುಟ ೧೫

KARMAVEER- Kannada Illustrated Weekly, HUBLI

ಭದ್ರತಾಮಂಡಲದಲ್ಲಿ ಭಾರತದ ಕುಡುಕರ ದೂರು

(ಒಂದು ವ್ಯಂಗ್ಯ ಕಲ್ಪನೆ)

ನ್ಯೂಯಾರ್ಕ, ಜನವರಿ ೫, ೧೯೯೯— ಭಾರತದ ಕುಡುಕರ ಪರವಾಗಿ ಇಂದು ಭದ್ರತಾ ಮಂಡಲದ ಮುಂದೆ ಹಿಂದುಸ್ತಾನದ ಸಹಾಯದಿಂದ ಮಂಡಿಸಲ್ಪಟ್ಟ ಹಿಂದು ಸ್ತಾನ ಸರಕಾರದ ಮೇಲಿನ ದೂರಿನ ಬಗ್ಗೆ ಅತ್ಯಂತ ಮನೋರಂಜಕವಾದ ಚರ್ಚೆ ನಡೆದಿದ್ದು ಅದರ ವಿವರಗಳನ್ನು ನಿಮ್ಮ ವಿಶೇಷ ಪ್ರತಿನಿಧಿ "ಚಿತ್ರಗುಪ್ತ"ನು ಸಾದ್ಯಂತವಾಗಿ ಕಳಿಸಿ ಕೊಟ್ಟಿದ್ದಾನೆ. ಭದ್ರತಾಮಂಡಲದ ಸ್ಥಾಪನೆಯಾದಂದಿನಿಂದ ಇಂಥ ಸ್ವಾರಸ್ಯದ ಚರ್ಚೆಯಾಗಿ ಲ್ಲೆಂದು ಭಾವಿಸಲಾಗಿದೆ. ಏಕೆಂದರೆ ಹಿಂದುಸ್ತಾನ ಈ ರಾಜಕಾರಣದ ಗತ್ತಿನಲ್ಲಿಯೂ ಹಿಂದೇಟು ಹಾಕಿತು. ಪಾನನಿರೋಧವನ್ನು ಇಷ್ಟು ಉಗ್ರವಾಗಿ ಜಾರಿಗೆ ತರುತ್ತಿರುವದನ್ನು ಕೇಳಿ ಸಭೆಯ ಸದಸ್ಯರೆಲ್ಲರೂ ಅತ್ಯಂತ ಉದ್ವೇಗವನ್ನು ವ್ಯಕ್ತಗೊಳಿಸಿದರು. ಇದು ಭಾರತದ ಆಂತರಿಕ ಪ್ರಶ್ನೆಯಾಗಿದ್ದರೂ ಜಗತ್ ಶಾಂತಿಗೆ ಗಂಡಾಂತರ ತರುವ ಪ್ರಶ್ನೆಯೆಂದು ಪರಿಗಣಿಸಲ್ಪಟ್ಟು ಕೆರೆಯ ಮರೆಯಲ್ಲಿ ಕುಡುಕ ರಾಷ್ಟ್ರಗಳು ತಂದ ಒತ್ತಾಯವೇ ಕಾರಣವೆಂದು ನನಗೆ ವಿಶ್ವಸನೀಯವಾಗಿ ತಿಳಿದುಬಂದಿದೆ. ಹಿಂದುಸ್ತಾನದ ಗಫಲತುಲ್ಲಾಖಾನರು ಕುಡುಕರ ಪ್ರತಿನಿಧಿಯಾದ ಕುಡುಕಪ್ಪನನ್ನು ಅತಿ ದೀನಾವಸ್ಥೆಯಲ್ಲಿ ಸಭೆಯ ಮುಂದೆ ಹಾಜರು ಪಡಿಸಿ ದೊಡ್ಡ ನಾಟಕೀ ಪ್ರಭಾವವನ್ನು ಸಾಧಿಸಿದುದೂ ಅವರ ಗೆಲವಿಗೆ ಕಾರಣವಾಯಿತೆಂದು ಹೇಳಬಹುದು.

ಕುಡುಕಪ್ಪ ವಿಧಾಪಿತನಾಗಿ ಕೆದರಿದ ತಲೆ, ಬೆಳೆದ ಗಡ್ಡ, ಎಲುಬಿನ ಹಂದರದಂಥ ದೇಹದ ಕುಡುಕಪ್ಪನು ಸಭೆಗೆ ವಿನಯದಿಂದ ಕೈಮುಗಿದು "ದೇವರೂ ನನ್ನ ಕಥೆ ಕೇಳ್ರಿ" ಎಂದು, ಸಾಷ್ಟಾಂಗ ನಮಸ್ಕಾರ ಹಾಕಿದೊಡನೆ ಭದ್ರತಾ ಮಂಡಲದ ಸದಸ್ಯರೆಲ್ಲ ಅತ್ಯಂತ ವಿಸ್ಮಿತರಾಗಿ ಈ ಪ್ರಕರಣವನ್ನು ಭಂಡಲದ ಮುಂದೆ ತಂದ ಹಿಂದುಸ್ತಾನದ ಪ್ರತಿನಿಧಿ ಸರ್ ಗಫಲತುಲ್ಲಾಖಾನರ ಕಡೆ, ಸ್ವಾರ್ಥದ [illegible] ದೃಷ್ಟಿಯಿಂದ ನೋಡತೊಡಗಿದರು.

ಅಧ್ಯಕ್ಷ: ಇದೇನು ವಿಚಿತ್ರ ರೀತಿ ಇದು? ಇವನು ನೆಲದ ಮೇಲೆ ಮಲಗಿದ ಕಾರಣವೇನು?

ಗಫಲತುಲ್ಲಾಖಾನ: ಸ್ವಾಮಿ, ಇವನು ಹಿಂದೂ ಧರ್ಮದವನು. ಹಿಂದೂಧರ್ಮದಲ್ಲಿ ಹೇಳಿದಂತೆ ಗೌರವಪೂರ್ಣವಾಗಿ ಈ ಸಭೆಗೆ ಕೃತಜ್ಞತೆ ಅರ್ಪಿಸುತ್ತಿದ್ದಾನೆ. ಇವನ ಈ ದೇಹ, ಈ ಸ್ಥಿತಿ, ನೋಡಿದರೆ ಇವನ ಮೇಲೆ ಬಹುಸಂಖ್ಯಾತರು ನಡೆಸಿದ ದಬ್ಬಾಳಿಕೆಗೆ ಅದೆಷ್ಟು ಬಳಲಿ ಬೆಂಡಾಗಿರುವನೆಂದು ನಾವು ಪರಿಗಣಿಸುವ ಅಗತ್ಯವೇ ಉಳಿಯದು.

ಅಧ್ಯಕ್ಷ: ನಿಜವಾಗಿಯೂ ಇವನ ಸ್ಥಿತಿ ಕನಿಕರಜನಕವಿದೆ. ಕುಡುಕಪ್ಪನು ತನಗೆ ಹೇಳಬೇಕಾದದನ್ನು ಹೇಳಲಿ.

ಕುಡುಕಪ್ಪ: ಸ್ವಾಮಿ, ದೇವರೂ, ನಿಮಗೆಲ್ಲಾ ಕುಡಿದುಮಂತೆ ನಾನೂ ಕುಡಿಯುವೆ. ಅದು ನಮ್ಮ ದೇಶದಲ್ಲಿ ದೊಡ್ಡ ಅಪರಾಧ ಅಂತ ಸರಕಾರ ಕಾಯದೇ ಮಾಡಿಬಿಟ್ಟರು. ಕುಡಿಯುವದು ನನ್ನ ಧರ್ಮ. ನಾನು ಬ್ರಾಹ್ಮಣನಿದ್ದರೂ ನನ್ನ ಧರ್ಮ ಬಿಡಲಾರೆ. ಹೀಗಾಗಿ ನನ್ನನ್ನು ಅನೇಕ ಸಲ ಜೇಲಿಗೆ ಹಾಕಿದರು. ಅದರೂ ನಾನು ನಿಜವಾದ ದೇಶಭಕ್ತನಂತೆ ಸೆರೆಮನೆಗೆ ಹೋಗುವದರಲ್ಲಿ ಗೌರವವೆಂದೇ ತಿಳಿದೆ. ಮುಂದೆ ನನ್ನನ್ನು ಊರ ಬಿಟ್ಟು ಹೊರಡಿಸಿದರು. ನನ್ನೊಬ್ಬನಿಗೇ ಈ ಗತಿಯಾಗಿದ್ದರೆ ಆ ಮಾತು ಬೇರೆ. ನನ್ನ ವರ್ಗಕ್ಕೆ ಸೇರಿದ ಜನರ ಮೇಲೆ ಇಂಥ ಅನ್ಯಾಯಗಳು ಅವ್ಯಾಹತವಾಗಿ ನಡೆದಿವೆ. ಇದರಿಂದ ಅಲ್ಪಸಂಖ್ಯಾತರಾದ ನಾವು ಈ ದಬ್ಬಾಳಿಕೆಗೆ ಎದೆಗೊಟ್ಟು ನಿಲ್ಲಲು ಅ. ಭಾ. ಮದ್ಯಪಾಯಿಗಳ ಪರಿಷತ್ತು ಸ್ಥಾಪಿಸಿದೆವು. ನನ್ನನ್ನೇ ಅದರ ಅಧ್ಯಕ್ಷನೆಂದು ಸರ್ವಾನುಮತದಿಂದ ಆರಿಸಿದ್ದಾರೆ. ಇದಕ್ಕೆ ಸಂಲಗ್ನ ಅ. ಭಾ. ಅಫು ಸೇವಿಸುವವರ ಸಂಘ, ಗಾಂಜಾ ಸೇದುವವರ ಸಂಘ, ಕುಡುಕರ ಸಂಘ, ಬೀಡಿ ಕುಡಿಯುವವರ ಸಂಘ, ಹೀಗೆ ಸಂಘಗಳು ಸ್ಥಾಪನೆಯಾಗಿ ಈ ಎಲ್ಲ ಸಂಘಗಳ ಮಹಾಮಂಡಲವೂ ಈಚೆಗೆ ಸೇರಿದ ಅ. ಭಾ. ವಿಶೇಷಾಧಿವೇಶನದ ಪರಿಷತ್ತಿನಲ್ಲಿ ಸ್ಥಾಪಿತವಾಗಿದೆ. ಈ ಮಹಾಮಂಡಲದ ಅಧ್ಯಕ್ಷ ಪದಕ್ಕೂ ನನ್ನನ್ನೇ ಆರಿಸಿದ್ದಾರೆ. ನಾನು ಈ ಪ್ರಾತಿನಿಧಿಕ ಸಂಘದ ಅಧ್ಯಕ್ಷ ಸ್ಥಾನದಿಂದ ಹಿಂದುಸ್ತಾನ ಸರಕಾರದೊಡನೆ ನಾಗರಿಕರ ಸ್ವಾತಂತ್ರ್ಯದ ಮೂಲಭೂತ ಹಕ್ಕಿಗೆ ಗದೆ ತರುವ ಮದ್ಯಪಾನ ನಿರೋಧ ಕಾನೂನು ತಕ್ಷಣ ರದ್ದು ಪಡಿಸಲು ಅದನ್ನು ಬಹುಸಂಖ್ಯಾತರಾದ ಜನರ ಕಾಟ ಕುಡುಕರ ಬೆಂಬಲದಿಂದ ಕಾಂಗ್ರೆಸ್ಸಿನ ಸ್ವಾತಂತ್ರ್ಯ ಹೋರಾಟದಲ್ಲಿ ನನ್ನ ಸಮಾಜವು ಅದನ್ನು ವಿರೋಧಿಸಿದ ಸೇಡು ತೀರಿಸಿಕೊಳ್ಳಲು ಮಾಡಿದ್ದಾಗಿದೆ. ಅದನ್ನು ಕೂಡಲೇ ರದ್ದು ಪಡಿಸಬೇಕಾಗಿ ಪ್ರಾರ್ಥಿಸಿದೆ. ಅದಕ್ಕೆ ಸರಕಾರದವರು ನನಗೆ ಗಡಿಪಾರು ಶಿಕ್ಷೆ ವಿಧಿಸಿದರು. ನಾನು ಹಿಂದುಸ್ತಾನಕ್ಕೆ ಬಂದೆನು. ನಾಗರಿಕರ ಮೂಲಭೂತ ಹಕ್ಕಿಗೆ ಸಮಾಧಿ ಮಾಡಿ ಅಲ್ಪ ಸಂಖ್ಯಾತರಾದ ನಮಗೆ ನಮ್ಮ ಧಾರ್ಮಿಕ, ಸಾಂಸ್ಕೃತಿಕ ಜೀವನ ಸಾಗಿಸುವ ಅವಕಾಶ ತಪ್ಪಿಸಿ ಗುಲಾಮಗಿರಿಗೆ ಇಳಿಸಿದ್ದರಿಂದ ಈ ಸಭೆಗೆ ದೂರು ತರಲು ನಿರ್ಧರಿಸಿದೆ. ಈ ಸಭೆ ಖಾಸಗಿ ವ್ಯಕ್ತಿಗಳ ದೂರು ವಿಚಾರಿಸುವ ರೂಢಿ ಇಲ್ಲ. ಅಂತೆಯೇ ಹಿಂದುಸ್ತಾನ ಸರಕಾರದ ಬೆಂಬಲ ಪಡೆದು ಇಲ್ಲಿಗೆ ಬಂದಿರುವೆ. ಈ ಪತ್ರವ್ಯವಹಾರ ನಮ್ಮ ಮಹಾಸಭೆಯಲ್ಲಾದ ಗೊತ್ತುವಳಿಗಳ ಅಧಿಕೃತ ಪ್ರತಿ ತಮ್ಮ ಅವಗಾಹನೆಗೆ ಸಾದರ ಪಡಿಸುವೆ. ಅವನ್ನು ಓದಿ ಹಿಂದುಸ್ತಾನದ ಕಾಂಗ್ರೆಸ ಸರಕಾರವು ನಮ್ಮನ್ನು ನಡೆಸಿಕೊಳ್ಳುವ ರೀತಿ ನೀತಿಗಳು ಬದಲಾಗುವಂತೆ ಅದಕ್ಕೆ ಈಗಲೇ ಆಜ್ಞಾಪಿಸಬೇಕಾಗಿ ಪ್ರಾರ್ಥಿಸುವೆ.

ಸರ ಗಫಲತುಲ್ಲಾಖಾನ: ಈ ಪತ್ರವ್ಯವಹಾರ ಹಾಗು ಗೊತ್ತುವಳಿಗಳನ್ನು ತಿಳಿಸಿ ಹೇಳುವ ಅವಶ್ಯಕತೆ ಇದೆ ಎಂದು ನನಗನಿಸುವದು ಯಾಕೆಂದರೆ ಮಹಾಮಂಡಲದವರು ಮೊದಲನೇ ಪತ್ರದಲ್ಲಿ ಕುಡುಕತನವು ಸನಾತನ ಧರ್ಮವೆಂದು ಸೋಸೋಪಪತ್ತಿ ಉದ್ಧರಿಸಿ ವೇದಗಳಲ್ಲಿ ಅನೇಕ ಋಷಿಗಳು ಸೋಮಪಾನದ ವರ್ಣನೆ ಮಾಡಿದ್ದನ್ನು ಮದ್ಯಪಾನಗ್ರೀಸ ರವಾದ ಇಂದ್ರನೇ ದೇವತೆಗಳ ಅರಸನಾಗಿದ್ದು ನಮ್ಮ ಯಜ್ಞ ಯಾಗಾದಿಗಳಲ್ಲಿ ಸೋಮಪಾನಕ್ಕಿರುವ ಮಹತ್ವದ ಸ್ಥಾನವನ್ನು ವಿಶದವಾಗಿ ವಿವರಿಸಿ ಸನಾತನ ಧರ್ಮದ ಅಭಿಮಾನಿಗಳಾದ ತಮ್ಮ ಸಮಾಜವನ್ನು ಕುಡುಕತನದಿಂದ ಪರಾವೃತ್ತಗೊಳಿಸುವದರಿಂದ ಧಾರ್ಮಿಕ ಸ್ವಾತಂತ್ರ್ಯ ಹರಣವಾಗುವದೆಂದೂ ಸಿದ್ಧಪಡಿಸಿದ್ದಾರೆ.

ಅಧ್ಯಕ್ಷ: ಸನಾತನ ಧರ್ಮದ ಸಿದ್ಧಾಂತಗಳೇನು? ಅದು ಹಿಂದೂ ಧರ್ಮದ ಯಾವ ಜಾತಿಯವರಿಗೆ ಅನ್ವಯಿಸುವದು?

ಸರ ಗಫಲತುಲ್ಲಾಖಾನ: ನಾನು ಹೈಕೋರ್ಟಿನ ನಿವೃತ್ತ ನ್ಯಾಯಾಧೀಶನಾಗಿರುವದರಿಂದ ಹಿಂದೂ ಧರ್ಮ ಶಾಸ್ತ್ರದ ಬಗ್ಗೆ ಅನೇಕ ವಿದ್ವದ್ ವಕೀಲರ ವಾದಗಳನ್ನು ನನ್ನ ಮುಂದೆ ಬಂದ ಅನೇಕ ಮೊಕದ್ದಮೆಗಳ ಪ್ರಾಜ್ಯದಲ್ಲಿ ಕೇಳಿದವನಾಗಿದ್ದೇನೆ. ಸನಾತನಿಗಳೆಂದರೆ ಹಿಂದೂ ಧರ್ಮದ ತೀರ ಅಲ್ಪಸಂಖ್ಯಾತರ ಒಂದು ವರ್ಗ. ಅವರು ಶ್ರುತಿ, ಸ್ಮೃತಿ, ಗೀತೆಗಳನ್ನೇ ಧರ್ಮ ಪ್ರಮಾಣ ಗ್ರಂಥಗಳೆಂದು ನಂಬುತ್ತಾರೆ. ಅವುಗಳಲ್ಲಿ ಹೇಳಿದ ಕರ್ಮದಂತೆ ವರ್ತಿಸುತ್ತಾರೆ.

ಅಧ್ಯಕ್ಷ: ಈ ವರ್ಗದವರೇ ಹರಿಜನರನ್ನು ಮುಟ್ಟಲು ನಿರಾಕರಿಸಿ ಅವರನ್ನು ಮನುಷ್ಯರಲ್ಲಿ ತೀರ ಕೀಳರೆಂದು ಭಾವಿಸುವದಿಲ್ಲವೇ?

ಕುಡುಕಪ್ಪ: ಸ್ವಾಮಿ, ಅದು ಸನಾತನ ಧರ್ಮ ದ್ರೋಹಿಗಳ ರೀತಿ. ನಮ್ಮಲ್ಲಿ ಜಾತಿ ಭೇದವಿಲ್ಲ. ನಾವು ವರ್ಣಾಶ್ರಮ ವ್ಯವಸ್ಥೆಯನ್ನು ಮಾತ್ರ ಮನ್ನಿಸುತ್ತೇವೆ.

ಅಧ್ಯಕ್ಷ: ವರ್ಣಾಶ್ರಮ ವ್ಯವಸ್ಥೆ? ಇದರ ಅರ್ಥವೇನು?

ಕುಡುಕಪ್ಪ: ಸಮಾಜ ಮತ್ತು ಅದರ ಘಟಕಗಳಾದ ವ್ಯಕ್ತಿಗಳ ಜೀವನಕ್ರಮ ಮತ್ತು ಅವರ ಉದ್ಯೋಗಗಳಿಂದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವಿಭಾಗ ಮಾಡಿ ಒಂದೊಂದು ವಿಭಾಗಕ್ಕೆ ಒಂದೊಂದು ವರ್ಣವೆಂದು ಕರೆಯಲಾಗಿದೆ. ಕೇವಲ ಗುಣಕರ್ಮಗಳಿಂದಲೇ ಅವನ ವರ್ಣವನ್ನು ನಿರ್ಧರಿಸುವದು ಎಂದು ಸನಾತನ ಧರ್ಮ ಗ್ರಂಥವಾದ ಗೀತೆಯಲ್ಲಿ ಹೇಳಲಾಗಿದೆ. ಅದು ಹೋಗಿ ಸನಾತನ ಧರ್ಮದ್ರೋಹಿಗಳು ಅದನ್ನು ಜನ್ಮದಿಂದ ಎಂದು ನಿರ್ಧರಿಸಿ ವರ್ಣಕ್ಕೆ ಜಾತಿ ಸ್ವರೂಪ ಕೊಟ್ಟಿದ್ದಾರೆ. ಬ್ರಾಹ್ಮಣ ವರ್ಗದ ಗುಣಗಳು ನಿಸ್ವಾರ್ಥ ಬುದ್ಧಿ, ಸರ್ವಸಮತಾ ದೃಷ್ಟಿ, ಬ್ರಹ್ಮಸತ್ಯ, ಜಗನ್ಮಿಥ್ಯಾ, ಹೀಗೆಲ್ಲಾ ಉಂಟು. ಇವನ್ನು ನಮ್ಮ ಸಮಾಜದಲ್ಲಿಯ ಕುಡುಕಶ್ರೇಷ್ಠರಲ್ಲಿ ಹಲವರು ಸಾಧಿಸಿದ್ದಾರೆ. ಅವರನ್ನು ಮಾತ್ರ ನಾವು ಬ್ರಾಹ್ಮಣ ವರ್ಣದವರೆಂದು ಗಣಿಸುವೆವು. ತಕ್ಕ ಉಪಾಸಕರಾಗಿ ವೈರಿಯನ್ನು ಹಣಿಯಲು ಕುಡಿಯುವವರು ಕ್ಷತ್ರಿಯ ವರ್ಣದವರು; ಮೇಲಧಿಕಾರಿಗಳಿಗೆ ಸತ್ಕಾರ ಕೂಟ ಏರ್ಪಡಿಸಿ ಅವರಿಗೆ ಕುಡಿಸಿ ಅವರ ಸ್ನೇಹ ಸಂಪಾದಿಸಿ ತಮ್ಮ ಸ್ವಾರ್ಥ ಸಾಧಿಸಿಕೊಳ್ಳುವವರು ವೈಶ್ಯ ವರ್ಣದವರು; ಈ ಮೂರು ವರ್ಣದವರಿಗೆ ಕಳ್ಳ ಭಟ್ಟಿ ಇಟ್ಟು, ಕದ್ದು ಹಿಂದೀ ರಸ ತಂದು, ಪೂರೈಸಿ ಇವರು ಬಿಟ್ಟ ಪ್ರಸಾದವನ್ನೇ ಮಹಾತೀರ್ಥವೆಂದು ಪ್ರಾಶನ ಮಾಡುವವರು ಶೂದ್ರ ವರ್ಣದವರು. ಹೀಗೆ ಚಾತುರ್ವರ್ಣ್ಯ ವ್ಯವಸ್ಥೆಯನ್ನು ನಾವು ಸಜೀವವಿಟ್ಟಿರುವೆವು. ಅದರಿಂದ ನಮ್ಮಲ್ಲಿ ಸ್ಪೃಶ್ಯ, ಅಸ್ಪೃಶ್ಯ ಜಾತಿಭೇದ, ಲಿಂಗಭೇದ, ಯಾವುದಕ್ಕೂ ಅವಕಾಶವಿಲ್ಲ. ಸರ್ವರಿಗೂ ಸಮಾನ ಗೌರವ, ಸಮಾನಾವಕಾಶವಿದೆ. ಕುಡುಕರ ಸಮಾಜದಷ್ಟು ಜಾತ್ಯತೀತ, ಸ್ನೇಹ ಸೌಹಾರ್ದ ಭಾವನೆಗಳುಳ್ಳ ಸಮಾಜ ಹಿಂದೂ ಧರ್ಮದಲ್ಲಿಯೇ ಇಲ್ಲ.

ಹಿಂದುಸ್ತಾನದ ಪ್ರತಿನಿಧಿ— ಕುಡುಕಪ್ಪನ ವಾದವು ಸುಳ್ಳಿನ ಕಂತೆಯಾಗಿದೆ. ಅದನ್ನು ನಾನು ಖಂಡಿಸಲೇ ಬೇಕಾಗಿದೆ. ಧರ್ಮದ ಹೆಸರಿನಿಂದ ಹಿಂದುಸ್ತಾನದಲ್ಲಿ ಅದಷ್ಟು ಸಾಮಾಜಿಕ ಅನ್ಯಾಯ ಬೇರೆ ಎಲ್ಲಿಯೂ ಆಗಿಲ್ಲ. ಆದರಿಂದ ಹಿಂದುಸ್ತಾನವು ಜಾತ್ಯತೀತ ರಾಷ್ಟ್ರವಾಗಬೇಕೆಂದು ಘಟನಾಸಮಿತಿ ನಿರ್ಧರಿಸಿದೆ. ಈ ಕಾರಣದಿಂದ ಕುಡುಕಪ್ಪನು ಹೇಳುವಂತೆ ನಿಜವಾದ ಸನಾತನ ಧರ್ಮ ತತ್ವದಂತೆ ಕುಡುಕರ ಸಮಾಜವು ನಾಲ್ಕು ವರ್ಣಗಳಲ್ಲಿ ವಿಭಾಗಿಸಲ್ಪಟ್ಟದ್ದನ್ನು ಸರಕಾರವು ಮನ್ನಿಸದು. ಇಂಥ ಸಮಾಜಘಾತಕ ಮದಿರಾ ಸೇವನೆಯ ನಿರೋಧ ಅವಶ್ಯವೆಂದು ಸರಕಾರವು ನಿರ್ಧರಿಸಿ ಮದ್ಯಪಾನ ನಿರೋಧ ಜಾರಿಗೆ ತಂದಿದೆ. ಇದರಲ್ಲಿ ಬಹುಸಂಖ್ಯಾಕರು ಅಲ್ಪಸಂಖ್ಯಾಕರ ಮೇಲೆ ದಬ್ಬಾಳಿಕೆ ನಡೆಸುವ ಪ್ರಶ್ನೆ ಇಲ್ಲ. ಇದೊಂದು ಸಮಾಜ ಸ್ವಾಸ್ಥ್ಯದ ಬಗ್ಗೆ ಕೈಕೊಳ್ಳಬೇಕಾದ ಅಗತ್ಯವಾದ ಕರ್ತವ್ಯ ಭಾವನೆಯಿಂದ ಸ್ವೀಕರಿಸಿದ ಧೋರಣೆ. ನಾನು ಹೆಚ್ಚಿಗೆ ಹೇಳಬಯಸುವದಿಲ್ಲ. ಸಮಾಜ ಸುಧಾರಣೆಗೆ ಕಾನೂನು ಮಾಡುವದು ಪ್ರತಿಯೊಂದು ಸರಕಾರದ ಹೊಣೆಯಾಗಿದೆ. ಅದನ್ನು ಹಿಂದುಸ್ತಾನವು ಮಾಡಿದರೆ ಸರ ಗಫಲತುಲ್ಲಾರರಿಗೆ ಅದರಿಂದೇಕೆ ಹೊಟ್ಟೆ ಕಡಿಯಬೇಕೋ ತಿಳಿಯದು. ಇಲ್ಲಿಯ ವರೆಗೆ ಈ ಪ್ರಶ್ನೆ ಬರುವದು ಹಾಸ್ಯಾಸ್ಪದ. ಇದನ್ನು ವಿಷಯ ಪಟ್ಟಿಯಲ್ಲಿ ಸೇರಿಸುವದಂತೂ ಇರಲಿ, ಇನ್ನು ಮುಂದೆ ಇದರ ಬಗ್ಗೆ ಚರ್ಚೆ ಕೂಡಾ ಅನವಶ್ಯ. ಸರ ಗಫಲತುಲ್ಲಾರು ನಮ್ಮ ಪತ್ರದಲ್ಲಿ ಎತ್ತಿದ ವಿಷಯಗಳೆಲ್ಲವೂ ಉತ್ಪ್ರೇಕ್ಷೆ. ಅವುಗಳನ್ನು ಖಂಡಿಸುವ ಅವಶ್ಯಕತೆ ಸಹ ಇಲ್ಲ.

ಸರ ಗಫಲತುಲ್ಲಾಖಾನ: ನನ್ನ ಮಿತ್ರನ ಮಾತು ಕೇಳಿ ನನಗೆ ನಗೆ ಬರುವದು. ಕುಡುಕರು ಕುಟುಂಬಘಾತಕಿಗಳೆಂದು ಅವರು ಹೇಳಿದರು. ಆದೆಷ್ಟು ಕಾಂಗ್ರೆಸಿಗರು ತಮ್ಮ ಕುಟುಂಬ ಘಾತ ಮಾಡಿಲ್ಲ. ದೊಡ್ಡ ದೊಡ್ಡ ನೌಕರಿ ಬಿಟ್ಟರು. ಮನೆಯಲ್ಲಿಯ ಬೆಲೆಯುಳ್ಳ ಬಟ್ಟೆಗಳನ್ನು ಹೋಳಿ ಮಾಡಿದರು. ಮೇಲಾಗಿ ಮೇಲಿಂದ ಮೇಲೆ ಸೆರೆಮನೆಗೆ ಹೋದರು. ಇದರಿಂದ ಅವರು ತಮ್ಮ ಕುಟುಂಬ ಘಾತ ಮಾಡಿಲ್ಲವೇ? ಅದೇ ದೃಷ್ಟಿಯಿಂದ ಕುಡುಕ ವರ್ಗವನ್ನು ನೋಡಲು ಕಾಂಗ್ರೆಸಿಗರಲ್ಲಿ ಈಗ ತಾಕತ್ತು ಯಾಕಿರಬಾರದು. ಕುಟುಂಬಘಾತ ಮಾಡುವ ದೇಶಭಕ್ತಿ ನಿರೋಧದ ಕಾನೂನು ಮಾಡಿದಾಗ ಕಾಂಗ್ರೆಸಿಗರು ತಲೆ ಬಾಗುತ್ತಿದ್ದರೋ? ಕುಡುಕರಿಗೂ ತಮ್ಮ ಸ್ವೇಚ್ಛೆಯಂತೆ ಕುಡಿಯುವದಕ್ಕೆ ನಿರ್ಬಂಧ ಹಾಕುವದು ನ್ಯಾಯ ಸಮ್ಮತವಾಗದು. ಅದೊಂದು ಅವರು ತಮ್ಮ ಧರ್ಮವೆಂದು ಭಾವಿಸಿ ಆಚರಿಸುವಾಗ ಅದನ್ನು ಕೀಳೆಂದು ಭಾವಿಸಲು ಹೆರವರಿಗೆ ಅಧಿಕಾರವೇ ಇಲ್ಲ. ಆ ಆರೋಪ ಎಷ್ಟು ಅಸಮಂಜಸವೆಂಬುದು ಮಹಾಮಂಡಲದ ಕೆಳಗಿನ ಗೊತ್ತುವಳಿಯನ್ನು ಅವಲೋಕಿಸಿದರೆ ಸ್ಪಷ್ಟವಾಗುತ್ತದೆ.

"ಅ. ಭಾ. ವಿಶೇಷಾಧಿ ಮಹಾ ಮಂಡಲದ ಕಾರ್ಯ ಸಮಿತಿಯು ಈ ಮಂಡಲದ ಸದಸ್ಯರ ಸಂಸ್ಕೃತಿಯು ನೀತಿ ಪರಿಪಾಲನೆಯಲ್ಲಿ ಸರಕಾರದ ಧೋರಣೆ ಚಟುವಟಿಕೆಗಳಲ್ಲಿ ವಿರೋಧವಿರುವದೆಂಬ ಗಂಭೀರ ಆರೋಪವನ್ನು ಸರಕಾರದವರು ಮಾಡಿದ ಬಗ್ಗೆ ತೀವ್ರ ವಿಚಾರಮಾಡಿ ಸರಕಾರದ ಗಮನಕ್ಕೆ ಅದರಂತೆ ಸಮಾಜದ ಗಮನಕ್ಕೆ ನಮ್ಮ ಮಹಾಮಂಡಲದಿಂದಾದ ಸಮಾಜ ಸೇವೆಯ ಅರಿವನ್ನು ಮಾಡಲು ಕೆಳಗಿನ ವಿಷಯದತ್ತ ಅಲೋಚಿಸುವವರ ಲಕ್ಷ್ಯವನ್ನು ಸೆಳೆಯಬಯಸುತ್ತದೆ. ದೇಶದಲ್ಲಿ ನಿರಕ್ಷರರು ನೂರಕ್ಕೆ ೯೯ ರಷ್ಟು ಇದ್ದಾಗ ದೇಶದಲ್ಲಿ ಹರಡಿದ ಅಜ್ಞಾನದ ಕಾರ್ಗತ್ತಲೆಯನ್ನು ಹರಿದು ಜನರನ್ನು ಸಾಕ್ಷರರನ್ನಾಗಿ ಮಾಡಿ ಶಿಕ್ಷಣ ಕೊಡಲು ಬೇಕಾದ ಶಾಲೆ ಕಾಲೇಜುಗಳನ್ನು ನಡೆಸಲು ಸರಕಾರಕ್ಕೆ ಹಣವೇ ಇಲ್ಲದಂಥ ಪರಿಸ್ಥಿತಿ ಇತ್ತು. ಆಗ ಶಿಕ್ಷಣ ಖಾತೆಯನ್ನು ಸರಕಾರ ದುರ್ಲಕ್ಷ್ಯ ಮಾಡುವದು ಸ್ವಾಭಾವಿಕವೇ ಆಗಿತ್ತು. ಆಗ ಸರಕಾರಕ್ಕೆ ನಾವು ಶಿಕ್ಷಣದ ಬಗ್ಗೆ ತಗಲುವ ವೆಚ್ಚವನ್ನು ನಮ್ಮ ಮೇಲೆ ಕರ ಹೇರಿ ಪಡೆಯಬಹುದೆಂದು ಸೂಚಿಸಿದೆವು. ಆದರಿಂದ ಬ್ರಿಟಿಶ ಸರಕಾರವು ಅಬಕಾರಿ ಉತ್ಪನ್ನವನ್ನು ಶಿಕ್ಷಣಕ್ಕಾಗಿ ಮೀಸಲಿರಿಸಲು ನಿರ್ಧರಿಸಿತು. ನಾವು ಕುಡುಕತನ ನಿಲ್ಲಿಸಿ ಅಬಕಾರಿ ಉತ್ಪನ್ನ ಕಡಿಮೆಯಾಗುವಂತೆ ಮಾಡಿದ್ದರೆ ಶಿಕ್ಷಣ ಖಾತೆಯ ಕಾರ್ಯ ಕುಂಠಿತವಾಗಿ ಸಮಾಜಕ್ಕೆ ಸಮಾಜವೇ ಅದೇಕೆ ರಾಷ್ಟ್ರವೇ ಅಜ್ಞಾನಾವಸ್ಥೆಯಲ್ಲಿ ಉಳಿಯಬಹುದಾದ ಭೀಕರ ಪರಿಸ್ಥಿತಿಯನ್ನು ತಪ್ಪಿಸಲು ನಮ್ಮ ಹೊಲ ಮನೆ ಆಸ್ತಿಪಾಸ್ತಿ ಮಾರಿ ಹೆಂಡರ ಮೈಮೇಲೆ ಸಾವು ಹಾಕಿದ ಗುಳಪಾಳಿ ಸಹ ಬಿಡದೆ ಕೈಗೆ ಸಿಕ್ಕಷ್ಟು ಮಾರಿ ಸರಕಾರದ ಅಬಕಾರಿ ಉತ್ಪನ್ನ ಕುಗ್ಗದಂತೆ ಕರ ತುಂಬಿ ಶಿಕ್ಷಣದ ಪ್ರಗತಿ ಕುಂಠಿತವಾಗದಂತೆ ನೋಡಿಕೊಂಡೆವು."

ಸಮಾಜ ಸುಧಾರಣೆಗಾಗಿ ಕಾನೂನು ಮಾಡುವದು ಸರಕಾರದ ಕರ್ತವ್ಯ. ಅದಕ್ಕಾಗಿ ಮದ್ಯಪಾನ ನಿರೋಧ ಕಾನೂನು ಅಗತ್ಯವೆಂದು ಮಾಡಲಾಗಿದೆ ಎಂದು ನನ್ನ ಮಿತ್ರರು ಇನ್ನೊಂದು ಮಾತನ್ನು ಹೇಳಿದರು. ಮದ್ಯಪಾನ ನಿರೋಧ ಒಂದು ಸಮಾಜ ಸುಧಾರಣೆ ಎಂದು ಹೇಳಿದರೆ ಯಾರು ಒಪ್ಪಬೇಕು? ಜಗತ್ತಿನ ಸುಧಾರಿಸಿದ ರಾಷ್ಟ್ರಗಳ ಪ್ರತಿನಿಧಿಗಳಿಗೆ ಇಂಥ ಹೇಳಿಕೆಯಿಂದ ಅವಮಾನವಾಗಲಿಕ್ಕಿಲ್ಲವೇ? ಎಂಬುದನ್ನಾದರೂ ಅವರು ಈ ಮಾತು ಹೇಳುವ ಮುನ್ನ ವಿಚಾರಿಸಬೇಕಿತ್ತು. ಅಮೇರಿಕಾ, ಬ್ರಿಟನ, ಫ್ರಾನ್ಸ, ರಸಿಯಾ, ಅರ್ಜೆಂಟಿನಾ, ಕಾನಡಾ, ಕೋಲಂಬಿಯಾ, ಆಸ್ಟ್ರೇಲಿಯಾ, ಬೆಲ್ಜಮ ರಾಷ್ಟ್ರಗಳ ಪ್ರತಿನಿಧಿಗಳು ಈ ಸಭೆಯಲ್ಲಿದ್ದಾರೆ. ಈ ಯಾವ ರಾಷ್ಟ್ರದ ಸರಕಾರವೂ ಮದ್ಯಪಾನವು ಸಮಾಜಘಾತಕ, ರಾಷ್ಟ್ರಘಾತಕ ಕೃತ್ಯವೆಂದು ಬಗೆದಿಲ್ಲ. ಸುಸಂಸ್ಕೃತ ನಾಗರಿಕ ಸಮಾಜದಲ್ಲಿ ಮದ್ಯಪಾನಕ್ಕೊಂದು ಗೌರವ ಸ್ಥಾನವಿದೆ. ಯುಕ್ತರಾಷ್ಟ್ರ ಸಂಘದ ಸಭೆ, ಭದ್ರತಾ ಮಂಡಲದ ಸಭೆ, ಎಲ್ಲೆಲ್ಲಿಯೂ ಅದರ ನಿರ್ಬಂಧದ ಗಾಳಿ ಸಹ ಇಲ್ಲ. ಅದೊಂದು ಸಮಾಜ ಕಂಟಕ ಚಟವಾಗಿದ್ದರೆ ಜಗತ್ತಿನ ಬೇರೆ ಯಾವ ರಾಷ್ಟ್ರದಲ್ಲಿಯಾದರೂ ಮದ್ಯಪಾನ ನಿರೋಧ ಕಾನೂನು ಮಾಡಲಾಗುತ್ತಿರಲಿಲ್ಲವೆ? ನಿಜವಾಗಿಯೂ ಹಿಂದುಸ್ತಾನವಲ್ಲಿಯ ಜನರ ಆರ್ಥಿಕ ಸ್ಥಿತಿ ಸುಧಾರಿಸಬೇಕು, ಎಂಬ ಇಚ್ಛೆ ಇದ್ದದ್ದಾಗಿದ್ದರೆ ಜನರಿಗೆ ಅನ್ನ ಬಟ್ಟೆ ಸಿಗುವಂತೆ ಸರ್ವರಿಗೂ ಕೆಲಸ ಒದಗಿಸಿ ಕೊಡುವ ವ್ಯವಸ್ಥೆ ಮಾಡಲಿ. ನಿರುದ್ಯೋಗಿಗಳಾಗಿದ್ದವರಿಗೆ ಜೀವನ ನಿರ್ವಾಹಧನ ಸರಕಾರದಿಂದ ಸಲ್ಲಿಸುವ ಕಾನೂನು ಮಾಡಲಿ. ಅದನ್ನೊಂದೂ ಹಿಂದುಸ್ತಾನ ಮಾಡಿದಂತೆ ನನ್ನ ತಿಳಿವಳಿಕೆಗೆ ಬಂದಿಲ್ಲ.

ಕುಡುಕಪ್ಪ: ಎಲ್ಲೀದು ಮಾಡತಾರರೀ. ಹೊಟ್ಟೆ ತುಂಬಾ ಅನ್ನ ಸಿಗುವಷ್ಟು ಕೂಲಿ ದುಡಿವವರಿಗೆ ಸಿಗುವಂತೆ ಕಾರಖಾನೆಯವರು ಕೂಲಿ ಕೊಡಬೇಕೆಂದು ನಿಧಿಸಿದ್ದರೆ ಎಷ್ಟೋ ಜನ ಮನೆಯಲ್ಲಿ ಹೆಂಡರು ಮಕ್ಕಳು ಉಪವಾಸವಿದ್ದ ಸಂಕಟ ನೋಡಿ ಅದನ್ನು ಮರೆಯಲು ಕುಡಿಯುವವರು ಕುಡಿಯುವದನ್ನು ಬಿಡಬಹುದಾಗಿತ್ತು. ಅಂಥ ವಿಧಾಯಕ ಸಾಮಾಜಿಕ ಸುಧಾರಣೆ ಮಾಡಿದ್ದರೆ ಹೇಳಲಿ. ನಾನು ಅವರಿಗೆ ಆಹ್ವಾನ ಕೊಡುವೆ.

ಅಧ್ಯಕ್ಷ: ಕುಡುಕಪ್ಪಾ, ಸಭೆಯ ಸಭ್ಯತೆ ಮೀರಿ ಮಾತಾಡಕೂಡದು.

ಕುಡುಕಪ್ಪ: ಸಭೆಯ ಸಭ್ಯತೆಯಂತೆ. ಎಲ್ಲಿದೆ ಸಭ್ಯತೆ? ಉಪವಾಸ ಸತ್ತು ದುಡಿಯುವ ಜನರಿಗೆ ಹೊಟ್ಟೆ ತುಂಬ ಸಾಲುವಷ್ಟು ಕೂಲಿ ಕೊಡುವದು ನ್ಯಾಯವಲ್ಲವೇ ಎಂದು ಕೇಳಿದರೆ ನಿಮಗೇಕೆ ಸಿಟ್ಟು?

— ಗಿ. ನೆಯ ಪ್ರತಿಕ್ಕೆ

ಅಂತಾರಾಷ್ಟ್ರೀಯ ರಾಜಕಾರಣದಲ್ಲಿ ಸ್ಪೇನಿನ ಸ್ಥಾನ

ನಿರಂಕುಶ ಆಡಳಿತೆ- ವಿರೋಧಿಗಳ ದೌರ್ಬಲ್ಯ- ಸೈನ್ಯ ಮತ್ತು ಮಠದ ಪ್ರಾಧಾನ್ಯ- ದರಿದ್ರ ಲಕ್ಷ್ಮಿಯ ತಾಂಡವ- ಭವಿತವ್ಯದ ಅಂಧಕಾರ

ಇಟಲಿಯಲ್ಲಿ ಭಗ್ನವಾದ್ದು ಜರ್ಮನಿಯಲ್ಲಿ ಉಳಿದು ಅಳಿದ ಫ್ಯಾಸಿಜಂ ತತ್ವದ ಕಿಡಿಗಳು ಇಂದು ಫ್ರಾಂಕೋವಿನ ಸರ್ವಾಧಿಕಾರಿತ್ವದಲ್ಲಿ ಧಗಧಗಿಸುತ್ತಿವೆ. ಸ್ಪೇನಿನ ಸೋಶಲಿಸ್ಟ, ಕಮ್ಯುನಿಸ್ಟ ಮತ್ತು ರಾಜಪ್ರಭುತ್ವ ಪಕ್ಷದವರೆಲ್ಲರನ್ನೂ ಜನರಲ್ ಫ್ರಾಂಕೋ ಸರ್ವದಮನಗೈದಿದ್ದಾನೆ. ಪ್ರಜೆಗಳ ದೀನಹೀನ ಜೀವನ ಮತ್ತು ಸೈನ್ಯ ಚರ್ಚುಗಳ ಪ್ರಾಬಲ್ಯ ಪರೋಪದೇಶಕಾಂಡಿತ್ವಗಳು ಎದ್ದು ಕಾಣುವವು. ಇಂಥ ಸ್ಪೇನಿನೊಡನೆ ಈಗ ಕುಬೇರರಾಷ್ಟ್ರವಾದ ಅಮೇರಿಕ ಯಾವ ರೀತಿಯ ಸಂಬಂಧ ಬೆಳೆಸಬೇಕೆಂದು ತಲೆ ಕೆಡಿಸಿಕೊಳ್ಳುತ್ತಿದೆ.

ನಿನ್ನಿನ ಮಹಾಯುದ್ಧದ ಗಗನಾಭಿ: [illegible] ನನ್ನು ಧ್ವಂಸ ಮಾಡಿ ಮುಗಿಸಿದ ನಂತರ ಯುರೋಪಿನಲ್ಲಿ ಫ್ಯಾಸಿಜಂ ತತ್ವದ ಮೂಲ ದೃಷ್ಟಾಂತವೆಂಬುದು ಜಗತ್ತಿಗೆ ವಿದಿತವಾಗಿದೆ. ಇವನು ಜರ್ಮನಿಯ ವಿಕಮೋನಾ ದ್ವಿತೀಯ ಬ್ರಹ್ಮನೆನಿಸಿದ್ದ ಹಿಟ್ಲರನೊಡನೆ ಜೊತೆಯಾದೂ ಈ ಗಾಳಿ ಬೆಂಕಿಗಳು ತಮ್ಮ ಭಯಂಕರತೆಯನ್ನು ಪ್ರದರ್ಶಿಸಿ ತಮ್ಮ ಜೀವನ ನಾಟಕದ ಅವಿದ್ವನ್ನಾಯಕರೆನಿಸಿದ್ದೂ ಇನ್ನೂ ನಮ್ಮ ನೆನೆಪಿನಲ್ಲಿ ಅರದೆ ಇವೆ. ಇಟಲಿ ಜರ್ಮನಿಗಳಲ್ಲಿ ಸ್ಥಾನಭ್ರಷ್ಟವಾದಂತಾಗಿರುವ ಫ್ಯಾಸಿಜಮ್ಮಿಂದು ಸ್ಪೇನಿನಲ್ಲಿ ತಲೆ ಮರೆಸಿಕೊಂಡಿದೆಯೆಂದರೆ ತಪ್ಪಾಗದು. ಸ್ಪೇನಿನಲ್ಲಿ ಕರ್ತುಮಕರ್ತುಮನ್ಯಥಾ ಕರ್ತುಂ ಶಕ್ತನಾದ ಫ್ರಾಂಕೋವಿನ ಆಡಳಿತೆ ಸಾಗಿರುವುದು ಅಲ್ಲಿಯ ರೋಮನ್ ಕ್ಯಾಥೋಲಿಕ್ ಚರ್ಚ ಮತ್ತು ಸೈನ್ಯಗಳ ಬ್ರಾಹ್ಮ ಕ್ಷಾತ್ರ ಬಲಗಳಿಂದಲೇ ಎಂಬುದು ಸ್ಪಷ್ಟವಿದೆ.

ಯೋಧಭಯ

ಫ್ರಾಂಕೋ ಸ್ವತಃ ತನ್ನ ಸರಕಾರವನ್ನು ತಾತ್ಕಾಲಿಕ ಸರಕಾರವೆಂದು ಕರೆದು ಕೊಳ್ಳುತ್ತಿದ್ದಾನೆ. ಅವನಿಗೆ ಸೈನ್ಯದ ಬಲವೇ ಪ್ರಧಾನವಾದದು. ಸೈನ್ಯದಲ್ಲಿ ಚೆನ್ನಾಗಿ ಉಂಡು ತಿಂದು ಹೃಷ್ಟಪುಷ್ಟರಾಗಿರುವ ಶಿಪಾಯಿಗಳು ೩ ರಿಂದ ೪ ಲಕ್ಷ ದಷ್ಟಿದ್ದಾರೆ. ಅವರಲ್ಲೂ ದೊಡ್ಡ ದೊಡ್ಡ ಅಧಿಕಾರಿಗಳಿಗೆ ವಿಶೇಷ ಸೌಕರ್ಯಗಳನ್ನು ಕೊಡಲಾಗಿದೆ. ಅವರು ಏನು ಮಾಡಿದರೂ ಸರಿ. ಸೀದಾಸಾಯದೆ ಅವರಿಗೆ ಅನ್ವಯಿಸದು. ಸರಕಾರದ ಆಜ್ಞೆಗಳನ್ನು ತಮ್ಮ ದರ್ಪದಿಂದ ಜನರ ಮೇಲೆ ಹೇರುವದರಲ್ಲಿ ಅವರನ್ನು ಬಿಟ್ಟಿಲ್ಲ. ಆದರೆ ಅವರಲ್ಲಿ ಸಾಮಾನ್ಯ ಯೋಧರ ಸಂಖ್ಯೆಗಿಂತ ದೊಡ್ಡ ಸಂಬಳದ ಅಧಿಕಾರಿಗಳೇ ಹೆಚ್ಚಾಗಿರುವುದರಿಂದ ಸರಕಾರ ಆ ಬಗ್ಗೆ ವಿಶೇಷ ವೆಚ್ಚ ಮಾಡಬೇಕಾಗಿದೆ. ಸೈನಿಕರಲ್ಲಿ ಬಹಳ ಜನರು ಅಲ್ಪಾನುಭವಿಗಳು, ಅಲ್ಪವೇತನರು, ಸಂಶಯಪಾತ್ರರು, ಅಸಜ್ಜನರು. ಆದರೆ ಶಿಸ್ತು ಉಗ್ರವಾಗಿರುವುದರಿಂದ ಆಜ್ಞೋಲ್ಲಂಘನ ಪ್ರಕರಣಗಳು ಕಡಿಮೆ. ವೇತನ ಅಲ್ಪವಾದುದರಿಂದ ಲಂಚವಂಚನೆ ಮುಂತಾದವುಗಳಿಂದ ಪ್ರಜಾಪೀಡನೆ ಮಾಡಿ ಅವರು ಹೊಟ್ಟೆ ತುಂಬಿ ಕೊಳ್ಳುವುದು ಹೆಚ್ಚು. ಪ್ರಜೆಗಳಿಗೆ ಯಾವ ವ್ಯಕ್ತಿ ಸ್ವಾತಂತ್ರ್ಯವೂ ಇಲ್ಲ. ಪತ್ರಿಕಾಸ್ವಾತಂತ್ರ್ಯವೆಂಬುದಕ್ಕೆ ಶಬ್ದರೂಪವಿಲ್ಲದೆ. ಅರ್ಥನಿಷ್ಪತ್ತಿಯಿಲ್ಲ. ಆದುದರಿಂದ ಪ್ರೀತರಿಗಿಂತ ಅಲ್ಲಿ ಭೀತರೇ ಬಹಳ. ಅಲ್ಲಲ್ಲಿ ಈ ಭೀತರೂ ಅತೃಪ್ತರೂ ಕೂಟಯೋಧರ ಬಳಗಕ್ಕೆ ಸೇರುವುದೂ ಉಂಟು. ಅಜಸ್ರವಾಗಿ ಕೂಟ ಯುದ್ಧ ನಡೆದೇ ಇದೆ. ಸೋಶಲಿಸ್ಟರೂ ರಾಜಪ್ರಭುತ್ವವಾದಿಗಳೂ ಸೇರುವ ಸಂಭವವಿದೆ. ಅವರು ಸೇರಿದರೆ ಫ್ರಾಂಕೋ ಸರಕಾರ ಹಣ್ಣಾಗ ಬಹುದೆಂದು ತರ್ಕಿಸಲಾಗಿದೆ. ಆದರೆ ಅದು ಸದ್ಯ ಆಗಲಾರದೆಂದು ಹೇಳಲಾಗುತ್ತಿದೆ.

ಸ್ವರ್ಗಾಮಿಷ

ಅಧಿಕಾರಿಗಳ ದಬ್ಬಾಳಿಕೆಯಿಂದ ಬಂದ ಕಷ್ಟ ದೈಹಿಕ ವ್ಯವಹಾರದಲ್ಲಿ ಸ್ಪೇನಿನ ಪ್ರಜೆಗಳು ದಿಗ್ಭ್ರಾಂಧರಾಗದಂತೆ ವಿದ್ಯಾಪ್ರಸಾರವೆಲ್ಲವನ್ನೂ ತಮ್ಮ ಅಂಕಿತದೊಳಗಿಟ್ಟುಕೊಂಡಿರುವ ಚರ್ಚಿನ ಪಾದ್ರಿಗಳು ದೀನ ದುಃಖಿಗಳಾದ ಪ್ರಜಾವರ್ಗಕ್ಕೆ Here little and here aftar bliss is best from age to age ಸಂಸಾರ ನಿಸ್ಸಾರ ಪರಲೋಕ ಸುಖ ಸಾರ ಎಂಬ ತತ್ವೋಪದೇಶ ಮಾಡಿ ದಾರಿದ್ರ್ಯವೆಂದು ನೋವಿನ ಸ್ಥಿತಿಯೆಂಬ ವೇದಾಂತದ ಗುಳಿಗೆಯನ್ನು ನುಂಗಿಸಿ ಸರಕಾರದ ಅತ್ಯಾಚಾರಗಳನ್ನು ಪ್ರತ್ಯಕ್ಷಪ್ರತ್ಯಕ್ಷರೀತಿಯಿಂದ ಬೆಂಬಲಿಸುತ್ತಿರುವುದು ಕಂಡು ಬರುತ್ತದೆ. ಈ ಕಾರ್ಯಕ್ರಮದಿಂದ ಚರ್ಚಿನ [illegible]


ಜೀವನ ನಿರ್ವಹಣ ಚೆನ್ನಾಗಿ ಸಾಗುವಂತಾಗಿದೆ; ಸರಕಾರ ಅವರನ್ನು ಭೂರಿ ದಕ್ಷಿಣೆ ಯಿತ್ತು ಸಾಕುತ್ತಿದೆ. ಇದರಿಂದ ಸ್ಪೇನಿನ ತರುಣ ಯೋಧ, ಮತ್ತು ಇತರ ಉದ್ಯಮಿ ವರ್ಗದ ಅನನುಭವಿಗಳು ಅಜ್ಞಾನಿಗಳೂ ಪರಾವಲಂಬಿಗಳೂ ಗುಲಾಮೀ ಮನೋವೃತ್ತಿಯವರೂ ಆಗುತ್ತ ಹೋಗಿದ್ದಾರೆ. ಆದರೆ ಅಲ್ಲಿಯ ಮಕ್ಕಳು ಮಾತ್ರ ಬಹಳ ಚುರುಕಾಗಿವೆ. ಅವು ಮುಂದೆ ಮಾನಸಿಕ ದಾಸ್ಯಕ್ಕೆ ತುತ್ತಾಗುವವಲ್ಲಾ ಎಂದು ಯಾರಾದರೂ ವಿಷಾದಿಸುವಂತಿದೆ.

ಆರ್ಥಿಕ ದುಸ್ಥಿತಿ

ಸ್ಪೇನಿನ ಆರ್ಥಿಕದುಃಸ್ಥಿತಿ ವಿಚಿತ್ರವಾಗಿದೆ. ಅಲ್ಲಿ ಅತಿಮೂಲ್ಯದ ಶ್ರೀಮಂತಿಕೆಯ ಒಡನೆ ವಸ್ತುಗಳಲ್ಲದೆ ಸಾಮಾನ್ಯರ ದಿನಬಳಕೆಯ ಹೊತ್ತಿಗೆ ಒಂದೊಂದೇ ಲಾಭಕ್ಕೆ ಹಾಲಿನಷ್ಟು ನಷ್ಟ ಕಂಡುಬಂದಿತು. ಆದುದರಿಂದ ದಿನೇ ದಿನೇ ದೇಶ ಬಡವಾಗುವುದು ನಿಶ್ಚಿತವಾಯಿತು. ಇದಕ್ಕೆಲ್ಲ ಫ್ರಾಂಕೋ ಸರಕಾರದ ಅದೂರದರ್ಶಿತ್ವವೇ ಕಾರಣ.

ಸಮರನೈತಿಕ ಪ್ರಾಧಾನ್ಯ

ಸ್ಪೇನು ತನ್ನಷ್ಟಕ್ಕೆ ತಾನು ಇರಲಾರದು. ಅದಕ್ಕೆ ಪರಸಹಾಯ ಅಗತ್ಯ ಎಂಬುದು ಹಿಂದೆ ವಿವರಿಸಿದ ಸಂಗತಿಗಳಿಂದ ಸ್ಪಷ್ಟವಾಗುತ್ತದೆ. ಅಮೇರಿಕ ಅಥವಾ ಇನ್ನಾವುದಾದರೂ ನಾಡು ನೆರವಿತ್ತರೆ ಅದು ಸುಧಾರಿಸಬಹುದು. ಅದರಿಂದ ಯಾವದಿಕ್ಕಿಲ್ಲದ ಯುರೋಪಿನ ಸರ್ವಾಧಿಕಾರಿತ್ವದಲ್ಲಿ ಸ್ಪೇನು ಇರುವತನಕ ಸಾಮಾನ್ಯಜನರ ಜೀವನದಲ್ಲಿ ಯಾವ ಏಳಿಗೆಯಾಗಲೂ ಅವಕಾಶ ಸಿಗದು. ಫ್ರಾಂಕೋ



ಪದಾರ್ಥಗಳು ಸಿಗದಾಗಿವೆ. ಅಧಿಕಾರಿವರ್ಗ ಮಾತ್ರ ಕುಬೇರ ಗರಿಯನ್ನು ಮುಟ್ಟಿದೆ. ಬಾಳುವವರ ಪಾಡು ಲೆಕ್ಕಕ್ಕೆ ಸಿಕ್ಕುವಂತಿಲ್ಲ. ಸ್ಪೇನಿನ ಪೆಸೆಟಾ ನಾಣ್ಯ ಅಗ್ಗವಾಗಿದೆ. ಅದರಿಂದ ಬಡವರ ಸ್ಥಿತಿ ಬಹಳ ಶೋಚನೀಯವೆನಿಸಿದೆ. ಮೆಟ್ಟಿದ್ದವನಿಗೆ ನೆಲವೆಲ್ಲ ಮೆತ್ತಗೆ ಎಂಬಂತೆ ಸಾವಕಾರರಿಗೆ ಸರ್ವವೂ ಸೊಗಸಾಗಿ ತೋರಬಹುದು. ಒಂದು ಡಾಲರಿಗೆ ಅಧಿಕೃತವಾಗಿ ೧೧ ಪೆಸೆಟಾ ಎಂದರೂ ಕಳ್ಳಪೇಟೆಯಲ್ಲಿ ೨೫ ಸಿಗುತ್ತವೆ. ೧೯೩೬ರ ನಂತರ ಜೀವಿಕಾವಶ್ಯಕ [illegible] ಏರಿದೆ. ಆದರೆ ಕೂಲಿಯ ದರ ನೂರಕ್ಕೆ [illegible] ರಷ್ಟು ಮಾತ್ರ ಪ್ರಗತಿ ಹೊಂದಿದೆ. ಹಾಳಿನ ಕೊರತೆಯಿಂದ ಸ್ಪೇನಿನ ಉದ್ಯಮಗಳು ಅಧೋಗತಿ ಹಿಡಿದಿವೆ. ಕಾರಖಾನೆಗಳು, ಗಣಿಗಳು ಮತ್ತು ವಿದ್ಯಾಲಯಗಳು ಉಳಿಸಿಕೊಳ್ಳಲು ಹೊಸ ಸಾಧನ ಸಾಮಗ್ರಿಗಳ ಅವಶ್ಯಕತೆಯಿದೆ. ಇದರಿಂದ ಅಲ್ಲಿಯ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ಆದುದರಿಂದ ಉದ್ಯಮಿಗಳಲ್ಲಿ ಹಲವರು ದಿವಾಳಿಯ ಹಾದಿ ಹಿಡಿದಿದ್ದಾರೆ. ವ್ಯಾಪಾರ ಇಳಿಮುಖವಾಗಿದೆ. [illegible] ಕುನಿರ್ಮಾಣದಲ್ಲಿ ಲಕ್ಷ [illegible] ಬಿಕ್ಕಿ. [illegible]

ಬಯಸುವವೆಯ ಮಾತನ್ನೇ ಎತ್ತುವದಿಲ್ಲ. ಹೀಗಿರುವುದರಿಂದ ಇಂಗ್ಲಂಡಿದ್ದರೆ ಶಾಸಕೀಯ ದರೂ ಅತನ ಸರಕಾರ ಗತಿಗೆಡುವುದು ಖಂಡಿತ. ಆದರೆ ಪಾಶ್ಚಾತ್ಯ ಮಿತ್ರರಿಗೆ ಅತನ ಸರಕಾರ ಪ್ರಜಾಸತ್ತೆಯನ್ನು ಅನುಸರಿಸುವಂತೆ ಒತ್ತಾಯಿಸುವ ಮನಸ್ಸಿಲ್ಲದಿರುವುದಾಗಿದೆ. ಅವನನ್ನು ಅವನ ಪಾಡಿಗೆ ಬಿಡಲೂ ಒಲ್ಲರು. ಏಕೆಂದರೆ, ಹಾಗೆ ಎಲ್ಲಿಯಾದರೂ ರಶಿಯಾವು ಪಾಶ್ಚಾತ್ಯ ಮಿತ್ರರ ವಿರುದ್ಧ ಯುದ್ಧ ಹೂಡಿದ್ದೇ ಆದರೆ ಸ್ಪೇನಿನಲ್ಲಿ [illegible] [illegible]

ನಗೆಯ ನೊರೆ

ದಂಡ-ಶಿಕ್ಷೆ

[illegible]

ವಾಚ್ಯ—ಕೂಚ್ಯ

[illegible]

ಏಕೀಕರಣದ ಕೆಲಸ ಸುಲಭವಾಗಿದೆ

ನಾನು ಹುಟ್ಟಾ ಆಶಾವಾದಿ

ಮಂತ್ರಿಪದದ ಹಿರಿಮೆ ನಿಮ್ಮದೇ

ಹುಬ್ಬಳ್ಳಿ—ಧಾರವಾಡ—ಗದಗುಗಳಲ್ಲಿ ಮಾನ್ಯ ದಿವಾಕರರ ಸಂಚಾರ

ಶ್ರೀ ದಿವಾಕರ ರಂಗರಾಯರು ಹಿಂದುಸ್ತಾನದ ಸರಕಾರದ ಸುದ್ದಿ ಮತ್ತು ಆಕಾಶವಾಣಿಯ ಮಂತ್ರಿಗಳಾಗಿ ನಿಯೋಜಿತರಾದ ಮೇಲೆ ತಾ ೩೧ ರಂದು ಮೊದಲ ಸಲ ಹುಬ್ಬಳ್ಳಿಗೆ ಆಗಮಿಸಿದರು. ಆ ದಿನ ಮಧ್ಯಾಹ್ನ ಬೆಂಗಳೂರಿನಿಂದ ೧—೧೫ ಕ್ಕೆ ಹುಬ್ಬಳ್ಳಿಗೆ ತಲುಪಿದರು. ಅವರ ಸ್ವಾಗತಕ್ಕಾಗಿ ಹುಬ್ಬಳ್ಳಿಯ ನಿಲ್ದಾಣದ ಮೇಲೆ ಹತ್ತೆಂಟುಸಾವಿರ ಜನ ನೆರೆದಿದ್ದರು. ಆಗ ಅವರಿಗೆ ಅಭೂತಪೂರ್ವ ಸ್ವಾಗತವಾಯ್ತು.

ನಿಲ್ದಾಣದಿಂದ ಹುಬ್ಬಳ್ಳಿಯ ಡಾಕಬಂಗ್ಲೆಗೆ ಹೋಗಿ ಮಂತ್ರಿಗಳು ಊಟಮಾಡಿ ೩॥ ವರೆಗೆ ವಿಶ್ರಮಿಸಿದರು. ಆನಂತರ ಮಂತ್ರಿಗಳು ಕ. ಪ್ರಾಂ. ಕಾಂ. ಸಮಿತಿಯ ಕಚೇರಿಯಲ್ಲಿ ಕಾಂಗ್ರೆಸ ಕಾರ್ಯಕರ್ತರ ಸಭೆ, ಹುಬ್ಬಳ್ಳಿ ನ್ಯೂ ಎಜ್ಯುಕೇಶನ್ ಸೊಸಾಯಿಟಿಯವರ ಮಾನಪತ್ರ ಸ್ವೀಕಾರ, ಹುಬ್ಬಳ್ಳಿ ನಗರಸಭೆ ಮತ್ತು ಕರ್ನಾಟಕ ವಣಿಕ್ ಸಂಘದವರಿತ್ತ ಮಾನಪತ್ರ ಸ್ವೀಕಾರ, ಅಂಜುಮಾನ ಇಸ್ಲಾಮ ಸೋಫಾದಲ್ಲಿ ಸಭೆ ಇವೇ ಮೊದಲಾದ ಕಾರ್ಯಕ್ರಮಗಳನ್ನು ತೀರಿಸಿಕೊಂಡು ಸಂಜೆಯ ೭॥ರಿಂದ ೯॥ರವರೆಗೆ ವಿಶ್ರಾಂತಿ ಪಡೆದು ಮತ್ತೆ ರಾತ್ರಿ ೯-೪೦ಕ್ಕೆ ಹುಬ್ಬಳ್ಳಿ ಗಾಂಧಿಚೌಕಿನಲ್ಲಿ ಸಾರ್ವಜನಿಕ ಸಭೆಗೆ ಬಂದು ಅಲ್ಲಿ ೧ ತಾಸಿನ ವರೆಗೆ ಭಾಷಣ ಮಾಡಿದರು.

ಲಾದವುಗಳಿಗೆ ನಮ್ಮಂಥವರಿಗೆ ಮಾನಪತ್ರ ಕೊಡಲು ಕಾಯದೆವಶಾತ್ ಅವಕಾಶವಿರುತ್ತಿರಲಿಲ್ಲ. ಇರಲಿ; ಈಗ ನಾನು ಮಂತ್ರಿಯೆಂದು ಉತ್ತರಕೊಡಬೇಕಾಗಿದೆ. ನಾನು ಇದೇ ನಗರದ ನಾಗರಿಕ. ಈಗ ಕೇಂದ್ರ ಮಂತ್ರಿಯಾಗಿ ಬಂದಿರುವದರಿಂದ ನನಗೆ ಮಾನಪತ್ರ ಸಲ್ಲಿಸಿದ್ದು ನನ್ನ ಕಾರ್ಯಕ್ಷೇತ್ರವಾದ ಈ ನಗರಕ್ಕೆ ಭೂಷಣವೇ. ಮರವು ಎಲೆ, ಹೂ, ಕಾಯಿಗಳಿಂದ ಅಂದ ಚಂದವನ್ನು ಬೀರುತ್ತಿದ್ದರೂ ಅದಕ್ಕೆ ಬೇರು ಎಂಬುದೊಂದು ಮಹತ್ವದ ಆಧಾರ ಭೂತವಾದ ಭಾಗವಿದ್ದೇ ಇದೆ. ಹಾಗೆ ಈ ನಗರವು ನನಗೆ ತಾಯಿಬೇರಾಗಿದೆ. ನನ್ನ ಎಲ್ಲ ಕಾರ್ಯಗಳಲ್ಲಿಯೂ ನೀವು ಸಹಾಯ ನೀಡುತ್ತ ಬಂದಿದ್ದೀರಿ. ಮಂತ್ರಿ ಪದವು ಹಿರಿಮೆಯೇ ಆಗಿದ್ದರೆ ನಿಮ್ಮೆಲ್ಲರ ನೆರವಿನಿಂದಲೇ ನನಗೆ ಈ ಹಿರಿಮೆ ಬಂದಿದೆ.

ಸೇವಾತೃಪ್ತಿ ಮಾತ್ರ ನನ್ನದು

ನೀವು ಮಾನಪತ್ರದಲ್ಲಿ ಮಂಡಿಸಿದ ಮಾತುಗಳೂ ಸಮಸ್ಯೆಗಳೂ ನನಗೆ ಹೊಸವೇನಲ್ಲ. ಅವುಗಳ ನಿವಾರಣೆಗಾಗಿ ಈ ವರೆಗೆ ನಾನು ನಿಮ್ಮ ಸಹಕಾರದಿಂದ ಹೋರಾಡಿದ್ದೂ ಉಂಟು. ನನ್ನ ಸೇವೆ ನಿಮ್ಮ ಗಮನಕ್ಕೆ ಬಾರದೆ ಹೋಗಿರಬಹುದು. ಇಲ್ಲವೆ ನಿಮ್ಮ ಅಪೇಕ್ಷೆಗೆ ತಕ್ಕಂತೆ ನಾನು ಸೇವೆ ಸಲ್ಲಿಸಿರಲಿಕ್ಕೂ ಇಲ್ಲ. ಆದರೆ ಏನೇನೋ



ಮಾನ್ಯ ದಿವಾಕರರು ಒಂದನೇ ಜಾನೇವರಿ ದಿನ ಮುಂಜಾನೆ ಹುಬ್ಬಳ್ಳಿಯಲ್ಲಿ ಗೃಹರಕ್ಷಕ ದಳಕ್ಕೆ ಭೆಟ್ಟಿ ಕೊಟ್ಟಾಗ

ಹುಬ್ಬಳ್ಳಿ ನಗರ ಸಭೆಯಲ್ಲಿ

ತಾ. ೩೧ರಂದು ಸಂಜೆ ೫॥ಗೆ ಶ್ರೀ ದಿವಾಕರ ರಂಗರಾಯರಿಗೆ ಹುಬ್ಬಳ್ಳಿಯ ನಗರ ಸಭೆಯವರು ಮಾನಪತ್ರ ಅರ್ಪಿಸಿದರು. ಶ್ರೀ ಸಿದ್ದಪ್ಪಣ್ಣ ಕಂಬಳಿ, ಶ್ರೀ ಎಚ್. ಡಿ. ಘೋಡಕೆ, ಶ್ರೀ ಮಿರ್ಜಿ ವಕೀಲ, ಶ್ರೀ ಶಾಂತಪ್ಪಣ್ಣ ಎಳಮೇಲಿ ಮೊದಲಾದವರು ವ್ಯಾಸಪೀಠದ ಮೇಲೆ ಮಂಡಿಸಿದ್ದರು. ನಗರ ಸಭಾಧ್ಯಕ್ಷರಾದ ಶ್ರೀ ತಂಬದರು ಮಾನಪತ್ರವನ್ನು ಓದಿದರು. ಇದೇ ಸ್ಥಳದಲ್ಲಿ ಕರ್ನಾಟಕ ವಣಿಕ್ ಸಂಘದವರಿತ್ತ ಮಾನಪತ್ರವನ್ನು ಅದರ ಅಧ್ಯಕ್ಷರಾದ ಮಹಾಬಳೇಶ್ವರಪ್ಪನವರು ಓದಿದರು. ಈ ಎರಡೂ ಮಾನಪತ್ರಗಳಿಗೆ ಉತ್ತರಕೊಡುತ್ತ ಮಾನ್ಯಮಂತ್ರಿ ಶ್ರೀ ರಂಗರಾವ ದಿವಾಕರರು ಹೀಗೆ ಮೊದಲಾಗಿ ಹೇಳಿದರು.

ಹುಬ್ಬಳ್ಳಿ ನಗರವೇ ನನಗೆ ತಾಯ್ಬೇರು

ನನಗೆ ಮಾನಪತ್ರಗಳನ್ನು ಸ್ವೀಕರಿಸುವ ಸರತಿ ಬಂದಿದ್ದು ತೀರ ವಿರಳ. ಸರಕಾರದ ವಿರುದ್ಧ ನಡೆದ ಹೋರಾಟದಲ್ಲಿ ನಾನಿದ್ದ ಕಾರಣ ಸರಕಾರದ ಅಂಗಸಂಸ್ಥೆಗಳಾದ ನಗರ ಸಭೆ, ಲೋಕಲ್ ಬೋರ್ಡು ಮೊದ

ನನ್ನ ಕೈಲಾದಷ್ಟು ಸೇವೆ ಸಲ್ಲಿಸುತ್ತ ಬಂದಿದ್ದೇನೆ. ಈಗ ನನಗೆ ದೊರೆತ ಅಧಿಕಾರದಿಂದ ನನ್ನ ಸೇವಾ ಕಾರ್ಯವು ಅಧಿಕವಾದರೆ ಅದರ ಶ್ರೇಯಸ್ಸು ಈ ಅಧಿಕಾರ ಸ್ಥಾನಕ್ಕೆ ಮತ್ತು ಸೇವೆ ಮಾಡಿದ ತೃಪ್ತಿ ಮಾತ್ರ ನನಗೆ.

ನನಗೆ ಅಮಿತ್ರರಿದ್ದಾರೆ, ಆದರೆ ಶತ್ರುಗಳಿಲ್ಲ

ಕರ್ನಾಟಕ ಏಕೀಕರಣದ ವಿಷಯದಲ್ಲಿ ಹುಬ್ಬಳ್ಳಿಯಲ್ಲಿ ಒಂದು ದಿಲ್ಲಿಯಲ್ಲಿ ಇನ್ನೊಂದು ರೀತಿಯಲ್ಲಿ ನಾನು ಹೇಳುತ್ತೇನೆಂದು ಗುಲ್ಲೆದ್ದಿತು. ಇದು ನನ್ನ ದುರ್ದೈವವೆನ್ನಬೇಕು. ತತ್ಸಕ್ಕೆ ಅಂಟಿ ನಡೆದ ಹಟಮಾರಿ ಸ್ವಭಾವ ನನ್ನದು. ಸಮಯ ಸಾಧಕತೆಯು ನನಗೆ ಗೊತ್ತಿಲ್ಲ ನನಗೆ ಅಮಿತ್ರರಿದ್ದಾರೆ, ಆದರೆ ಶತ್ರುಗಳಿಲ್ಲ. ಮೈತ್ರಿಭಾವವು ಕಡಮೆಯುಳ್ಳವರು ನನ್ನ ಅಮಿತ್ರರು. ರಾಜಕೀಯ ಕ್ಷೇತ್ರದಲ್ಲಿ ವಿರೋಧಿಗಳಾಗಿ ಅನೇಕ ವರ್ಷ ಕೆಲಸ ಮಾಡಿದ ಶ್ರೀ. ಸಿದ್ದಪ್ಪಣ್ಣ ಕಂಬಳಿಯವರು ನಾನು ಏಕೀಕರಣ ವಿಚಾರದಲ್ಲಿ ಈ ರೀತಿ ಉದ್ಗಾರ ತೆಗೆದಿಲ್ಲವೆಂದು ಜನರ ಮುಂದೆ ಹೇಳಿದರಾಗಿ ನನಗೆ ತಿಳಿದಿದೆ.

(೬ ನೆಯ ಪುಟ ನೋಡಿರಿ)

ಅ. ಭಾ. ಶಿಕ್ಷಣ ಸಮ್ಮೇಲನ

ಮೈಸೂರಲ್ಲಿ ತಾ ೨೯ ರಂದು ಅಪರಾಹ್ನ ೩॥ ಗಂಟೆಗೆ ೨೪ ನೆಯ ಅ. ಭಾ. ಶಿಕ್ಷಣ ಸಮ್ಮೇಲನವು, ಮೈಸೂರಿನ ದಿವಾಣರಾದ ಸರ್ ರಾಮಸ್ವಾಮಿ ಮುದಲಿಯಾರರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು ಮತ್ತು ೩ ದಿನ ಸೇರಿ ತಾ ೩೧ ರಂದು ಮುಗಿದಿತು. ಮೈಸೂರು ಮಹಾರಾಜರು ಸಮ್ಮೇಲನವನ್ನು ಉದ್ಘಾಟಿಸಿದರು. ಈ ಸಮ್ಮೇಲನವು ಮೈಸೂರಲ್ಲಿ ನಡೆದದ್ದು ೨ ನೆಯ ಬಾರಿ.

ಸ್ವಾಗತಾಧ್ಯಕ್ಷರಾದ ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು ಎಲ್ಲರನ್ನೂ ಬರಮಾಡಿಕೊಳ್ಳುತ್ತ ತಮ್ಮ ಭಾಷಣದಲ್ಲಿ ೬ ರಿಂದ ೧೪ ವರ್ಷಗಳ ವರೆಗಿನ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಲಕ್ಷ್ಯಪೂರೈಸತಕ್ಕದ್ದೆಂದು ಹೇಳಿ ಭಾರತ ಸರಕಾರದ "ಸಾಂಸ್ಕೃತಿಕ ವಿಶ್ವಸ್ತ ಮಂಡಲ"ವನ್ನು ಸ್ವಾಗತಿಸಿದರು.

ಮೈಸೂರ ಮಹಾರಾಜರು, ತಮ್ಮ ಸಂಸ್ಥಾನದಲ್ಲಿ ಅ. ಭಾ. ಶಿಕ್ಷಣ ಸಮ್ಮೇಲನ ನೆರೆದದ್ದಕ್ಕೆ ಸಂತೋಷ ವ್ಯಕ್ತಪಡಿಸಿ, ಈ ಸಮ್ಮೇಲನವನ್ನು ಉದ್ಘಾಟಿಸುತ್ತ, ಅಪಾರವೂ ಚಿರನೂತನವೂ ಆದ ಮಾನವ ಜ್ಞಾನ ನಿಧಿಯನ್ನು ಸ್ತ್ರೀ ಪುರುಷರೆಲ್ಲರಿಗೂ ದೊರಕಿಸಿ ಕೊಟ್ಟು ಅವರಲ್ಲಿ ಸ್ವತಂತ್ರ ಹಾಗೂ ಸಾರಾಸಾರ ವಿಚಾರ ಶಕ್ತಿಯನ್ನು ಪ್ರಚೋದಿಸುವದೇ ಶಿಕ್ಷಣದ ಮೂಲ ಉದ್ದೇಶವೆಂದು ಅಪ್ಪಣೆ ಕೊಡಿಸಿದರು.

ಆಮೇಲೆ ಅ. ಭಾ. ಶಿಕ್ಷಣ ಮಹಾ ಮಂಡಲದ ಅಧ್ಯಕ್ಷರಾದ ಡಾ. ಅಮರನಾಥ ಝಾ, ಎಂ. ಎ., ಡಿ. ಲಿಟ್., ಅವರು ಮಹಾರಾಜರನ್ನು ಅಭಿನಂದಿಸುತ್ತ, ಭಾರತದ ಆರ್ಥಿಕ ಸುಧಾರಣೆಗೆ ಈಗ ಅಗ್ರಸ್ಥಾನವಿವೆಯಾದರೂ ಶಿಕ್ಷಣ ಸಮಸ್ಯೆಯನ್ನು ಒಂದು ಅರೆಗಳಿಗೆಯೂ ಅಲಕ್ಷಿಸಬರುವಂತಿಲ್ಲವೆಂದೂ ಹೊಟ್ಟೆಗಿಲ್ಲದ ಪಾಡುಪಡುವ ಉಪಾಧ್ಯಾಯರು ವಿದ್ಯೆಗಿಂತ ಅವಿದ್ಯೆಯನ್ನೇ ಪ್ರಸಾರಪಡಿಸಬಹುದೆಂದೂ ಹೇಳಿ ಮೈಸೂರು ಶಿಕ್ಷಣ ಪ್ರಪಂಚದಲ್ಲಿಯೂ ಎಲ್ಲರಿಗಿಂತ ಮುಂದರಿಯುವ ಆಶೆಯನ್ನು ವ್ಯಕ್ತಪಡಿಸಿದರು.

ಅಧ್ಯಕ್ಷ ಭಾಷಣ

ಆಮೇಲೆ ಅಧ್ಯಕ್ಷರಾದ ಸರ್ ರಾಮಸ್ವಾಮಿ ಮುದಲಿಯಾರರು ಭಾಷಣ ಮಾಡುತ್ತ, ಇಂಗ್ಲೀಷ ಭಾಷೆಯ ಪ್ರಾಮುಖ್ಯತೆಯನ್ನೂ ಪ್ರಯೋಜನವನ್ನೂ ವಿವರಿಸಿ, ಶಿಕ್ಷಣದಿಂದ ಮಾನವ ಕೋಟಿಯ ಕಲ್ಯಾಣವೂ ನಾಶವೂ ಕೂಡಿಯೇ ಆಗಬಲ್ಲದೆಂದೂ ಜ್ಞಾನವನ್ನೂ ವಿಜ್ಞಾನವನ್ನೂ ವಿನಾಶಕ್ಕೆ ಬಳಸದೆ ಜೀವನ ವಿಕಾಸಕ್ಕೆ ಬಳಸಬೇಕಾದುದು ವಿದ್ಯಾವಂತರ ಹೊಣೆಯಾಗಿದೆಯೆಂದೂ ಹೇಳಿದರು. ಆಮೇಲೆ ಭಾರತ ಸಂಸ್ಕೃತಿಯ ಪ್ರಾಚೀನತೆಯನ್ನೂ ಶ್ರೇಷ್ಠತೆಯನ್ನೂ ವಿವರಿಸಿ, ಸಂಸ್ಕೃತಿಯ ಪುನರುದ್ಧಾರ ಕಾರ್ಯವು ಶಿಕ್ಷಣ ಸಮ್ಮೇಲನದಿಂದಾಗಬೇಕೆಂದು ಅರುಹಿದರು. ಶಿಕ್ಷಣದಲ್ಲಿ ಉದ್ಯೋಗಗಳನ್ನು ಕಲಿಸುವದು ಮಹತ್ವದ್ದೆಂದೂ ಅದರಿಂದ ರಾಷ್ಟ್ರದ ಉದ್ಯೋಗಗಳ ಪ್ರಗತಿ ಸಾಧಿಸುವದೆಂದೂ ಔದ್ಯೋಗೀಕರಣವು ಸಾಧಿಸದಿದ್ದರೆ ನಾವು ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಹಿಂದುಳಿದು ಕಷ್ಟಾರ್ಜಿತ ಸ್ವಾತಂತ್ರ್ಯಕ್ಕೆ ಬೆಲೆ ಇಲ್ಲದಂತಾಗುವದೆಂದೂ ಶಿಕ್ಷಣ ತಜ್ಞರ ಸಲಹೆ ಪಡೆಯದೆ ಮಂತ್ರಿಗಳು ಶಿಕ್ಷಣ ಕ್ರಮದಲ್ಲಿ ಫಕ್ಕನೆ ಮಾರ್ಪಾಟು ಮಾಡುವದು ತುಂಬ ಗಂಡಾಂತರದ್ದೆಂದೂ ಎಚ್ಚರಿಕೆ ಹೇಳಿದರು.

ಪ್ರದರ್ಶನ

ನಂತರ ಪ್ರದರ್ಶನ ಭವನದಲ್ಲಿ ಏರ್ಪಡಿಸಿದ ಶಿಕ್ಷಣ, ಕಲಾ, ಕೈಗಾರಿಕೆಯ ಪ್ರದರ್ಶನವು ಡಾ. ಅಮರನಾಥಝಾರವರಿಂದ ತೆರೆಯಲ್ಪಟ್ಟಿತು. ಡಾ. ಝಾ ಅವರು ತಮ್ಮ ಭಾಷಣದಲ್ಲಿ, ಪ್ರಯೋಜಕ ಕಲೆಗಳು, ಕುಶಲ ಕಲೆಗಳು ಎಂದು ಕಲೆಯನ್ನು ಇಬ್ಬಗೆಯಾಗಿ ವಿಂಗಡಿಸಲಾಗುತ್ತದೆ. ವಸ್ತುತಃ ಈ ಬಗೆಯ ಭೇದವೇ ಇಲ್ಲ. ಕಲೆಯಿಂದ ಜೀವನಕ್ಕೆ ಪ್ರಯೋಜನವಾಗಬೇಕಾದರೆ ಅದು ಕೌಶಲ್ಯದಿಂದ ಕೂಡಿರಲೇಬೇಕಾಗುವದು ಎಂದು ಮೊದಲಾಗಿ ಪ್ರತಿಪಾದಿಸಿದರು. ಭಾಷೆಯು ಮಾತ್ರ, ಇನ್ನೂ ನಮ್ಮ ಜನಕ್ಕೆ ಪರಭಾಷೆಯ ಮೋಹ ಹೋಗಿಲ್ಲವೆಂದೂ ಶಿಕ್ಷಣದಲ್ಲಿ ಪರ ಭಾಷೆಯ ಬಳಕೆ ಅಯುಕ್ತವೆಂದೂ ನುಡಿದರು.

ಪ್ರದರ್ಶನದ ವೇಳೆಯಲ್ಲಿ ಸಂಗೀತ ನೃತ್ಯಾದಿ ವಿವಿಧ ವಿನೋದಗಳಿದ್ದವು.

ಮಹತ್ವದ ಗೊತ್ತುವಳಿಗಳು

ಆಸಾಮದ ಗವರ್ನರರಾದ ಸರ್ ಅಕಬರ ಹೈದರಿಯವರ ಆಕಾಲಿಕ ನಿಧನದ ಬಗ್ಗೆ ದುಃಖ ಸೂಚಕ ಗೊತ್ತುವಳಿಯನ್ನು ಮೌನದಿಂದ ೨ ನಿಮಿಷ ಎದ್ದುನಿಂತು ಸ್ವೀಕರಿಸಿದರು. ನಂತರ ಕೆಳಗಿನ ಮಹತ್ವದ ಗೊತ್ತುವಳಿಗಳನ್ನು ಸ್ವೀಕರಿಸಲಾಯಿತು.

(೧) ಶಿಕ್ಷಕರಲ್ಲಿ ಅಸಂತುಷ್ಟತೆ ಹೆಚ್ಚುತ್ತಿದ್ದು ಈ ಬಗ್ಗೆ ಪ್ರಾಂತಿಕ ಮತ್ತು ಸಂಸ್ಥಾನಗಳ ಸರಕಾರಗಳು ಕೈಕೊಂಡ ನಿರ್ಣಯಗಳು ಅಷ್ಟು ಪರಿಣಾಮಕಾರಿಯಾಗಿಲ್ಲ. ಶಿಕ್ಷಕರಿಗೆ ಸಮಾಜದಲ್ಲಿ ಯೋಗ್ಯ ಸ್ಥಾನಮಾನ ದೊರೆವಂತೆ ಸರಕಾರಗಳು ಮಾಡತಕ್ಕ ಕಾರ್ಯವು ಇನ್ನೂ ಬಹಳಿದೆ.

(೨) ಸರಕಾರೀ ಮತ್ತು ಸರಕಾರೇತರ ಶಾಲೆಗಳ ಶಿಕ್ಷಕರ ಸಂಬಳದಲ್ಲಿ ಭೇದವಿರಲೇಕೂಡದು.

(೩) ಶಾಲೆಯ ವ್ಯವಸ್ಥಾಪಕ ಮಂಡಲದಲ್ಲಿ ಅಥವಾ ಸಲಹಾ ಮಂಡಲದಲ್ಲಿ ಶಿಕ್ಷಕರಿಗೂ ಪ್ರಾತಿನಿಧ್ಯವಿರಬೇಕು.

(೪) ಶಿಕ್ಷಕರಿಗೆ ನಿವೃತ್ತಿ ವೇತನ, ಒತ್ತಾಯದ ವಿಮಾ ಯೋಜನೆ, ಇವೇ ಮೊದಲಾದವನ್ನು ಕೂಡಲೇ ಕಾರ್ಯರೂಪಕ್ಕಿಳಿಸತಕದ್ದು.

ಹೊಸದಾಗಿ ರಚಿತವಾದ ಅ. ಭಾ. ಕಾಂಗ್ರೆಸ ಕಾರ್ಯಸಮಿತಿ

ಕಾಂಗ್ರೆಸ ಅಧ್ಯಕ್ಷರಾದ ಡಾ. ಪಟ್ಟಾಭಿ ಸೀತಾರಾಮಯ್ಯನವರು ಜಾನೇವರಿ ತಾ. ೩ ರಂದು ತಾವು ಹೊಸದಾಗಿ ರಚಿಸಿಕೊಂಡ ಕಾರ್ಯಸಮಿತಿಯ ಹೆಸರುಗಳನ್ನು ಪ್ರಸಿದ್ಧಿಸಿದ್ದು ಅವು ಕೆಳಗಿನಂತಿವೆ:—

(೧) ಪಂ. ಜವಾಹರಲಾಲ ನೆಹರು (೨) ಸರದಾರ ವಲ್ಲಭಭಾಯಿ ಪಟೇಲ (೩) ಮೌ. ಅಬುಲ ಕಲಂ ಅಝಾದ (೪) ರಫಿ ಅಹಮ್ಮದ ಕಿಡ್ವಾಯಿ (೫) ಜಗಜೀವನರಾಮ (೬) ಪಂಡಿತಗೋವಿಂದ ವಲ್ಲಭಪಂತ (೭) ಸರದಾರ ಪ್ರತಾಪಸಿಂಗ (೮) ಡಾ. ರಾಜೇಂದ್ರ ಪ್ರಸಾದ (೯) ಡಾ. ಪ್ರಫುಲ್ಲ ಚಂದ್ರ ಘೋಷ (೧೦) ಶ್ರೀ ಶಂಕರರಾವ ದೇವ (೧೧) ಶ್ರೀಮತಿ ಸುಚೇತಾ ಕೃಪಲಾನಿ (೧೨) ಶ್ರೀ ಕಲಾ ವೆಂಕಟರಾವ ಮದ್ರಾಸ ಕಂದಾಯ ಮಂತ್ರಿ (೧೩) ಶ್ರೀ. ಎಸ್. ಕೆ. ಪಾಟೀಲ, ಅಧ್ಯಕ್ಷ ಮುಂಬಯಿ. ಪ್ರಾಂ. ಕಾಂ. ಸಮಿತಿ (೧೪) ಶ್ರೀ ಎನ್. ಜಿ. ರಂಗಾ ಅಧ್ಯಕ್ಷ ಆಂಧ್ರ ಪ್ರಾಂ. ಕಾಂಗ್ರೆಸ ಸಮಿತಿ (೧೫) ಶ್ರೀ. ಕಾಮರಾಜ ನಾಡರ, ಅಧ್ಯಕ್ಷ ತಮಿಳನಾಡ ಕಾಂ. ಸಮಿತಿ (೧೬) ಶ್ರೀ. ಸಿದ್ಧಲಿಂಗಪ್ಪಾ, ಅಧ್ಯಕ್ಷ ಕರ್ನಾಟಕ ಪ್ರಾಂ. ಕಾಂ. ಸಮಿತಿ (೧೭) ಶ್ರೀ. ದೇವೇಶ್ವರ ಶರ್ಮ, ಅಧ್ಯಕ್ಷ, ಅಸಾಮ ಪ್ರಾಂ. ಕಾಂ. ಸಮಿತಿ, (೧೮) ಶ್ರೀ ಗೋಕುಲಭಾಯಿ ಭಟ್ಟ, ಅಧ್ಯಕ್ಷ, ರಾಜಪುತಾನಾ ಪ್ರಾ. ಕಾಂ. ಸಮಿತಿ (೧೯) ಶ್ರೀ ರಾಮ ಸಹಾಯ, ಗ್ವಾಲೇರ್ ಮಾಳವಾ.

ಸರದಾರ ವಲ್ಲಭಭಾಯಿ ಪಟೇಲರು ಕೋಶಾಧಿಕಾರಿಗಳಾಗಿಯೂ ಶ್ರೀ. ಕಲಾ ವೆಂಕಟರಾವ ಮತ್ತು ಶ್ರೀ. ಶಂಕರರಾವ ದೇವ ಅವರು ಪ್ರಧಾನ ಕಾರ್ಯದರ್ಶಿಗಳಾಗಿಯೂ ನಿಯುಕ್ತರಾಗಿದ್ದಾರೆ.

ಸರ್ ಅಕ್ಬರ ಹೈದರಿಯವರ ನಿಧನ

ಆಸಾಮದ ಗವರ್ನರರಾದ ಸರ ಅಕಬರ ಹೈದರಿಯವರು ಡಿಸೆಂಬರ ತಾ. ೨೮ ರಂದು ಸಾಯಂಕಾಲ ಹೃದಯವಿಕಾರದಿಂದ ನಿಧನ ಹೊಂದಿದರು. ಇವರು ಮಣಿಪೂರ ಸಂಸ್ಥಾನದ ಇಂಫಾಲದಿಂದ ೩೦ ಮೈಲು ದೂರದಲ್ಲಿ ಬೇಟಿಗೆ ಹೋಗಿ ಶಿಬಿರದಲ್ಲಿ ಬೀಡಾರ ಬಿಟ್ಟಾಗ ಹೃದಯಕ್ರಿಯೆ ನಿಂತಿತೆಂದು ವರದಿಯಾಗಿದೆ. ಇವರಿಗೆ ೫೪ ವರ್ಷಗಳಾಗಿದ್ದವು. ಮರಣಕಾಲಕ್ಕೆ ಬಳಿಗೆ ಅವರ ಪತ್ನಿ, ಪುತ್ರ, ಮಗಳು, ಅಳಿಯ ಇಷ್ಟು ಜನರಿದ್ದರು.

ಇವರು ನೇಕನಾಮದಾರ ನವಾಬ ಸರ ಅಕಬರ ಹೈದರಿಯವರ ಮಕ್ಕಳು. ಮುಂಬಯಿ ವಿಶ್ವವಿದ್ಯಾಲಯದಲ್ಲಿಯೂ ಆಕ್ಸಫರ್ಡ ಬಾಲಿಯಾ ಕಾಲೇಜದಲ್ಲಿಯೂ ಶಿಕ್ಷಣ ಪಡೆದು ೧೯೨೦ ರಲ್ಲಿ ಆಯ. ಸಿ. ಎಸ್. ಆದರು. ೧೯೩೧ರ ಲಂಡನ ೨ ನೆಯ ದುಂಡು ಮೇಜಿನ ಪರಿಷತ್ತಿಗೆ ಇವರು ಹಿಂದೀ ಸಂಸ್ಥಾನಗಳ ಶಿಷ್ಟ ಮಂಡಲದ ಸಹ ಕಾರ್ಯದರ್ಶಿಗಳಾಗಿ ಹೋಗಿದ್ದರು; ೧೯೩೪ ರಿಂದ ೧೯೪೫ ರ ವರೆಗೆ ಹಿಂದುಸ್ತಾನ ಸರಕಾರದ ಕಾರ್ಯದರ್ಶಿಗಳಾಗಿದ್ದರು, ೧೯೪೫ ರಲ್ಲಿ ಹಿಂದೀ ಪೂರೈಕೆ ಶಿಷ್ಟಮಂಡಳದ ಧುರೀಣರಾಗಿ ಬ್ರಿಟನ್ನಕ್ಕೆ ಹೋಗಿದ್ದರು. ೧೯೧೮ ರಲ್ಲಿ ಇವರು ಸ್ವೀಡನ್ನದ ಕು. ಸಿಗ್ರಿದ್ ವೆಸ್ಟಲಿಂಗ ಎಂಬವರನ್ನು ಲಗ್ನವಾದರು.

ಸ್ವತಂತ್ರ ಭಾರತದ

ಪ್ರಥಮ ಭಾರತೀಯ ಸೇನಾಪತಿ: ಜನರಲ್ ಕಾರ್ಯಪ್ಪ

ಮೃದುಮನಸ್ಕ— ನಿರಹಂಕಾರಿ— ಸೈನಿಕರಿಗೆ ಪರಮಪ್ರಿಯ— ದೇಶಭಕ್ತ

ದಂಡಿನವರೆಂದರೆ ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಒಂದು ಬಗೆಯ ಭೀತಿ, ಒಂದು ಬಗೆಯ ದ್ವೇಷ. ಆದರೆ ಅದು ಹಳೆಯ ಮಾತಾಗಿದೆ, ಆಗಬೇಕು. ಆಗ ನಮ್ಮ ಸ್ವಾತಂತ್ರ್ಯಾಪೇಕ್ಷೆಯನ್ನು ಹತ್ತಿಕ್ಕುವ ಸಾಧನವಾಗಿದ್ದ ಹಿಂದೀ ಸೈನ್ಯವಿಂದು ನಮ್ಮ ಸ್ವಾತಂತ್ರ್ಯದ ರಕ್ಷಕತ್ವವನ್ನು ವಹಿಸಿಕೊಂಡಿದೆ. ಸುಯೋಜ ಕಾಲಿವೆಯ ಪಶ್ಚಿಮಕ್ಕೆ ನಮ್ಮೀ ಸೈನ್ಯವೇ ಅತ್ಯುತ್ತಮ ಸಮರಶಕ್ತಿಯೆಂದು ಇಂದು ಧಾರಾಳವಾಗಿ ಹೇಳಬಹುದು. ನಾಳೆ ತಾ. ೧೫ ರಿಂದ ಈ ಸೈನ್ಯದ ಮುಖ್ಯ ಸೇನಾಧಿಪತ್ಯವನ್ನು ಒಬ್ಬ ಭಾರತೀಯ ಸೇನಾನಿ ವಹಿಸಿಕೊಳ್ಳುವ. ಆದರಿಂದಾಚೆಗೆ ಪರಕೀಯ ಶಾಸನದ ಕಿಂಚಿತ್ ಛಾಯೆಯೂ ನಮ್ಮೀ ಭಾರತೀಯ ಸೈನ್ಯದ ಮೇಲೆ ಉಳಿಯದು.

ಶತಮಾನಗಳ ದಾಸ್ಯದ ನಂತರ ಈ ಮಹಾ ರಾಷ್ಟ್ರದ ಸ್ವತಂತ್ರ ಸರಕಾರದ ಸೈನ್ಯದ ಮುಖ್ಯ ಸೇನಾಪತಿಯಾಗುವ ಈ ಪುಣ್ಯಶಾಲಿ ಯಾರು, ಈ ಗೌರವಪಾತ್ರ ಯಾರು? ಅವರು ಕೊಡಗಿನವರು, ಕನ್ನಡಿಗರು, ಹೆಸರು ಕಾರ್ಯಪ್ಪ ಎಂದು ನಾವು ಬಲ್ಲೆವು. ಬ್ರಿಟಿಶ ಸೈನ್ಯದಲ್ಲೆ ಸಾಮಾನ್ಯ ತರಗತಿಯಿಂದ ಮೇಲೇರುತ್ತಹೋಗಿ ಬ್ರಿಗೇಡಿಯರ್ ದರ್ಜೆಯನ್ನು ಮುಟ್ಟಿದಾಗ ಇವರು ನಮಗೆ ಬಳುವಳಿಯಾಗಿ ಬಂದರೆಂದೂ ನಾವರಿತಿದ್ದೇವೆ. ಆದರೆ ಈ ಅನತಿಪ್ರಸಿದ್ಧ ಸೈನಿಕ ಎಂಥ ಮನುಷ್ಯ? ಅವನ ನಡೆನುಡಿ ವಿಚಾರಗಳು ಎಂಥವು?

ಹಿಂಸೆ–ಅಹಿಂಸೆ

ವೃತ್ತಪತ್ರಗಳಲ್ಲಿ ಮೊಟ್ಟ ಮೊದಲಬಾರಿ ಅವರ ಹೆಸರು ಗಣ್ಯವಾಗಿ ಬೆಳಕಿಗೆ ಬಂದದ್ದು ಭಾರತ ಸ್ವಾತಂತ್ರ್ಯಲಾಭವಾದ ಕೆಲ ದಿನಗಳ ನಂತರ,ಲಂಡನ್ನಿನ ಹಿಂದೀಯರ ಮುಂದೆ ಅವರು ಹೇಳಿದರೆಂದು ಹೇಳಲಾದ ಕೆಲ ಮೊನೆಮಾತುಗಳಿಂದಾಗಿ. ಸ್ವತಃ ಗಾಂಧೀಜಿ ಕೂಡ ಅವರ ಮಾತುಗಳನ್ನು ಗಮನಕ್ಕೆ ತೆಗೆದುಕೊಂಡು ಆ ಬಗ್ಗೆ ಎರಡು ಕಟುಶಬ್ದಗಳನ್ನಾಡಿದ್ದರು. ಏಕೆಂದರೆ, ಅಹಿಂಸೆಯಲ್ಲಿ ಹುರುಳಿಲ್ಲ, ಭಾರತವನ್ನು ಒಂದುಗೂಡಿಸುವ ಶಕ್ತಿ ಭಾರತೀಯ ಸೈನ್ಯಕ್ಕೆ ಮಾತ್ರ ಇದೆಯೆಂದು ಅವರು ಅಂದಿದ್ದಾಗಿ ವಂದಿಯಾಗಿತ್ತು. ಅಹಿಂಸೆಯೆ ಸರ್ವಸ್ವವಾಗಿದ್ದ ಗಾಂಧೀಜಿ ಇದನ್ನು ಹೇಗೆ ಪಿಟ್ಟೆನ್ನದೆ ಸೈರಿಸಿಯಾರು?

ಆದರೆ ಪ್ರಸಿದ್ಧ ಸುದ್ದಿಗಾರರಾದ ಶ್ರೀ ಪಿ. ಡಿ. ಟಂಡನ್ನರು ಕೆಲ ತಿಂಗಳ ಹಿಂದೆ ಅಲಹಾಬಾದಿನಲ್ಲಿ ಜನರಲ್ ಕಾರ್ಯಪ್ಪನವರನ್ನು ಕಂಡಾಗ ಈ ಇಡಿ ಸನ್ನಿವೇಶದ ಮೇಲೆ ಸರಿಯಾದ ಬೆಳಕು ಬಿತ್ತು. "ಅಕ್ಟೋಬರ್ ೧೯೪೭.ರಲ್ಲ ನಾನು ಲಂಡನ್ನಿನಲ್ಲಿದ್ದೆನಲ್ಲ," ಜನರಲ್ ಕಾರ್ಯಪ್ಪನವರು ಟಂಡನ್ನರಿಗೆ ವಿವರಿಸಿದರಂತೆ. "ಆಗ ಭಾರತೀಯರಿತ್ತ ಒಂದು ಚಹಾಕೂಟದಲ್ಲಿ ನಾನು ಮಾತಾಡಬೇಕಾಯಿತು. ಆಗ ನಾನೆಂದೆ, ಜನರೇನೋ ತಿಳಿದುಕೊಂಡಿದ್ದಾರೆ, ಹಿಂದೀ ಸೈನ್ಯ ಹೊಟ್ಟೆಪಾಡಿನ ಯೋದ್ಧರಿಂದ ತುಂಬಿಹೋಗಿದೆ, ಎಂದು. ಅವರಿಂದ ಜನರ ಮನಸು ಸೈನಿಕರ ಬಗ್ಗೆ ಕಲುಷಿತವಾಗಿದೆ. ದೇಶಬಾಂಧವರನ್ನು ಗುಂಡಿಕ್ಕುವದಕ್ಕಾಗಿಯೆ ಅದರ ಅಸ್ತಿತ್ವ, ಅದು ದೇಶದ ಹಣಕಾಸಿನ ಹೃದಯಪ್ರದೇಶವನ್ನು ಕೊರೆಯುವ ಹುಣ್ಣು, ಎಂದು ಭಾವಿಸುವವರುಂಟು. ಆದರೆ ಇನ್ನಾದರೂ ನಾವು ದೇಶದ ನಿಜವಾದ ಸೇವಕರಲ್ಲೆಂದು ಜನರು ಬಗೆಯದಿರಲೆಂದು ಅಗ್ರಹಪೂರ್ವಕವಾಗಿ ಹಾರೈಸುತ್ತೇನೆ, ಎಂದು ನಾನು ಹೇಳಿದೆ.

"ಅಹಿಂಸೆಯನ್ನು ಕುರಿತು ನಾನಂದುದಿಷ್ಟು: ಇಂದಿನ ಅಂತರ್‌ರಾಷ್ಟ್ರೀಯ ಪರಿಸ್ಥಿತಿಯಲ್ಲಿ, ಒಂದು ರಾಷ್ಟ್ರ ಇನ್ನೊಂದನ್ನು ಸಂಶಯದೃಷ್ಟಿಯಿಂದ ನೋಡುವಾಗ ಭಾರತದ ರಕ್ಷಣೆಗಾಗಿ ಅಹಿಂಸೆಯ ಮೇಲೆ ಭರವಸೆ ಹಾಕಿದರೆ ನಡೆಯದೆಂದು ನನ್ನೆಣಿಕೆ. ಜಗತ್ತಿನ ಪರಿಸ್ಥಿತಿ ಸುಧಾರಿಸುವ ವರೆಗೆ ನಾವು ಬಲಿಷ್ಠರೂ ಸುಸಂರಕ್ಷಿತರೂ ಆಗಿರುವದು ಅವಶ್ಯ."

ಗಾಂಧೀ ಸಂದರ್ಶನ

ಇಷ್ಟು ಹೇಳಿ ಕಾರ್ಯಪ್ಪನವರು ಜೇಬಿನಿಂದ ಒಂದು ಕಾಗದದ ಮಡಿಕೆಯನ್ನು ಹೊರಗೆಳೆದರು. ಆಶ್ಚರ್ಯದ ಸಂಗತಿ, ಅದು ಗಾಂಧೀಜಿಯ ಕೈಬರಹದಲ್ಲಿತ್ತು. ಲಂಡನ್ನಿನಿಂದ ಬಂದವರೆ ಅವರು ಗಾಂಧೀಜಿಯನ್ನು ಕಂಡು ಮಾತಾಡಿದ್ದರು.

ಗಾಂಧೀಜಿಯ ಬಗ್ಗೆ ಕಾರ್ಯಪ್ಪನವರ ಗೌರವಾದರ ಮತ್ತಾರದಕ್ಕಿಂತ ಲೇಶವೂ ಕಡಮೆಯಾದುದಲ್ಲ. ಈ ಒಂದು ತುಣುಕು ಕಾಗದವನ್ನು ಅವರು ತಮ್ಮ ಹೃದಯದ ಸಮೀಪದಲ್ಲಿ ಜೋಪಾನವಾಗಿ ಇಟ್ಟುಕೊಂಡಿದ್ದುದೇ ಇದಕ್ಕೆ ಸಾಕ್ಷಿ.

ಅಹಿಂಸಾ ಸೈನ್ಯದ ಆ ಸೇನಾನಿಗೂ ಸಹಿಂಸಾ ಸೈನ್ಯದ ಈ ಸೇನಾನಿಗೂ ಆಗ ಅಷ್ಟಿಷ್ಟು ವಾದವಾದಂತೆ ಕಾಣುತ್ತದೆ. "ಅಹಿಂಸೆಯ ಮೇಲೆ ನೀವು ಹೇಳಿದಿರೆಂದು ಭಾವಿಸಲಾದ ನುಡಿಗಳ ಬಗ್ಗೆ ನಾನು ಎರಡು ಮಾತು ಬರೆದಿದ್ದೆ, ಗೊತ್ತೆ?" —ಎಂದು ಗಾಂಧೀಜಿ ಆ ಕಾಗದದ ತುಣುಕಿನ ಮೇಲೆ ಬರೆದಿದ್ದರು. ಅದು ಅವರ ಮೌನದ ದಿನವಾಗಿತ್ತು. ಕಾರಣ ಅವರು ಕಾಗದದ ಮೇಲೆ ಪೂರ್ವಪಕ್ಷ ಪ್ರಾರಂಭಿಸಿದ್ದರು.

ಕಾರ್ಯಪ್ಪನವರಿಗೆ ಅದು ಗೊತ್ತಿತ್ತು. ಅವರು ಬಾಪುವಿಗೆ ಬಾಗಿ ತಮ್ಮ ಉತ್ತರವನ್ನು ಸಾದರಪಡಿಸಿದರು: "ನಿಮಗೆ ಗೊತ್ತಿದೆ ಬಾಪೂಜಿ, ಸೈನಿಕ ಜನರೆಂದರೆ ಈ ದೇಶದಲ್ಲಿ ಬಹಳ ಹೀನಾಯ. ಸೈನ್ಯದಲ್ಲಿದ್ದಾರೆಂದಾಕ್ಷಣ ಅವರು ಕ್ರೂರರೆಂದು ಜನ ಬಗೆಯುತ್ತಾರೆ. . . . ನಮ್ಮ ಸೈನ್ಯದಲ್ಲಿ ಶಿಸ್ತು ನಿಷ್ಠೆ ಇರುವಂತೆ ನೋಡಿಕೊಳ್ಳುವದು ನಮ್ಮ ಕರ್ತವ್ಯ. ಹೊರಗಿನವರು ಕೈಮಾಡಿದರೆ ದೇಶದ ರಕ್ಷಣೆಗೆ ಅವರು ಸಿದ್ಧರಾಗಿರಬೇಕು. ನಾವಿಷ್ಟು ಮಾಡದೆ ಹೋದರೆ ದೇಶವನ್ನು ಅನಾಥವಾಗಿ ಮಾಡಿದಂತಾದೀತು. ನಿಮ್ಮ ಆಶೀರ್ವಾದ ಬಲದಿಂದ ಜಗತ್ತೆಲ್ಲವೂ ಅಹಿಂಸಾದೃಷ್ಟಿಯಿಂದ ವಿಚಾರ ಮಾಡಲು ಕಲಿಯುವ ವರೆಗೆ, ನಾವು ಬಲಿಷ್ಠವಾದ ಸೈನ್ಯವನ್ನು ರಾಷ್ಟ್ರ ರಕ್ಷಣೆಗೆ ಅನುಗೊಳಿಸಿಡಬಹುದೆಂದು ನಂಬಿದ್ದೇನೆ."

ಸ್ವಾಭಾವಿಕವಾಗಿ ಗಾಂಧೀಜಿ ಈ ಸೇನಾಪತಿಯೊಡನೆ ಒಡಂಬಡಲಿಲ್ಲ. ಅವರು ನಕ್ಕು ಉತ್ತರ ಬರೆದರು:–" ಇನ್ನೊಮ್ಮೆ ಇದಕ್ಕಿಂತ ಅನುಕೂಲ ಪ್ರಸಂಗದಲ್ಲಿ ಕೂಡಿದಾಗ ಈ ಮಾತು ಚರ್ಚಿಸೋಣಂತೆ!"

ಆದರೆ ದೈವೇಚ್ಛೆ ಬೇರೆಯೆ ಇತ್ತು. ಅಹಿಂಸೆಯ ಸೇನಾನಿಯೊಡನೆ ಈ ಸೇನಾನಿ ಆ ಮೇಲೆ ಭೆಟ್ಟಿಯಾಗುವದು ಸಾಧ್ಯವಾಗಲಿಲ್ಲ. ಆದರೆ ಕಾರ್ಯಪ್ಪನವರು ಗಾಂಧೀಜಿಯ ಆ ಆಲೇಖವನ್ನು, ಅವರೊಡನೆ ಕಳೆದ ಆ ಒಂದುತಾಸಿನ ನೆನಪನ್ನು ಅತ್ಯಂತ ಅಮೂಲ್ಯವೆಂದು ಪರಿಗಣಿಸುತ್ತಾರೆ. ಅದೊಂದು ಬಗೆಯ ಶಿಕ್ಷಣವೇ ಆಗಿತ್ತೆಂದು ಅವರೆನ್ನುತ್ತಾರೆ ಅಹಿಂಸೆಯನ್ನು ಕುರಿತು ಮಹಾತ್ಮರಿಂದ ಅವರು ಹಲವು ಮಾತುಗಳನ್ನು ಕಲಿತುಕೊಂಡರು.

ಮೃದು ಸ್ವಭಾವಿ

ಸಹಜವಾಗಿ, ಕಾರ್ಯಪ್ಪನವರು ಸಶಸ್ತ್ರ ಬಲದ ಮೇಲಿನ ತಮ್ಮ ವಿಶ್ವಾಸವನ್ನೇನೂ ಕಳೆದುಕೊಂಡಿಲ್ಲ; ಕಳೆದುಕೊಂಡಿದ್ದರೆ ಅವರೀಗ ಏನಾಗಿರುವರೋ ಅದಾಗಿರುತ್ತಿದ್ದಿಲ್ಲವೆನ್ನಿ. ಆದರೆ ಅವರು ಸಶಸ್ತ್ರಬಲದ ವಿಶ್ವಾಸಿಗಳೆಂದಾಕ್ಷಣ ಕ್ರೂರ ಮನುಷ್ಯರೆಂದು ತಿಳಿಯಬಾರದು. ಅವರು ನಿಜವಾಗಿ ಮೃದುಮನಸಿನ ಸ್ನೇಹಲ ಸ್ವಭಾವದವರು. ಅವರು ದರ್ಪವನ್ನು ಅರಿಯರು. ಮಾತ್ರವಲ್ಲ, ರಸಿಕರು ಕೂಡ ಅಹುದು.

"ಪಶ್ಚಿಮ ಸೈನ್ಯಾಧಿಪತ್ಯದ ಮುಖ್ಯ ಕಚೇರಿಯನ್ನು ಅಲಹಾಬಾದಿಗೆ ತರಬೇಕೆಂಬ ವಿಚಾರವಿದೆ ಆದರೆ ಈ ಸೆಕೆಯನ್ನು ಇಳಿಸಲು ಏನಾದರೂ ಮಾಡಲಾರಿರೇನು ನೀವು? ಆಗ ಇದು ದಿವ್ಯಸ್ಥಳವಾದೀತು ನೋಡಿರಿ!" ಎಂದು ಟಂಡನ್ನರನ್ನು ಅವರು ಚೇಷ್ಟೆಮಾಡಿದರಂತೆ.

"ನೀವು ಮಿಲಿಟರಿ ಜನ, ಮಾಡಿದರೆ ನೀವೇ ಏನಾದರೂ ಮಾಡಬೇಕು. ಸುರು ಮಾಡಿರಲ್ಲ ಈ ದುಷ್ಟ ಸೂರ್ಯನ ಮೇಲೊಂದು ದಾಳಿ!" ಎಂದರು ಟಂಡನ್.

ಜನರಲ್ ಕಾರ್ಯಪ್ಪನವರು ಮನವಾರೆ ನಕ್ಕರು. "ಅದು ಸಾಧ್ಯವಾಗಿದ್ದಿದ್ದರೆ ಒಂದು ಕೈ ನೋಡುತ್ತಿದ್ದೆವು ಈ ವಿಜ್ಞಾನಿಗಳು ಏನಾದರೂ ಮಾಡುವರೋ ನೋಡಬೇಕು."

ಮಮತೆಯ ಸೇನಾನಿ

ಕಾರ್ಯಪ್ಪನವರೆಂದರೆ ಸೈನಿಕರಿಗೆ ತುಂಬ ಮಮತೆ–ಸುಮ್ಮನಲ್ಲ. ಕೈಕೆಳಗಿನವರನ್ನು ಅವರು ನಡೆಸಿಕೊಳ್ಳುವ ರೀತಿ ಹಾಗಿದೆ. ಎಷ್ಟೇ ಕೆಳದರ್ಜೆಯ ಸೈನಿಕನಾಗಿರಲಿ ಅವನನ್ನು ಒಳ್ಳೇ ಆತ್ಮೀಯತೆಯಿಂದ ಮಾತಾಡಿಸುತ್ತಾರೆ ಅವರು. ಬೆನ್ನು ಚಪ್ಪರಿಸಿ ಹುರಿದುಂಬಿಸಿ ಕಳಿಸುತ್ತಾರೆ ಅವರಲ್ಲಿ ಯಾವತರದ ಜಾತೀಯ–ಪ್ರಾಂತೀಯ ಪಕ್ಷಪಾತವೂ ಇಲ್ಲ.

"ನೀವು ಕೊಡಗಿನ ಬ್ರಾಹ್ಮಣರೋ ಬ್ರಾಹ್ಮಣೇತರರೋ?" ಎಂದವರನ್ನು ಕೇಳಿ ನೋಡಿರಿ.

"ಅದೊಂದೂ ನಾನರಿಯೆ" ಎಂದು ಕಾರ್ಯಪ್ಪನವರು ಒಡನೆ ಉತ್ತರಿಸುವರು. "ನಾನು ಹಿಂದೀಯ, ಆದ್ಯಂತ ಹಿಂದೀಯ. ನನ್ನ ಜೀವಮಾನದಲ್ಲಿ ಒಂದೇ ಕರ್ತವ್ಯವನ್ನು ಇಟ್ಟುಕೊಂಡಿದ್ದೇನೆ. ಅದೆಂದರೆ ದೇಶಸೇವೆ. ನನ್ನ ಸೈನಿಕರನ್ನು ನಾನು ಗೆಳೆಯರಂತೆ ನಡೆಸಿಕೊಳ್ಳುತ್ತೇನೆ. ಭಾರತದ ಸೈನ್ಯವನ್ನು ಜಗತ್ತಿನಲ್ಲೆ ಪ್ರಬಲ ಸೈನ್ಯವನ್ನಾಗಿ ಮಾಡಬೇಕೆಂಬುದೇ ನನ್ನ ಮಹತ್ವಾಕಾಂಕ್ಷೆ."

ಕಾರ್ಯಪ್ಪನವರಿಗೆ ಹಿಂದೀ ಯುವಕ ಸೈನಿಕರ ಮೇಲೆ ಪರಿಪೂರ್ಣ ವಿಶ್ವಾಸವಿದೆ. "ಈಗ ಸೈನ್ಯದಲ್ಲಿ ಸೇರುತಿರುವ ಯುವಕರ ಬಗ್ಗೆ ನಿಮ್ಮ ಅಭಿಪ್ರಾಯವೇನು?" ಎಂದು ಕೇಳಿದರೆ ಅವರನ್ನುವರು:

"ಏನು ಕೇಳುತ್ತೀರಿ, ಹಿಂದೀ 'ಜವಾನ'ರು ಪ್ರಚಂಡರು. ಸರಳ ಜೀವಿಗಳು, ಸುಲಭ ತೃಪ್ತರು. ಅವರ ದೇಶನಿಷ್ಠೆ ವಿಧೇಯತೆಗಳೂ ಕಡಿಮೆಯಲ್ಲ ರಂಡೀಗಂಡರಾ, ರಣರಂಗಕ್ಕೆ ಹೋದರೆ ಹುಲಿಗಳು, ಹೊರಗೆ ಬಂದರೆ ಕುರಿಮರಿಗಳಲ್ಲೋ ನೀವು! ಎಂದು ನಾನು ಅನ್ನುತಿರುವದುಂಟು, ಅವರಿಗೆ.

"ಒಳ್ಳೆ ಸಜ್ಜನರು ನೋಡ್ರಿ ನಮ್ಮ ಹುಡುಗರು. ನನ್ನ 'ಜವಾನ'ರಿಗಾಗಿ ನಾನು ಬೇಕಾದ ತ್ಯಾಗ ಮಾಡಲು ಸಿದ್ಧ, ಅವರೂ ನ್ನನ್ನು ಕೈಬಿಡಲಿಕ್ಕಿಲ್ಲೆಂದು ನನಗೆ ಖಾತ್ರಿಯಿದೆ."



ತಾ ೧೫ ಕ್ಕೆ ಅಧಿಕಾರಗ್ರಹಣ

ರಾಜಕಾರಣದಿಂದ ದೂರ

ದೇಶಾಭಿಮಾನ ಇಷ್ಟಿದ್ದರೂ ಜನರಲ್ ಕಾರ್ಯಪ್ಪನವರು ರಾಜಕಾರಣದಿಂದ ಸಾಧ್ಯವಿದ್ದಷ್ಟು ದೂರ ಇರುತ್ತಾರೆ. "ನಮ್ಮನ್ನು ರಾಜಕಾರಣದಲ್ಲಿ ಎಳೆಯಲಿಕ್ಕೆ ಬೇಕಾದಷ್ಟು ಪ್ರಯತ್ನ ಮಾಡುವವರಿದ್ದಾರೆ. ಆದರೆ ಸೈನ್ಯಕ್ಕೂ ಈ ರಾಜಕಾರಣಕ್ಕೂ ಏನೂ ಸಂಬಂಧವಿಲ್ಲೆಂದು ನಾನು ಸೀದಾ ಸೀದಾ ಹೇಳಿಬಿಡುತ್ತೇನೆ. ಜನರು ಆರಿಸಿ ಕಳಿಸಿದ ಸರಕಾರದ ಆಜ್ಞಾಧಾರಕರು ನಾವು. ಸರಕಾರದ ನಿರ್ಣಯಗಳನ್ನು ಕಾರ್ಯಕಾರಿಯಾಗಿ ಮಾಡುವದು ನಮ್ಮ ಕೆಲಸ. ಆ ಪಕ್ಷ ಈ ಪಕ್ಷ ಎಂಬ ಭೇದ ನಮಗಿಲ್ಲ."

ಅವರು ತಮ್ಮ ಸೈನಿಕರಿಗೂ ಅಧಿಕಾರಿಗಳಿಗೂ ಕೊಡುವ ಉಪದೇಶವಿಷ್ಟೆ: "ನಮಗೆ ಎರಡೇ 'ಸ್ತಾನ'ಗಳಿವೆ–ಒಂದು ಹಿಂದುಸ್ತಾನ ಇನ್ನೊಂದು ಫೌಜಿಸ್ತಾನ. ನಾವು ಮೊದಲೂ ಹಿಂದೀಯರು ಮತ್ತೂ ಹಿಂದೀಯರು, ಕೊನೆಯ ಶ್ವಾಸ ಹೋಗುವವರೆಗೂ ಹಿಂದೀಯರು."

ಸುಂದರ ಆಜಾನುಬಾಹು ಜನರಲ್ ಕಾರ್ಯಪ್ಪನವರಿಗೆ ನಾಳೆ ಜನವರಿ ೨೮ ಕ್ಕೆ ೪೯ ವರ್ಷ ತುಂಬುತ್ತವೆ. ಕೊಡಗಿನಲ್ಲಿಯೂ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿಯೂ ವ್ಯಾಸಂಗ ಮಾಡಿದ ಅವರು ವಿಸ್ತಾರವಾದ ಜ್ಞಾನ ಭಾಂಡಾರವನ್ನು ಸಂಪಾದಿಸಿದಾರೆಂದು ಅವರೊಡನೆ ತಾಸರ್ಧತಾಸು ಮಾತಾಡುವಷ್ಟಕ್ಕೆ ತಿಳಿದುಹೋಗುವದು. ಅವರು ಇಂಗ್ಲೀಷ ಹಿಂದುಸ್ತಾನಿ ಎರಡನ್ನೂ ಇಂಗ್ಲೀಷರ ಸ್ವರಭಾದಲ್ಲೆ ಮಾತಾಡುವರು ಗಾಲ್ಫ, ಕುದುರೆ ಸವಾರಿ ಇವರ ಮೆಚ್ಚುಗೆಯ ಆಟಗಳು ಅಂಚೆ ಚೀಟಿ ಸಂಗ್ರಹದ ಹುಚ್ಚು ಇದೆ ನಮ್ಮ ಸೈನ್ಯದಲ್ಲಿ ಹಲವು ಸುಧಾರಣೆಗಳಾಗಬೇಕೆಂದು ಅವರಿಗೆ ಗೊತ್ತಿದೆ. ಆದರೂ ಅವರು ಆ ಬಗ್ಗೆ ಸರಕಾರದ ಮೇಲೆ ಅಸಂತೋಷಪಟ್ಟುಕೊಂಡಿಲ್ಲ. ಸರಕಾರವನ್ನು ಎದುರಿಸಿರುವ ಪ್ರಚಂಡ ಸಮಸ್ಯೆಗಳ ಅರಿವು ಅವರಿಗಿದೆ. ಇವು ಸರಿಪಟ್ಟ ಮೇಲೆ ಸೈನ್ಯದ ಸುಧಾರಣೆಗೆ ಅವಕಾಶ ದೊರೆತೇದೊರೆವುದೆಂದು ಅವರು ನಂಬಿದ್ದಾರೆ.

ಪಂಡಿತ ಜವಾಹರಲಾಲ ನೆಹರೂ ಅವರು ಬೆಂಗಳೂರಿಗೆ ಕಳೆ ತಿಂಗಳು ಬೆಟ್ಟಿ ಕೊಟ್ಟಾಗ ನುಗ್ಗಿ ಬರುವ ಜನಸಂದಣಿಯನ್ನು ಹಿಡಿತದಲ್ಲಿಟ್ಟುಕೊಳ್ಳಲಾರದ ಶೀಘ್ರ ಕೋಪಿ ಪೋಲೀಸ್ ಅಧಿಕಾರಿಯೊಬ್ಬ ಸಣ್ಣಗೆ ಲಾಠಿ ಪ್ರಯೋಗ ಮಾಡಿದಂತೆ. ಅದು ಹೇಗೋ ಪಂಡಿತರ ದೃಷ್ಟಿಗೆ ಬಿತ್ತು. ಅವರು ತಮ್ಮ ಮೋಟಾರು ಆ ಅಧಿಕಾರ ಪತ್ತಿರ ಹಾಯುತಿದ್ದಾಗ ಹೊರಗೆ ತಲೆಹಾಕಿ ಕೈಬೀಸಿ ಅಧಿಕಾರಿಯ ಬೆನ್ನಿಗೊಂದು ಛಟುಕೊಟ್ಟು ಮುಂದೆ ಸಾಗಿದರು.

-ಒಬ್ಬ ಪ್ರತ್ಯಕ್ಷದರ್ಶಿ

ನೆಗಡಿ — ಅತಿ ಚಪಲ ರೋಗ :

ರೋಗಾಣುಗಳಿಂದ ಉತ್ಪತ್ತಿ-ಪ್ರಾಣಿಗಳಿಗೆ ನಿರುಪದ್ರವಿ

"ಯಾಕೆ ಗೈರು ಹಾಜರಿ?"

"ನೆಗಡಿಯಾಗಿತ್ತು."

ಈ ಪ್ರಶ್ನೆ ಮತ್ತು ಈ ಉತ್ತರ ಪ್ರತಿಯೊಂದು ದೇಶದಲ್ಲಿ ಪ್ರತಿಯೊಂದು ಕಾಲದಲ್ಲಿ, ಶಾಲೆಯಲ್ಲಿ, ಕಾರಖಾನೆಯಲ್ಲಿ, ಕಚೇರಿಯಲ್ಲಿ ಪ್ರತಿವರ್ಷ ಕೇಳಬರುತ್ತದೆ. ರೋಗವೇನೋ ಕ್ಷುಲ್ಲಕ. ಆದುದರಿಂದ ಯಾರೂ ಅದರ ಕಡೆ ಗಮನ ಕೊಡುವದಿಲ್ಲ. ಆದರೆ ಅದರಿಂದಾಗುವ ಆರ್ಥಿಕ ಹಾನಿ ಅಪಾರವಾಗಿದೆಯೆಂದು ಕೇಳಿ ನೀವು ಬೆರಗಾಗಬಹುದು. ಈ ದೇಶದಲ್ಲಿ ಅಂಕೆ ಸಂಖ್ಯೆಗಳಿಗೆ ಬರಗಾಲ. ಆದರೆ ಇಂಗ್ಲಂಡಿನಲ್ಲಿ ಗಣಿತಜ್ಞರು ಲೆಕ್ಕ ಹಾಕಿ ವರ್ಷಕ್ಕೆ ಕಾರಖಾನೆಗಳಲ್ಲಿ ನೆಗಡಿಯ ಮೂಲಕ ಆಗುವ ಗೈರ ಹಾಜರಿಯ ಪ್ರಮಾಣ ಜಡ್ಡಿನ ಮೂಲಕ ಆಗುವ ಒಟ್ಟು ಗೈರ ಹಾಜರಿಯಲ್ಲಿ ನೂರಕ್ಕೆ ೨೫ ರಷ್ಟಿದೆಯೆಂದು ನಿರ್ಧರಿಸಿದ್ದಾರೆ. ಅರ್ಥಾತ್ ಅಲ್ಲಿ ವರ್ಷಕ್ಕೆ ೪ ಕೋಟಿ ಕೆಲಸದ ದಿನಗಳು ನೆಗಡಿಯಿಂದ ನಷ್ಟವಾಗುತ್ತವೆ. ಭಾರತದಲ್ಲಿ ಈ ಪ್ರಮಾಣ ಹೆಚ್ಚಾಗಿರಬೇಕಲ್ಲದೆ ಕಡಿಮೆಯಾಗಿರುವದು ಸಾಧ್ಯವಿಲ್ಲ.

ಇದಲ್ಲದೆ ಮತ್ತೆಮತ್ತೆ ನೆಗಡಿಯಾಗುವದರಿಂದ ಕ್ಷಯರೋಗದಷ್ಟು ಭಯಾನಕ ರೋಗಗಳಿಗೆ ಅದು ಎಡೆ ಮಾಡಿಕೊಡುವದೆಂದು ತಿಳಿದುಬಂದಿದೆ. ಆದರೆ ಇಷ್ಟು ಸಾರ್ವತ್ರಿಕ ಮತ್ತು ಇಷ್ಟು ಚಿಲ್ಲರೆ ರೋಗಕ್ಕೆ ಇಂದಿಗೂ ಔಷಧವಿಲ್ಲ ಎಂಬ ಮಾತು ಆಶ್ಚರ್ಯಕರವಲ್ಲವೆ?

ಹೌದು, ಆಶ್ಚರ್ಯಕರ. ಆದರೆ ಇನ್ನು ಮುಂದೆ ಈ ವಿಲಂಬ ಸಲ್ಲದೆಂದು ಹಲವು ವೈದ್ಯಕ ತಜ್ಞರು ಈಗ ಭರದಿಂದ ಪ್ರಯೋಗಗಳನ್ನು ಪ್ರಾರಂಭಿಸಿದ್ದಾರೆ. ಇಂಗ್ಲಂಡಿನ ಡಾ. ಕ್ರಿಸ್ಟೋಫರ ಅಂಡ್ರೂಜರು ಅವರಲ್ಲಿ ಪ್ರಮುಖರು.

ಮನುಷ್ಯರಿಗೆ ಮಾತ್ರ ಬರುವ ರೋಗ

ಆದರೆ ಡಾ. ಅಂಡ್ರೂಜರ ದಾರಿಯಲ್ಲಿ ಹಲವು ವಿಘ್ನಗಳು ಬಂದವು. ಮೊದಲನೆಯದಾಗಿ ನೆಗಡಿಯ ರೋಗಾಣುಗಳು ಅತ್ಯಂತ ಸೂಕ್ಷ್ಮ ಜೀವಿಗಳು. ಈಗಿರುವ ಅತ್ಯಂತ ಸೂಕ್ಷ್ಮವಾದ ಸೂಕ್ಷ್ಮದರ್ಶಕಗಳಿಗೆ ಕೂಡ ಅವು ಗೋಚರವಾಗುವದಿಲ್ಲ. ಎರಡನೆಯದಾಗಿ, ಇಲಿ, ಹೆಗ್ಗಣ ಮೊದಲಾದ ಪ್ರಾಣಿಗಳಿಗೆ ನೆಗಡಿಯ ಜಂತುಗಳು ಏನೂ ಮಾಡುವದಿಲ್ಲ. ಮನುಷ್ಯ ಮತ್ತು ಚಿಂಪಾಂಝಿ ಇವೆರಡಕ್ಕೆ ಮಾತ್ರ ಅವು ನಾಟುವವು. ಚಿಂಪಾಂಝಿ ತೀರ ಅಪರೂಪ ಪ್ರಾಣಿ. ಆದುದರಿಂದ ಅವರು ಮನುಷ್ಯ ಪ್ರಾಣಿಗಳ ಮೇಲೆಯೆ ಪ್ರಯೋಗ ಮಾಡಬೇಕಾಗುವದು.

ಸುದೈವದಿಂದ ಅನೇಕ ಮನುಷ್ಯ ಪ್ರಾಣಿಗಳು ಸ್ವಸಂತೋಷದಿಂದ ನೆಗಡಿ ಹತ್ತಿಸಿಕೊಂಡು ಡಾಕ್ಟರರ ಪರೀಕ್ಷೆಗೆ ಸಹಾಯ ಮಾಡಲು ಮುಂದೆ ಬಂದರು. ನೆಗಡಿಯಾದವರ ಮೂಗಿನ ಸುಂಬಳ ತೆಗೆದು ಸೋಸಿ ಅಣುಗಳನ್ನು ಈ ಸ್ವಸ್ಥರಾದ "ಸ್ವಯಂ ಸೇವಕ"ರ ಮೇಲೆ ಪ್ರಯೋಗಿಸಲಾಯಿತು. ಸೋಸಲು ಕ್ರಮಾನುಗತವಾಗಿ ಸೂಕ್ಷ್ಮತರವಾಗುತ್ತ ಹೋಗುವ ಜಾಳಿಗೆಗಳನ್ನು ಉಪಯೋಗಿಸಿದಾಗ, ಈ ನೆಗಡಿಯ ಅಣುಗಳ ಆಕಾರ ಒಂದು ಮಿಲಿಮಿಟರಿನ ೧೦೦೦೦ ಅಂಶದಷ್ಟು ಚಿಕ್ಕದಾಗಿದೆಯೆಂದು ಕಂಡುಹಿಡಿಯಲ್ಪಟ್ಟಿದೆ.

ಜೀವಾಣುಗಳಿಂದ ಬರುವ ರೋಗವೆಂದಬಳಿಕ ನೆಗಡಿಯೆಂಬದು ಸೋಂಕು ರೋಗವೆಂದು ಸಿದ್ಧವಾಗುತ್ತದೆ. ಹಾದಿಬೀದಿಯಲ್ಲಿ, ಮೋಟಾರು ರೇಲುಗಳಲ್ಲಿ ಅದು ನಿಮ್ಮಲ್ಲಿ ಪ್ರವೇಶಿಸಬಹುದು. ಆದುದರಿಂದ ಪ್ರಯೋಗಾಪೇಕ್ಷಿಗಳಾಗಿ ಬರುವ "ಸ್ವಯಂಸೇವಕ"ರಲ್ಲಿ ಮೊದಲು ನೆಗಡಿಯ ಸೋಂಕು ಇದೆಯೋ ಎಂದು ಕಂಡುಹಿಡಿಯಲು ಅವರನ್ನು ಮೂರು ದಿನಗಳ ವರೆಗೆ ಕೊರಂಟಾಯಿನಿನಲ್ಲಿ ಹಾಕುವರು. ಬಳಿಕ ಅವರನ್ನು ಪ್ರಯೋಗ ಶಾಲೆಗೆ ತರಲಾಗುವದು. ಅವರ ಆಹಾರ, ವಾಯು ಅಥವಾ ಬೇರಾವ ವಸ್ತುವಿನ ಮೂಲಕ ನೆಗಡಿ ಪ್ರವೇಶಿಸದಂತೆ ಎಚ್ಚರ ವಹಿಸಲಾಗುವದು. ಆ ಮೇಲೆ ಹದಿನೆಂಟು ಇಪ್ಪತ್ತು ಜನರ ದೇಹದಲ್ಲಿ ಒಮ್ಮೆಲೇ ನಾನಾ ಪ್ರಮಾಣದಲ್ಲಿ ಈ ಜೀವಾಣುಗಳನ್ನು ಪ್ರವೇಶಗೊಳಿಸಿ ಪರಿಣಾಮಗಳನ್ನು ಪರೀಕ್ಷಿಸುವರು.

ಕೆಲವು ಫಲಿತಾಂಶಗಳು

ಈ ಎಲ್ಲ ಪ್ರಯೋಗಗಳಿಂದ ಕಂಡುಬಂದ ಸಂಗತಿಗಳಿವು : ಮಳೆಗಾಲ ಚಳಿಗಾಲಗಳಿಗಿಂತ ಬಿಸಿಲುಗಾಲದಲ್ಲಿ ನೆಗಡಿಯ ಉಪಟಳ ಕಡಿಮೆ. ಕಾರಣ ಗೊತ್ತಿಲ್ಲ.

ಕನಿಷ್ಠ ಎರಡು ಬಗೆಯ ನೆಗಡಿಯ ಜೀವಾಣುಗಳಿವೆ. ಒಂದು ಸೀನುಗಳನ್ನುಂಟು ಮಾಡುತ್ತದೆ, ಇನ್ನೊಂದು ಗಂಟಲು ನೋವನ್ನುಂಟು ಮಾಡುತ್ತದೆ. ಇವುಗಳನ್ನು ಬೇರ್ಪಡಿಸಲು, ಗುರುತಿಸಲು ಸಾಧ್ಯವಾಗಿಲ್ಲ.

ಈ ಅಣುಗಳನ್ನು ಬೆಳೆಸಿ ಪ್ರಯೋಗ ಶಾಲೆಯ ಪ್ರಯೋಗಗಳನ್ನು ಮಾಡಲು ಸಾಧ್ಯವಾಗಿಲ್ಲ. ತತ್ತಿಗಳಲ್ಲಿ ಸುಂಬಳವನ್ನು ಹಾಕಿ ಅವನ್ನು ಬೆಳೆಸಹೋದರೆ ಅವು ಬೆಳೆಯದೆ ಸತ್ತು ಹೋದುದು ಕಂಡುಬಂತು. ಯಾವ ಕಾರಣದಿಂದ ಎಂದು ಗೊತ್ತಿಲ್ಲ.

ಅವುಗಳನ್ನು ಬೆಳೆಸಲು ಸಾಧ್ಯವಾಗದ್ದರಿಂದ ಅವುಗಳಿಗೆ ಪರಿಹಾರೋಪಾಯ ಕಂಡುಹಿಡಿಯುವದೂ ಕಷ್ಟವಾಗಿದೆ. ಆದರೆ ಫಿನೈಲ್ ಮರ್ಕ್ಯುರಿಕ್ ಬ್ರೊಮೈಡಿನಿಂದ ತೊಳೆದರೆ ನೆಗಡಿ ಜೀವಾಣುಗಳು ತಕ್ಕಷ್ಟು ನಾಶವಾದದ್ದು ಕಂಡು ಬಂತು.

ಅತಿ ನೇರಳೆ (ಅಲ್ಟ್ರಾ ವಾಯಲೆಟ್) ಕಿರಣಗಳನ್ನು ಹಾಯಿಸಿದರೆ ಈ ಜೀವಾಣುಗಳು ನಾಶವಾಗುವವೆಂದು ಗೊತ್ತಾಗಿದೆ. ಆದರೆ ಮನುಷ್ಯರ ಮೇಲೆ ಅಥವಾ ಮನುಷ್ಯರು ಇರುವಾಗ ಈ ಕಿರಣಗಳನ್ನು ಪ್ರಯೋಗಿಸಲು ಬರುವದಿಲ್ಲ. ಆದುದರಿಂದ ಇದೂ ಈ ರೋಗವನ್ನು ನಾಶ ಮಾಡುವದು ಕಠಿನ.

ಆದರೂ ಈಗ ಪ್ರಯೋಗಗಳು ಪ್ರಗತಿಪಥದಲ್ಲಿ ಹೊರಟಿರುವದರಿಂದ ನೆಗಡಿಯ ಅಂತ್ಯ ವಿಧಿಯಾಗಲು ಬಹಳ ದಿನ ಹಿಡಿಯಲಾರದು.

● ಅಮೇರಿಕನ್ನರು ಪ್ರತಿ ೨೪ ತಾಸಿಗೆ ೧೦೦ ಕೋಟಿ ಸಿಗರೇಟಗಳನ್ನು ಸೇದುತ್ತಾರೆ. (ಅಲ್ಲಿಯ ಜನಸಂಖ್ಯೆ ಬರಿ ೧೩ ಕೋಟಿ)

● ಬ್ರಿಟನ್ನಿನ ಸ್ಯಾಲಿಸ್‌ಬರಿಯಲ್ಲಿ ನರಿಗಳ ಪ್ರತಾಪ ಬಹಳ. ಅವುಗಳನ್ನು ಬೇಟೆಯಾಡ ಹೋದ ಬೇಟೆ ನಾಯಿಗಳನ್ನೇ ಅವು ಸಂಘಶಕ್ತಿಯ ಬಲದಿಂದ ಅಟ್ಟಿಕೊಂಡು ಹೋಗುತ್ತವೆ.

ಸೋನಾಮುಖಿಯ ಗುಣಗಳು

ಸೋನಾಮುಖಿ ಅಥವಾ ನೆಲಾವರಿಕೆ ಇದು ಎಲ್ಲಾ ಕಡೆ ಸಿಕ್ಕುತ್ತದೆ. ಈ ವನಸ್ಪತಿಯನ್ನು ಆದಿತ್ಯವಾರ ತೆಗೆದುಕೊಂಡು ಬಂದು, ನೆರಳಲ್ಲಿ ಒಣಗಿಸಿ, ಚನ್ನಾಗಿ ಚೂರ್ಣಮಾಡಿ ಶೋಧಿಸಿ, ಒಂದು ಬಾಟ್ಲಿಯಲ್ಲಿಟ್ಟುಕೊಂಡು, ಒಂದು ನಾಲ್ಕಾಣೆ ತೂಕ ಚೂರ್ಣವನ್ನು ಬಿಸಿನೀರಿನಲ್ಲಿ ತಗೆದುಕೊಂಡರೆ ಸರಿಯಾಗಿ ಭೇದಿಯನ್ನುಂಟು ಮಾಡಿ ಆರೋಗ್ಯವನ್ನು ಕಾಯುತ್ತದೆ. ನೈಜಾವಾಗಿದ್ದರೆ ಗರುಗದ ರಸದಲ್ಲಿ ತೆಗೆದುಕೊಳ್ಳಬೇಕು. ಸಕ್ಕರೆಯಲ್ಲಿ ತೆಗೆದುಕೊಂಡರೆ ಉಷ್ಣಕಾವು, ಮೇಹ, ಸ್ತ್ರೀಯರ ಪ್ರದರ, ಕೆಂಪು ರಕ್ತ, ಬಿಳಿಸೆರಗು ಇವೆಲ್ಲಾ ನಾಶವಾಗುತ್ತವೆ. ತುಪ್ಪದಲ್ಲಿ ತೆಗೆದುಕೊಂಡರೆ ಹೊಟ್ಟೆನೋವು ಗುಣವಾಗುತ್ತದೆ. ಕುರಿಹಾಲಿನಲ್ಲಿ ತೆಗೆದುಕೊಂಡರೆ ಹಳದಿವರ್ಣದ ಮುಟ್ಟು ಬಂದಾಗುತ್ತದೆ. ಬಜೆ, ಸೈಂಧ್ರಲವಣಗಳ ಜೊತೆಗೆ ತೆಗೆದುಕೊಂಡರೆ ಎಂಟುತರದ ಗುಲ್ಮ, ಅಷ್ಟ್ರೀಲಾ, ಶೋಭೆ, ಪಾಂಡು, ರಕ್ತಪಾಂಡು, ಪಿತ್ತ ಪಾಂಡು, ವಾತಶೂಲಿ, ನಾಶವಾಗುತ್ತವೆ. ಆಕಳ ಮಜ್ಜಿಗೆಯಲ್ಲಿ ತೆಗೆದುಕೊಂಡರೆ ಸಂಗ್ರಹಣೆ, ಅತಿಸಾರ ನಿಲ್ಲುತ್ತದೆ. ತುಳಸಿಯ ರಸದಲ್ಲಿ ತೆಗೆದುಕೊಂಡರೆ ವಿಷಮಶೀತಜ್ವರ, ಸನ್ನಿಪಾತಕ, ನಿಮೋನಿಯ ಇವೆಲ್ಲಾ ನಾಶವಾಗುತ್ತವೆ. ಕುಪ್ಪೆಸೊಪ್ಪಿನ ರಸದಲ್ಲಿ ತೆಗೆದುಕೊಂಡರೆ ಮಕ್ಕಳ ಮೂರ್ಛೆರೋಗ, ಬಿಲ್ಲುಕತ್ತು ಕಾಗೆಕೆಮ್ಮು, ಮುಮ್ಮಳ್ಳಿರೋಗ ಪರಿಹಾರವಾಗುತ್ತವೆ. ಅನುಪಾನದೊಡನೆ ಈ ಮೂಲಿಕೆಯನ್ನು ಕೊಡುವದರಿಂದ ಎಷ್ಟೋ ರೋಗಗಳು ನಿವಾರಣೆಯಾಗುತ್ತವೆ ಎಂದು ಹುಲುವಾಗಲಿನ ವೈದ್ಯರಾದ ಶ್ರೀ ಕೆ. ಎಂ. ಶಿತಿಕಂಠಯ್ಯನವರು ತಿಳಿಸುತ್ತಾರೆ.

●

ಅಚ್ಚರಿಯ ಮದ್ದು

ದಕ್ಷಿಣ ಅಮೇರಿಕದಲ್ಲಿ ವಿಜ್ಞಾನ ಪ್ರಗತಿಗಾಗಿ ಸ್ಥಾಪಿಸಲ್ಪಟ್ಟಿರುವ "ಅಮೇರಿಕನ್ ಅಸೋಸಿಯೇಶನ್ನಿ"ನವರಿಗೆ ಒಂದು ವರದಿ ಬಂದಿದೆ. ಅದರಲ್ಲಿ ಅಲ್ಲಿಯ ಅಮೇಜೋನ್ ಕಣಿವೆಯಲ್ಲಿ ದೊರೆತ ಒಂದು ಅಚ್ಚರಿಯ ಮದ್ದಿನ ವಿವರವನ್ನು ಕೊಡಲಾಗಿದೆ.

ಅಮೇಜೋನ ನದಿಯ ಸುತ್ತುಮುತ್ತಲಿನ ಗೊಂಡಾರಣ್ಯದಲ್ಲಿ ಡ್ಯಾಸಾ ಎಂಬ ಒಂದು ಜಾತಿಯ ಮರವಿದೆ. ಮೆಡ್‌ಫರ್ಡನೊಸಿನಲ್ಲಿರುವ ಟಫ್ಟ್ಸ ಕಾಲೇಜಿನ ಡಾ. ಜಿ. ಎ. ಎಡ್ವರ್ಡ್ಸರು ಮತ್ತು ಅವರ ಸಂಗಡಿಗರು ಈ ಮರದಿಂದ "ರಿನೋಡೈನ್" ಎಂಬ ಸತ್ವವನ್ನು ತೆಗೆದಿದ್ದಾರೆ. ಇದರ ಬಳಕೆಯಿಂದ ಪ್ರಾಣಿಗಳ ಸರ್ವಾಂಗ ಸರ್ವೇಂದ್ರಿಯಗಳೂ ಥಂಡಿಬಡಿದು ಮರಗಟ್ಟಿ ಹೋದಂತಾಗಿ ಅವುಗಳ ಸಂವೇದನಾಶಕ್ತಿ ಅಳಿಯುತ್ತದೆ. ಆದರೆ ಪ್ರಾಣ ಹೋಗುವದಿಲ್ಲ. ಇದರಿಂದ ಶಸ್ತ್ರಚಿಕಿತ್ಸೆಗೆ ಬಹಳ ಅನುಕೂಲ ಸಿಕ್ಕಂತಾಗಿದೆ.

●

ಶೇಂಗಾಹಿಂಡಿಯಿಂದ ಬಟ್ಟೆಗಳು

ಎಲ್ಲಾದರೂ ಕೇಳಿದ್ದೀರಾ.. ಶೇಂಗಾದಿಂದ.. ಅಲ್ಲ, ಅದರ ಹಿಂಡಿಯಿಂದ ಬಟ್ಟೆ ತಯಾರಿಸುತ್ತಾರೆಂಬ ಮರುಳು ಸುದ್ದಿ? ಆದರೆ ಅದೀಗ ಮರುಳಲ್ಲ. ಇಂಗ್ಲಂಡಿನಲ್ಲಿ ಇನ್ನೊಂದು ವರ್ಷದಲ್ಲಿ ಶೇಂಗಾ ಹಿಂಡಿಯಿಂದ ಮಾಡಿದ ಲಕ್ಷಾಂತರ ಉಡಿಗೆ ತೊಡಿಗೆಗಳು ಪೇಟೆಯಲ್ಲಿ ಮೆರೆದಾಡಲಿವೆ. ಬರಿ ತಲೆತಿರುಕ ವಿಜ್ಞಾನಿಯ ಹುಚ್ಚು ಪ್ರಯೋಗವಲ್ಲವಿದು. ಜಗತ್ತಿನ ಅತಿ ದೊಡ್ಡ ರಸಾಯನಿಕ ಉತ್ಪಾದಕರಾದ ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್ ಕಂಪನಿಯವರು ಸ್ಕಾಟಲಂಡದಲ್ಲಿ ಈಗಾಗಲೆ ಈ ಬಗ್ಗೆ ಒಂದು ಕಾರಖಾನೆಯನ್ನು ಕಟ್ಟಿ ತೊಡಗಿದ್ದಾರೆ.

ಶೇಂಗಾದಿಂದ ಎಣ್ಣೆಯನ್ನೆಲ್ಲ ತೆಗೆದ ಮೇಲೆ ಮೆತ್ತನ್ನ ಉಣ್ಣೆಯಂಥ ಎಳೆಗಳನ್ನು ಹಿಂಡಿಯಿಂದ ತಯಾರಿಸಲಾಗುತ್ತಿವೆ. ಈ ಎಳೆಗಳಿಂದ ಉತ್ತಮ ನೂಲನ್ನು ನೂಲಬಹುದು. ರೇಯನ್‌ನೊಡನೆ ಅದನ್ನು ಮಿಶ್ರಿಸಿದರೆ ಬೇಕಾದ ರಂಗುಕೊಟ್ಟು ಬಟ್ಟೆಗಳನ್ನು ನೇಯಬಹುದು. ಅರಳೆಯೊಡನೆ ಬೆರಸಿದರೂ ಜವಳಿಯನ್ನು ನೇಯಬಹುದು. ಇದರಿಂದ ಮಾಡಿದ ಬಟ್ಟೆಗಳು ಎಷ್ಟು ತೆಳ್ಳಗಿದ್ದರೂ ಬಹಳ ಬೆಚ್ಚಗಿರುವವು

ಹಳೆ ಹಡಗು

೧೩೧ ವರ್ಷ ಹಿಂದಿನ "ಫಾದ್ರೋಯಂತ್" ಎಂಬ ಮರಕಟ್ಟಿನ ಹಡಗು ಮುಂಬಯಿಯ ಹಳೆಯ ಕಾಲದ ನೌಕಾ ವ್ಯವಹಾರಕ್ಕೆ ನಿದರ್ಶನವಾಗಿ ಇಂದು ಸಿಕ್ಕಿದೆ. ಇದನ್ನೀಗ ಪೋರ್ಟ್ಸ್‌ಮತ್ತಿನಲ್ಲಿ ದುರಸ್ತುಮಾಡಿ ಹುಡುಗ ಹುಡುಗಿಯರಿಗೆ ತರಬೇತುಕೊಡಲು ಬಳಸಲಾಗುತ್ತಿದೆ. ಈ ಹಡಗನ್ನು ೧೮೧೭ ರಲ್ಲಿ ಮುಂಬಯಿ ಬಂದರಿನಲ್ಲಿ ೪೬ ಬಂದೂಕುಗಳ ಯುದ್ಧ ನೌಕೆಯನ್ನಾಗಿ ರಚಿಸಲಾಗಿತ್ತು. ತೇಗಿನಿಂದ ಕಟ್ಟಿದ ಹಡಗುಗಳಲ್ಲಿ ಉಳಿದದ್ದು ಇದೊಂದೇ. ಅದರಲ್ಲಿ ಈಗ ೧೦೦ ಮಕ್ಕಳು ಕುಳಿತುಕೊಳ್ಳಬಹುದಾದ ಜಾಗವಿದೆ.

ಪುತ್ರ ಸಂಪತ್ತಿ, ಬುದ್ಧಿ ನಿವೃತ್ತಿ!

"ಬುದ್ಧಿಶಕ್ತಿಯನ್ನು ಅಳೆಯಬಹುದೆ?" ಎಂದು ಹಿಂದೊಮ್ಮೆ "ಕರ್ಮವೀರ" ದಲ್ಲಿ ವಿದ್ವಾನ್ ಲೇಖಕರೊಬ್ಬರು ಕೆಲವು ಕೌತುಕದ ವಸ್ತುಸ್ಥಿತಿಗಳನ್ನು ನಿರೂಪಿಸಿದ್ದರು. ವಿದೇಶಗಳಲ್ಲಿ ನಡೆದ ಪರಿಶೀಲನೆಗಳ ಫಲವಾಗಿ ಮನುಷ್ಯ ಬುದ್ಧಿಯ ತೀಕ್ಷ್ಣತೆ ಬರಬರುತ್ತ ಮೊಂಡಾಗುತ್ತಿದೆಯೆಂದು ಸಿದ್ಧವಾಗುವಸಂಗತಿಯನ್ನು ಅವರು ಹೊರಗೆಡಹಿದ್ದರು. ಈಗ ಇಂಗ್ಲಂಡಿನಲ್ಲಿ ನಡೆದ ಪರಿಶೀಲನೆಗಳ ಫಲವಾಗಿ ಇನ್ನೂ ಕುತೂಹಲಜನಕವಾದ ಹೊಸ ವಸ್ತುಸ್ಥಿತಿಯೊಂದು ಪ್ರಕಾಶಕ್ಕೆ ಬಂದಿದೆ. ಅದು ನಮಗೆ ಭಾರತೀಯರಿಗೆ- "ಸಂತಾನ ಗೋಪಾಲ" ರಿಗೆ.. ಒಂದು ಬಗೆಯ ಎಚ್ಚರಿಕೆಯೆಂದೇ ಹೇಳಬಹುದು.

೧೯೩೨ ಮತ್ತು ಈಗ ೧೯೪೭ ರಲ್ಲಿ ಸ್ಕಾಟ್ಲಂಡಿನಲ್ಲಿ ನಡೆದ ಎರಡು ಬಾಲಕ ಬುದ್ಧಿಮಾಪನ ಪರಿಶೀಲನೆಗಳಿಂದ ಬಹುಸಂತಾನದ ಕುಟುಂಬಗಳಲ್ಲಿ ಹುಟ್ಟಿದ ಹುಡುಗ ಹುಡುಗಿಯರ ಬುದ್ಧಿ ಮಂದವಾಗಿರುವದೆಂದು ನಿಸ್ಸಂದಿಗ್ಧವಾಗಿ ನಿಷ್ಪನ್ನವಾಗಿದೆ. ಇದನ್ನು ಕೇಳಿ ಓದುಗರು ದಂಗು ಬಡಿದಂತಾಗಬಹುದು.

ಆದರೆ ಈ ಮಾತು ಕಲ್ಪನೆಯಲ್ಲ, ನಿಜ. ಹದಿನಾರಾಣೆ ನಿಜವೆಂದು ಹೇಳಬರುವದಿಲ್ಲವಾದರೂ ಬಹಳ ಮಟ್ಟಿಗೆ ನಿಜ. ಎಲ್ಲ ನಿಯಮಗಳಿಗೂ ಇರುವಂತೆ ಇದಕ್ಕೂ ಅಪವಾದಗಳಿವೆ. ಆದರೆ ಸರ್ವಸಾಮಾನ್ಯ ಗತಿಧಾರೆ ಇದು. ಬ್ರಿಟನ್ನಿನ ಬುದ್ಧಿಪರಿಶೀಲನ ಸಮಿತಿಯ ಅಧ್ಯಕ್ಷರಾದ ಪ್ರೊ. ಗಾಡಫ್ರೆ ಥಾಮ್ಸನ್ನರಂಥವರ ಆಪ್ತ ಪ್ರಮಾಣ ಇದಕ್ಕಿದೆ.

ಇದು ನಿಜವೆಂದು ಎಲ್ಲರೂ ಒಪ್ಪಿದರೂ ಇದರ ಕಾರಣಗಳ ಬಗ್ಗೆ ಮಾತ್ರ ಬಲ್ಲವರಲ್ಲಿ ಒಮ್ಮತವಿಲ್ಲ, ವಿವಾದವೇ ಇದೆಯೆನ್ನಬಹುದು.

೧೯೩೨ ರಲ್ಲಿ ಸ್ಕಾಟ್ಲಂಡಿನಲ್ಲಿ ಶಾಲೆಗೆ ಹೋಗುವ ೧೧ ವಯಸ್ಸಿನ ೧,೦೦,೩೦೦ ಬಾಲಬಾಲಿಕೆಯರಲ್ಲಿ ೮೭,೪೯೮ ಜನರನ್ನು ಬುದ್ಧಿಮಾಪನ ಪರೀಕ್ಷೆಗೊಳಪಡಿಸಲಾಗಿತ್ತು. ಅದರ ಪರಿಣಾಮಗಳ ಪುನರ್ವಿಮರ್ಶೆಗೆಂದು ೧೯೪೭ ರಲ್ಲಿ ತಿರುಗಿ ಅದೇ ವಯಸ್ಸಿನ ೮೦,೩೦೦ ಶಾಲೆ ಹುಡುಗರಲ್ಲಿ ೭೦,೮೦೫ ಜನರನ್ನು ಪರಿಶೀಲಿಸಲಾಯಿತು. ೧೯೪೭ ರ ಪರಿಶೀಲನೆಯಲ್ಲಿ ಅದರ ೧೫ ವರ್ಷ ಹಿಂದಿನ ಪರಿಶೀಲನೆಗಿಂತ ನೂರಕ್ಕೆ ಮೂರಂಶ ಹೆಚ್ಚು ಚುರುಕುತನ ಹುಡುಗರಲ್ಲಿದ್ದುದು ಕಂಡುಬಂತು. ಆದರೆ ಇದರಿಂದ ನಾವು ಮೋಸ ಹೋಗಬಾರದೆಂದು ತಜ್ಞರು ಎಚ್ಚರ ಕೊಡುತ್ತಾರೆ. ಅಂದು ಹುಡುಗರಿಗೆ ಈ ಪರೀಕ್ಷೆಯ ವಿಧಿವಿಧಾನ ಗೊತ್ತಿದ್ದಿಲ್ಲ; ಇಂದು ಇಂಥ ಹಲವು ಪರೀಕ್ಷೆಗಳ ಪರಿಚಯ ಅವರಿಗಾಗಿರುವದರಿಂದ ಈ ಸುಧಾರಣೆ ಕಂಡು ಬಂದಿರಬಹುದೇ ಹೊರತು, ಅಂದಿನವರಿಗಿಂತ ಇಂದಿನವರು ಚುರುಕಾಗಿದ್ದಾರೆಂದು ಸರ್ವಥಾ ಬಗೆಯಬಾರದು.

ಪ್ರಸ್ತುತ ಪರಿಶೀಲನೆಗಳಲ್ಲಿ ಏಕಮಾತ್ರ ಪುತ್ರರಾದವರಿಂದಾರಂಭಿಸಿ, ೧೪-೧೫ ಅಣ್ಣತಮ್ಮಂದಿರಲ್ಲಿ ಒಬ್ಬರಾದ ಬಾಲಬಾಲಿಕೆಯರ ವರೆಗೆ ಅನೇಕ ಆಕಾರದ ಕುಟುಂಬಗಳಿಗೆ ಸೇರಿದ ಹುಡುಗ ಹುಡಿಗೆಯರು ಪರೀಕ್ಷಿಸಲ್ಪಟ್ಟಿದ್ದರು. ಉತ್ತಮ ಬುದ್ಧಿಶಕ್ತಿಯುಳ್ಳ ಬಾಲಕರು ಪರಮಾವಧಿ ೭೬ ಗುಣಗಳನ್ನು ಸಂಪಾದಿಸುವರೆಂದು ಹಿಡಿದರೆ, ಏಕಮಾತ್ರ ಪುತ್ರ (ಅಥವಾ ಪುತ್ರಿ) ರಾದ ೭,೮೩೪ ಜನರು ಪರೀಕ್ಷೆಯಲ್ಲಿ ಸರಾಸರಿ ೪೩ ಗುಣಗಳನ್ನು ಪಡೆದರು. ತಂದೆ ತಾಯಿಗಳಿಗೆ ಎರಡೇ ಮಕ್ಕಳಿದ್ದ ಸಣ್ಣ ಕುಟುಂಬಗಳಿಗೆ ಸೇರಿದ ೧೫,೯೭೧ ಹುಡುಗರ ಪರಿಶೀಲನೆಯಲ್ಲಿಯೂ ಅವರು ಸಂಪಾದಿಸಿದ ಗುಣಗಳು ಏಕಮಾತ್ರ ಸಂತಾನರ ಸರಾಸರಿಗೆ ಹತ್ತಿರವಾಗಿದ್ದವು. ಆದರೆ ಅನಂತರ, ಬುದ್ಧಿಶಕ್ತಿ ಪ್ರಮಾಣ ಇಳಿಯುತ್ತ ಹೋದುದು ಸ್ಪಷ್ಟವಾಗಿ ಗೋಚರಕ್ಕೆ ಬಂತು. ಚತುಷ್ಪುತ್ರ ಕುಟುಂಬದ ಮಕ್ಕಳ ಸರಾಸರಿ ಬುದ್ಧಿವಂತಿಕೆಯ ಗುಣ ೩೫.೩; ಅಷ್ಟಪುತ್ರ ಕುಟುಂಬದ ಹುಡುಗರ ಸರಾಸರಿ ೨೮.೮; ಹೀಗೆ ಅನುಕ್ರಮವಾಗಿ ಇಳಿಯುತ್ತ ೧೮ ಮಕ್ಕಳು ಮತ್ತು ೧೯ ಮಕ್ಕಳುಳ್ಳ ಕುಟುಂಬಗಳಿಗೆ ಸೇರಿದ ಹುಡುಗರು ಕ್ರಮಶಃ ಸರಾಸರಿ ೭ ಮತ್ತು ೨ ಗುಣಗಳನ್ನು ಪಡೆದರು!

ಏಕೀಕರಣದ ಕೆಲಸ ಸುಲಭವಾಗಿದೆ

(೪ ನೆಯ ಪುಟದಿಂದ ಮುಂದುವರಿದುದು)

ನಾನು ನಿರಂತರ ಆಶಾವಾದಿ

ಏಕೀಕರಣ ವಿಷಯದಲ್ಲಿ ನಾನಿನ್ನೂ ನಿರಾಶೆಗೊಂಡಿಲ್ಲ ಮೈಸೂರು ಸಹಿತ ಕರ್ನಾಟಕ ನಿರ್ಮಾಣವಾದರೆ ಹಾಲು ಸಕ್ಕರೆ ಬೆರತಂತೆ. ಹೀಗಾದರೆ ಈ ಪ್ರಶ್ನೆಯು ಇನ್ನೂ ಸುಲಭವಾಗುವದು. ದರ್ ಸಮಿತಿಯ ವರದಿ, ಪಂ. ನೆಹರು ಅವರ ಹೇಳಿಕೆ ಮುಂತಾದ ಅಡಚಣೆಗಳು ನಮ್ಮ ಮಾರ್ಗದಲ್ಲಿವೆ ಆದರೆ ನಾನು ಆಜನ್ಮ, ಆಮರಣ ಆಶಾವಾದಿ ನನ್ನ ಇತ್ತೀಚಿನ ಮೈಸೂರ ಸಂಚಾರದಿಂದ ಕರ್ನಾಟಕ ಏಕೀಕರಣದ ಪ್ರಶ್ನೆಯು ಸುಲಭವಾಗುತ್ತ ಬಂದಿದೆಯೆಂದೂ ಒಂದೊಂದು ಹೆಜ್ಜೆ ಮುಂದೆ ಸಾಗಿದೆಯೆಂದೂ ಕಂಡುಬಂದಿದೆ. ಈ ಪ್ರಶ್ನೆಯಲ್ಲಿ ತೊಡಗಿಕೊಂಡವರು ಕೇಂದ್ರ ಸರಕಾರ, ಮೈಸೂರು ಸರಕಾರ, ಮೈಸೂರು ಜನತೆ ಮತ್ತು ನಾವು ಹೀಗೆ ನಾಲ್ವರು. ಇವರಲ್ಲಿ ಮೈಸೂರಿನವರೂ ನಾವೂ ಒಂದಾಗಿ ನಾವೆಲ್ಲ ಒಂದೇ ಆಡಳಿತಕ್ಕೆ ಸೇರತಕ್ಕವರು ಎಂದು ನಿರ್ಧರಿಸಿದರೆ ಪ್ರಜಾ ಪ್ರಭುತ್ವದ ಈ ದಿನಗಳಲ್ಲಿ ಇದನ್ನಾರು ತಡೆಗಟ್ಟಬಲ್ಲರು?

ನಾನೀಗ ಬಿಡಿ ಸಂನ್ಯಾಸಿಯಲ್ಲ

ಪಶ್ಚಿಮ ಕರಾವಳಿಯ ಬಂದರದ ಬಗ್ಗೆ ತಾಂತ್ರಿಕ ವಿಚಾರಣೆ ನಡೆದಿದೆ ಭಟಕಳದಲ್ಲಿಯೋ ಕಾರವಾರದಲ್ಲಿಯೋ ಅದು ರಚಿತವಾಗುವದು. ಆಕಾಶವಾಣಿಯ ಕೇಂದ್ರವು ಹುಬ್ಬಳ್ಳಿಯಲ್ಲಿರಬೇಕೋ ಧಾರವಾಡದಲ್ಲಿರಬೇಕೆಂದು ಹಟಹಿಡಿಯಬಾರದು. ತಾಂತ್ರಿಕ ಅನುಕೂಲತೆಯಿದ್ದಲ್ಲಿ ಅದು ಸ್ಥಾಪಿತವಾಗುವದು. ೧೯೫೫ ರಲ್ಲಿ ಹುಬ್ಬಳ್ಳಿಯಲ್ಲಿ ವಿಮಾನ ನಿಲ್ದಾಣವಾಗುವದು ನಾನೀಗ ಬಿಡಿಸಂನ್ಯಾಸಿಯಲ್ಲ. ಮಠಾಧಿಕಾರಿಯ ಪೀಠಕ್ಕೆ ನನ್ನನ್ನು ಕಟ್ಟಿದ್ದಾರೆ. ಆದ್ದರಿಂದ ಯಾವ ವಿಷಯವನ್ನೂ ಎತ್ತಿಕೊಂಡು ವಾದಿಸಲು ನನಗೀಗ ಬರುವದಿಲ್ಲ. ಅಧಿಕಾರದ ಹೊಣೆ ಬಿದ್ದದ್ದರಿಂದ ಹಾಗೆ ಹೇಗೆ ಮಾಡಬಂದೀತು? ಎಂದೇ ಯಾವ ಮಾತಿನ ಬಗ್ಗೆಯೂ ಇಂಥ ದಿನ ಆಗಿಯೇ ತೀರುವದೆಂದು ಹೇಳಲು ಬಾರದು.

ಇನ್ನುಳಿದ ಬೇಡಿಕೆಗಳು

ಪರದೇಶಗಳಿಗೆ ರಾಯಭಾರಿಗಳನ್ನೂ ವ್ಯಾಪಾರಿ ಕಮಿಶನರನ್ನೂ ಕಳಿಸುವಲ್ಲಿ ಕರ್ನಾಟಕಕ್ಕೆ ಇಂತಿಷ್ಟು ಪ್ರಾತಿನಿಧ್ಯಬೇಕು ಎಂದು ಕೇಳುವದು ಸರಿಯಾಗದು. ಹೀಗೆ ಹೇಳಿದೆನೆಂದು ನನಗೆ ಕರ್ನಾಟಕದ ಬಗ್ಗೆ ಅವಜ್ಞೆಯೆಂದು ತಿಳಿಯಕೂಡದು. ನನ್ನ ಕರ್ನಾಟಕತ್ವದ ಅರಿವಿದ್ದವರು ನನಗೆ ಅದನ್ನು ನೆನಪು ಮಾಡಿಕೊಡುವದೆಂದರೆ ನನ್ನ ಬುದ್ಧಿಗೆ ಅಪಮಾನವೆಂದೇಕೆ ನಾನು ಗ್ರಹಿಸಬಾರದು? ನೀವೇ ಆರಿಸಿದ ಸರಕಾರದಲ್ಲಿ ನಾನೊಬ್ಬ ಕನ್ನಡಿಗ ಪ್ರತಿನಿಧಿ. ನಾನು ಅದನ್ನು ಮರೆತು ನಡೆವೆನೆ? ನಿಮ್ಮ ಸರಕಾರದಲ್ಲಿ ನಿಮ್ಮ ವಿಶ್ವಾಸವಿರಲಿ ಇಷ್ಟೇ.

ಹುಬ್ಬಳ್ಳಿಯ ಹುಡಿಯುಂಡು ಬೆಳೆದವ

ಇಷ್ಟುದ್ದ ಮಾನಪತ್ರವನ್ನು ನಾನೆಲ್ಲಿಯೂ ನೋಡಿಲ್ಲ. ಈ ಮಾನಪತ್ರ ಕೊಡುವಲ್ಲಿ ಒಂದು ರಾಜಕಾರಣವೂ ಇರುತ್ತದೆ. ಸಾರ್ವಜನಿಕವಾಗಿ ನಾನು ಉತ್ತರಕೊಟ್ಟು ಬಿಟ್ಟರೆ ಅದೊಂದು ಬಗೆಯ ವಚನವೇ ಆಗಿಬಿಡುವದೆಂಬ ಭಾವನೆಯೂ ನಿರೀಕ್ಷೆಯೂ ಮಾನಪತ್ರ ಕೊಟ್ಟವರಲ್ಲಿ ಉಂಟಾಗುವದು ಸಹಜ ಹುಬ್ಬಳ್ಳಿಯ ಬೀದಿಯಲ್ಲಿಯ ಹುಡಿ ಕುಡಿದು ಹುಡುಗಾಟವಾಡಿ ಬೆಳೆದು ದೊಡ್ಡವನಾದ ನನ್ನನ್ನು ಹೆಚ್ಚಾಗಿ ಗೌರವಿಸಿದ್ದೀರಿ. ನಾನು ಮತ್ತೆ ಹುಬ್ಬಳ್ಳಿಗೇ ಮರಳಬೇಕಾದವನು ಎಂಬುದನ್ನು ಲಕ್ಷದಲ್ಲಿಟ್ಟೇ ಎಲ್ಲ ಕಾರ್ಯಗಳನ್ನೂ ನಾನು ಮಾಡುತ್ತಿರುತ್ತೇನೆ. ಎಂದಿಷ್ಟೇ ಸೂಚ್ಯವಾಗಿ ನಿರೂಪಿಸಿ ನಿಮ್ಮ ಕೋರಿಕೆಗಳು ನನ್ನ ಕೋರಿಕೆಗಳೇ ಎಂದಿಷ್ಟೇ ಹೇಳಿ ನನ್ನ ಮಾತು ಮುಗಿಸುತ್ತೇನೆ.

ನ್ಯೂ ಎಜ್ಯುಕೇಶನ ಸೊಸಾಯಿಟಿಯ ಮಾನಪತ್ರ

ಹುಬ್ಬಳ್ಳಿ ನ್ಯೂ ಎಜ್ಯುಕೇಶನ್ ಸೊಸಾಯಿಟಿಯ ಸಭೆಯು ಈ ಸಂಸ್ಥೆಯ ಅಧ್ಯಕ್ಷರಾದ ಡಾ ಗೋರೆಯವರ ಮನೆಯಲ್ಲಿ ತಾ೩೧ ರ ಬೈಗು ೪—೪೫ ಕ್ಕೆ ಶ್ರೀ ದಿವಾಕರರನ್ನು ಗೌರವಿಸಲು ಸೇರಿತ್ತು. ಆಗ ಅನೇಕ ಪುರ ಪ್ರಮುಖರೂ ಆಗಮಿಸಿದ್ದರು. ಕೇಂದ್ರ ಮಂತ್ರಿ ಶ್ರೀ ದಿವಾಕರ ರಂಗರಾಯರನ್ನು ಸಂಭ್ರಮದಿಂದ ಬರಮಾಡಿಕೊಂಡು ಅಧ್ಯಕ್ಷರ ಹಸ್ತದಿಂದ ಅವರಿಗೆ ಮಾನಪತ್ರ ಕೊಡಿಸಲಾಯ್ತು. ಮಾನ್ಯಮಂತ್ರಿ ಶ್ರೀ ದಿವಾಕರರು ಈ ಸಂದರ್ಭದಲ್ಲಿ, ತೌರೂರು ಎಂಬ ಮಾತನ್ನೆತ್ತಿಕೊಂಡು ಹೀಗೆ ಹೇಳಿದರು– ಈ ಶಬ್ದವನ್ನು ನೀವು ಬಳಸಿದ್ದರಿಂದ ನನ್ನ ಅಂತ:ಕರಣದಲ್ಲಿ ಅನೇಕ ಭಾವನೆಗಳು ಉಕ್ಕಿಬಂದಿವೆ. ಹುಬ್ಬಳ್ಳಿ ನನಗೆ ತೌರೂರು ಅಷ್ಟೇ ಅಲ್ಲ,ನನ್ನ ತಾಯಿಯಮನೆ, ದಿಲ್ಲಿಯು ಅತ್ತೆಯಮನೆ, ೩೦ ವರ್ಷಗಳ ಹಿಂದೆ ನಾನು ನಿಮ್ಮ ಸಂಸ್ಥೆಯಲ್ಲಿ ಶಿಕ್ಷಕನಾಗಿದ್ದದ್ದನ್ನು ನೆನಪುಮಾಡಿಕೊಟ್ಟಿರುವಿರಿ. ನಿಮ್ಮ ಸಂಸ್ಥೆಯ ಕೀರ್ತಿಯನ್ನೂ ಪ್ರತಿಷ್ಠೆಯನ್ನೂ ಬೆಳೆಸಿದವರಾದ ಪ್ರಿ. ಗೋಖಲೆಯವರ ನೆನಪಾಗುವದು ನನಗೆ. ನಾನು ಶಾಲೆಗೆ ಬಂದ ಮೊದಲ ದಿನವೇ ಒಂದು ಆಂಗ್ಲ ಕವಿತೆಯನ್ನು ಕಲಿಸುವಾಗ ಅವರು ನನ್ನ ಪಕ್ಕದಲ್ಲಿ ಬಂದು ಕುಳಿತು ನನ್ನ ಕಲಿಸುವಿಕೆಯನ್ನು ನೋಡಿದರು. ಆಗ ನನಗೆ ಸಭಾಕಂಪ ಹುಟ್ಟಿತು. ನನ್ನ ಪಾಠ ಮುಗಿದನಂತರ ಅವರು ನನ್ನನ್ನು ಹೊಗಳಿ ಹುರುಪುಗೊಟ್ಟರು. ಲೋಕ ಶಿಕ್ಷಣದ ಕಾರ್ಯದ ಬೀಜವನ್ನು ಅಂದು ಅವರೇ ನನ್ನಲ್ಲಿ ಬಿತ್ತಿದರೆನ್ನಬೇಕು. ·ನನ್ನನ್ನು ಸಾಹಿತಿ ಎಂದು ಕರೆದಿರುವಿರಿ. ನನ್ನಲ್ಲಿ ಆ ಗುಣವಿದೆಯೆಂದು ನನಗೆ ಲವಲೇಶವೂ ಅನಿಸಿಲ್ಲ. ಹೃದಯ ಹೃದಯದೊಡನೆ ಮಾತಾಡುವಾಗ ನಾಲಗೆ ನುಡಿಯದಾಗುತ್ತದೆ. ಹಾಗಾಗಿದೆ ನನ್ನ ಸ್ಥಿತಿ. ನೀವು ಅಲ್ಪಾರಂಭದಿಂದ ಮಹಾಸಂಸ್ಥೆಯನ್ನು ಕಟ್ಟಿರುವಿರಿ. ೧೦ ರೂ. ವೇತನ ಪಡೆದು ದುಡಿದ ಶಿಕ್ಷಕರು ನಿಮ್ಮಲ್ಲಿದ್ದಾರೆ. ಹಿರಿಯರಾದ ಶ್ರೀ ತೊರವಿಯವರ ಜಿಗುಟುತನದ ಆದರ್ಶ ನಿಮ್ಮ ಮುಂದಿದೆ. ಶಿಕ್ಷಕನ ವೃತ್ತಿಯು ವ್ಯಾಪಾರಿ ದೃಷ್ಟಿಯದಲ್ಲ. ಈ ಆದರ್ಶದಿಂದ ಪ್ರೇರಿತನಾಗಿಯೇ ಲೋಕ ಶಿಕ್ಷಣದ ಸಾಧನವಾದ ಪತ್ರಿಕೋದ್ಯಮಕ್ಕೆ ಕೈಹಾಕುವ ಸಾಹಸ ಮಾಡಿದೆ. ಅಲ್ಲಿಯೂ ತ್ಯಾಗಜೀವಿಗಳ ಸಹಕಾರ ನನಗೆ ದೊರೆಯಿತು. ಅದರ ಫಲವೇ ನನಗೆ ಲೋಕ ಶಿಕ್ಷಣ ವಿಶ್ವಸ್ತನಿಧಿ ಹಾಗು ಸಂಯುಕ್ತ ಕರ್ನಾಟಕ, ಕರ್ಮವೀರ ಪತ್ರಿಕೆಗಳು. ಮಂತ್ರಿತ್ವದಿಂದ ಬಿಡುಗಡೆಯಾದ ಮೇಲೆ ಮತ್ತೆ ನಾನು ಮಾಡುವ ಕೆಲಸವೆಂದರೆ ಲೋಕ ಶಿಕ್ಷಣ. ಡಾ. ಗೋರೆಯವರು ೨೦ ವರ್ಷಗಳ ಹಿಂದೆ ನನಗೆ ಜೀವದಾನ ಮಾಡಿದ್ದಾರೆ. ಆಗ ಅವರು ಬದುಕಿಸದಿದ್ದರೆ ನನಗೆ ಸ್ವತಂತ್ರ ಭಾರತವನ್ನು ನೋಡುವ ಭಾಗ್ಯವೆ ದೊರಕುತ್ತಿದ್ದಿಲ್ಲ

ಹೀಗೆ ಹೇಳುವಾಗ ಮಂತ್ರಿಗಳ ಕಂಠ ಗದ್ಗದಿತವಾಯ್ತು.

ಅಂಜುಮಾನ ಸಂಸ್ಥೆಯಲ್ಲಿ

ತಾ. ೩೧ ರಂದು ಸಂಜೆ ೭॥ ಗಂಟೆಗೆ ಅಂಜುಮಾನ್ ಈ ಇಸ್ಲಾಮ ಸಂಸ್ಥೆಯಲ್ಲಿ ಮಾನ್ಯ ಮಂತ್ರಿಗಳನ್ನು ಸತ್ಕರಿಸಲಾಯಿತು. ಮಂತ್ರಿವರ್ಯರು ಹಿಂದಿಯಲ್ಲಿ ಭಾಷಣ ಮಾಡಿ ಹೀಗೆ ಹೇಳಿದರು.

ಸಾವಿರಾರು ವರ್ಷ ಸುಖವಾಗಿ ಕೂಡಿ ಬಾಳಿದ ನಾವು ಪರಕೀಯರ ಕೈವಾಡದಿಂದ ಒಡೆದುಹೋದೆವು. ಅದರ ಫಲವೇ ಪಾಕಿಸ್ತಾನ. ಇದಕ್ಕಾಗಿ ರಕ್ತದ ಕಾಲುವೆ ಹರಿದಿತು. ಇದರಿಂದ ಯಾರಿಗೆ ಸುಖವಾಯಿತು? ಇನ್ನು ಮೇಲಾದರೂ ಒಕ್ಕೊಟದ ಹಿಂದುಸ್ಥಾನದಲ್ಲಿ ಎಲ್ಲ ಜಾತಿಯವರೂ ಕೂಡಿ ಬಾಳಲು ಕಲಿಯಬೇಕು. ಜಾತ್ಯತೀತ ರಾಷ್ಟ್ರನಿರ್ಮಾಣವೇ ಭಾರತ ಸರಕಾರದ ಹೇತುವಿರಿ ನಾವೆಲ್ಲರೂ ಯೋಗ್ಯ ನಾಗರಿಕರಾಗಿ ರಾಷ್ಟ್ರದ ಮಣ್ಣನ್ನು ಹೊನ್ನಾಗಿಸಬೇಕಾಗಿದೆ; ಎಲ್ಲರೂ ಸೌಹಾರ್ದದಿಂದ ದುಡಿಯುವ ಬಾಳುವೆ ಮಾಡುವಾ.

ಕಾಂಗ್ರೆಸ ಕಾರ್ಯಕರ್ತರ ಸಭೆಯಲ್ಲಿ

ಕಾಂಗ್ರೆಸ ಕಾರ್ಯಕರ್ತರ ಸಭೆಯಲ್ಲಿ ಕೇಳಲಾದ ಅನೇಕ ಪ್ರಶ್ನೆಗಳಿಗೆ ಉತ್ತರ ಕೊಡುತ್ತ ಮಾನ್ಯಮಂತ್ರಿಗಳು ಹೀಗೆ ಮಾತನಾಡಿದರು.

ಮಂತ್ರಿಪದದಿಂದ ನಾನು ಹೊಸ ಸ್ವರೂಪದ ಉತ್ತರ ಕೊಡಬಹುದೆಂದು ನೀವು ಕೆಲ ಪ್ರಶ್ನೆ ಕೇಳಿರುವಿರಿ; ನನ್ನ ಉತ್ತರ ಹೀಗೆ.

ಜಾತ್ಯತೀತ ರಾಷ್ಟ್ರ ನಿರ್ಮಾಣವಾಗಲೆಂದೇ ಸರಕಾರವು ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಕಾನೂನುಗಳನ್ನು ಮಾಡಿತು. ಆದರೆ ಈ ಬಗ್ಗೆ ನಾವೇನು ಮಾಡಿದ್ದೇವೆ?

ಕಾಂಗ್ರೆಸ ಧೋರಣವೇ ಸರಕಾರದ ಧೋರಣವಾಗಿದೆ. ಸರಕಾರವು ಬಂಡವಲುಶಾಹಿಗೆ ಸರ್ವಥಾ ಮಾರುಹೋಗಿಲ್ಲ. ಹಾಗೆ ಗ್ರಹಿಸುವದು ತಪ್ಪು. ಸಮಾಜವಾದಿ ಪ್ರಜಾರಾಜ್ಯವೆಂದು ಸರಕಾರವು ಹೇಳಿಕೊಳ್ಳುತ್ತಿಲ್ಲವಾದರೂ ಸಮಾಜವಾದೀ ಗುಣಗಳಿಗೆ ಹೊಂದುವಂತೆ ಅದರ ಕೃತಿಗಳಿವೆ. ಉದಾಹರಣೆಗಾಗಿ ರಿಝರ್ವ ಬ್ಯಾಂಕ ರಾಷ್ಟ್ರೀಕರಣ, ಕನಿಷ್ಠ ಪಗಾರ ಮಸೂದೆ,ಔದ್ಯೋಗಿಕ ಧೋರಣೆಯ ಯೋಜನೆ ಇವೇ ಮೊದಲಾದವನ್ನು ಹೇಳಬಹುದು.

(೧) ಕರ್ನಾಟಕ ಪ್ರಾಂತಕ್ಕಾಗಿಯೇ ಪ್ರತ್ಯೇಕ ಧನ ತೆಗೆದಿಡಬೇಕೆಂದು ಕೇಳುವದು ಸಮಂಜಸವಲ್ಲ. ಕೇಂದ್ರ ಸರಕಾರವು ಸಮಗ್ರ ಹಿಂದುಸ್ತಾನದ ದೃಷ್ಟಿಯಿಟ್ಟು ಹೆಜ್ಜೆ ಹಾಕಬೇಕಲ್ಲವೆ? (೨) ವಿದ್ಯುತ್ಪೂರೈಕೆಯ ಹೊಣೆಯನ್ನು ಪ್ರಾಂತಿಕ ಸರಕಾರವೇ ಹೊತ್ತಿರುವದರಿಂದ ಕೇಂದ್ರ ಸರಕಾರ ಅದರಲ್ಲಿ ಕೈಹಾಕಲಾರದು. (೩) ಅಗ್ಗದ ರೇಡಿಯೋ ಸೆಟ್ಟುಗಳನ್ನು ಸಿದ್ಧಪಡಿಸುವ ಪ್ರಯತ್ನ ನಡೆದಿದ್ದು ಅದು ಕೈಗೂಡಿದರೆ ಹಳ್ಳಿ ಹಳ್ಳಿಗೂ ಬಾನುಲಿಯ ಯಂತ್ರ ಪೂರೈಸಲಾಗುವದು. (೪) ಆಹಾರ ನಿಯಂತ್ರಣ ಯಶಸ್ವಿಯಾಗಲು ಜನತೆಯ ಸಹಕಾರವು ಸರಕಾರಕ್ಕೆ ಅಗತ್ಯ ಬೇಕು. (೫) ಮೈಸೂರು ಮತ್ತು ಒಕ್ಕೂಟ ಕರ್ನಾಟಕಗಳು ಒಂದಾಗಿ ಒಂದು ಯೋಜನೆ ಸಿದ್ಧಪಡಿಸಿದರೆ ಕರ್ನಾಟಕ ಏಕೀಕರಣವನ್ನು ಯಾರೂ ತಡೆಯಲಾರರು.

ಮೈಸೂರು ಸಹಿತ ಕರ್ನಾಟಕವು ಎಲ್ಲ ದೃಷ್ಟಿಯಿಂದಲೂ ಹಿತಕಾರಿ. ಈ ಬಗ್ಗೆ ಮಾತುಕತೆ ನಡೆದಿದ್ದು ಇನ್ನು ೧—೨ ತಿಂಗಳಲ್ಲಿ ಒಂದು ನಿರ್ಣಯಕ್ಕೆ ಬರಬಹುದು. ಇದಕ್ಕಾಗಿ ನಾವೆಲ್ಲ ಪ್ರಯತ್ನಿಸುವಾ.

ರಾತ್ರಿ ಹುಬ್ಬಳ್ಳಿಯಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತ, ಜಾತಿನಿಷ್ಠ ಸಂಸ್ಥೆಗಳಿಗೆ ಉತ್ತೇಜನ ಕೊಟ್ಟರೆ ಹಿಂದುಸ್ತಾನದಲ್ಲಿ ಮತ್ತೆ ನೂರಾರು ಪಾಕಿಸ್ತಾನಗಳಿಗೆ ಆಸ್ಪದ ಕೊಟ್ಟಂತಾದೀತು. ಜನರು ಇಂತಹ ಸಂಸ್ಥೆಯ ಪ್ರಚಾರಕ್ಕೆ ಬಲಿ ಬೀಳಬಾರದೆಂದು ಎಚ್ಚರಿಕೆ ಕೊಟ್ಟರು ಮತ್ತು ಸಕಲರೂ ಸರಕಾರದೊಡನೆ ಸಹಕರಿಸಬೇಕೆಂದು ಬಿನ್ನವಿಸಿದರು.

ಕುಂದಗೋಳದಲ್ಲಿ

ತಾ. ೧ರಂದು ಮುಂಜಾನೆ ೯॥ಗೆ ಕುಂದಗೋಳಕ್ಕೆ ತೆರಳಿ ಅಲ್ಲಿ ಪುರಪ್ರಮುಖರಿಂದ ಬಿನ್ನವತ್ತಳೆ ಸ್ವೀಕರಿಸಿದರು. ಸಾವಿರಾರು ಜನ ನೆರೆದಿತ್ತು. ೨೦ ಸಂಘ ಸಂಸ್ಥೆಗಳು ಅಲ್ಲಿ ಹಾರ ತುರಾಯಿ ಅರ್ಪಿಸಿದವು. ಬಿನ್ನವತ್ತಳೆಗೆ ಉತ್ತರ ಕೊಡುತ್ತ ತಮ್ಮ ೨೮ ವರ್ಷಗಳ ಸಾರ್ವಜನಿಕ ಜೀವನದ ಅನುಭವದ ಮಾತೆತ್ತಿ ಜನತೆಗಾಗಿ ದುಡಿವವರಿಗೆ ದುರುದ್ದೇಶದ ಆರೋಪ ಮಾಡುವ ಪ್ರವೃತ್ತಿ ಅನೇಕರಲ್ಲಿ ಉಂಟೆಂದೂ ಮುಂಬರುವವರಿಗೆ ಅಡ್ಡಗಾಲು ಹಾಕುವ ಬುದ್ಧಿಯೇ ಕಂಡು ಬರುವದೆಂದೂ ಹೇಳಿ ಸಾರ್ವಜನಿಕ ಜೀವನವು ವಿಶುದ್ಧಗೊಳ್ಳಬೇಕೆಂದು ನುಡಿದರು. ಕುಂದಗೋಳ ನಾಗರಿಕರ ಬೇಡಿಕೆಗಳತ್ತ ಹೊರಳಿ, ಅವು ತಮ್ಮ ಶಾಖೆಗೆ ಸಂಬಂಧಿಸಿಲ್ಲವಾದ್ದರಿಂದ ಅವನ್ನು ಸಂಸ್ಥಾನ ಶಾಖೆಯ ಗಮನಕ್ಕೆ ತರುವದಾಗಿ ಹೇಳಿದರು.

ತಾ. ೧ ರಂದು ೧೧॥ ಗಂಟೆಗೆ ರೇಲ್ವೆಯೂನಿಯನ್ನಿಗೆ ಭೆಟ್ಟಿಕೊಟ್ಟರು. ಧಾರವಾಡಕ್ಕೆ ಹೋಗುವಾಗ ಸಂಡೆ ಜಕ್ಕೆ ಅಮರಗೋಳ ಕಸ್ತೂರಬಾ ಕೇಂದ್ರಕ್ಕೆ ಭೆಟ್ಟಿಕೊಟ್ಟರು.



ಶ್ರೀ ಗಂಗಾಧರರಾಯರೊಡನೆ ದಿವಾಕರರು ಕಳೆದವಾರ ಬೆಳಗಾವಿಗೆ ಭೆಟ್ಟಿಕೊಟ್ಟಾಗ

ಧಾರವಾಡದಲ್ಲಿ

ತಾ. ೧ರ ಸಂಜೆಗೆ ಧಾರವಾಡದಲ್ಲಿ ಮೊದಲು ನೀರಾವರಿ ಸಂಶೋಧನ ಕಚೇರಿಗೆ ಭೆಟ್ಟಿಕೊಟ್ಟರು. ಅಲ್ಲಿ ಘಟಪ್ರಭಾ ನೀರಾವರಿ ಯೋಜನೆಯ ಪ್ಲಾಸ್ಟರ ಮಾದರಿಯನ್ನು ಮಂತ್ರಿಗಳಿಗೆ ಅರ್ಪಿಸಲಾಯಿತು. ನಂತರ ಅಝಾದ ಉಪವನದಲ್ಲಿ ಪ್ರಚಂಡ ಸಾರ್ವಜನಿಕ ಸಭೆ ನೆರೆದಿತು. ಮೈಸೂರು, ಒಕ್ಕೂಟ ಕರ್ನಾಟಕದ ಏಕೀಕರಣದ ಮಾತು ನಡೆದಿವೆಯೆಂದೂ ಪರಿಸ್ಥಿತಿಗೆ ತಕ್ಕಂತೆ ಯಾರೊಬ್ಬರು ಅಭಿಪ್ರಾಯ ಬದಲಿಸಿದರೆ ಅವರ ಮೇಲೆ ಅಪ್ರಾಮಾಣಿಕತೆಯ ಆರೋಪ ಹೊರಿಸುವದು ಯುಕ್ತವಲ್ಲವೆಂದೂ ಹೇಳಿದರು. ಸಭಾಸ್ಥಳವು ಅಂದವಾಗಿ ಸಿಂಗರಿಸಲ್ಪಟ್ಟಿತ್ತು. ಧ್ವನಿವಾಹಕ ಯಂತ್ರದ ವ್ಯವಸ್ಥೆಯಿತ್ತು. ಹತ್ತು ಸಾವಿರದಷ್ಟು ಜನ ನೆರೆದಿತ್ತು. ಧಾರವಾಡದಿಂದ ಹುಬ್ಬಳ್ಳಿಗೆ ರಾತ್ರಿ ೯॥ಗೆ ಮರಳುವಾಗ ದಾರಿಯಲ್ಲಿ ಅಮರಗೋಳ ಗ್ರಾಮದಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತ ಹಳ್ಳಿಗರು ಬಾನುಲಿ ಕೇಂದ್ರಕ್ಕೆ ಹಾತೊರೆಯದೆ ಒಕ್ಕಲತನದ ಸೌಕರ್ಯಗಳನ್ನು ದೊರಕಿಸಲು ಯತ್ನಿಸಬೇಕೆಂದು ನುಡಿದರು.

ಗದುಗಿನಲ್ಲಿ

ತಾ. ೨ರಂದು ಹುಬ್ಬಳ್ಳಿಯಲ್ಲಿ ಮುಂಜಾನೆ ಸಂಯುಕ್ತಕರ್ನಾಟಕದ ಕೆಲಸಗಾರರನ್ನು ಕಂಡು ರಾಷ್ಟ್ರೀಯ ಮಜದೂರ ಸಂಘದವರೊಡನೆ ಸಭೆಸೇರಿ ಅಣ್ಣಿಗೇರಿ ಮತ್ತು ಹುಲಕೋಟಿಯಲ್ಲಿ ಕಾರ್ಯಕ್ರಮ ತೀರಿಸಿಕೊಂಡು ಗದುಗಿಗೆ ಸಂಜೆ ಆಗಮಿಸಿದರು. ಅಲ್ಲಿ ಸಂಭ್ರಮದ ಸ್ವಾಗತವಾಯಿತು. ಅನೇಕ ಸಂಘ ಸಂಸ್ಥೆಗಳು ಹಾರ ಅರ್ಪಿಸಿದವು. ನಗರಹಿತರಕ್ಷಕ ಸಂಘದವರೂ ಬೆಟಗೇರಿ ನೇಕಾರ ಸಹಕಾರಿ ಸಂಘದವರೂ ಮಂತ್ರಿವರ್ಯರಿಗೆ ಮಾನಪತ್ರ ಅರ್ಪಿಸಿದರು. ಸಂಜೆ ೬॥ಗಂಟೆಗೆ ಪ್ರಚಂಡ ಸಾರ್ವಜನಿಕ ಸಭೆಯಾಯಿತು. ಅಲ್ಲಿ ಮಾತನಾಡುತ್ತ "ಸ್ವತಂತ್ರ ಭಾರತದಲ್ಲಿ ಏಕತಂತ್ರ ಕರ್ನಾಟಕವೇ ನನ್ನ ಗುರಿ. ಇದನ್ನು ಸಾಧಿಸಲು ನನ್ನದೇ ಆದ ರೀತಿಯಲ್ಲಿ ನಾನು ಅವಿಶ್ರಾಂತ ದುಡಿಯುವೆ. ಅದರ ನೆನಪು ನನಗೆ ಮಾಡಿಕೊಡುವದೆಂದರೆ ನನಗೆ ಅಪಮಾನ ಮಾಡಿದಂತೆ. ನಾನು ಈ ಕಾರ್ಯವನ್ನು ಮರೆತು ಬಿಡಬಹುದೆಂಬ ಭೀತಿ ಯಾಕೆ ಬರುತದೋ ನಾ ಕಾಣೆ" ಎಂದು ಮೊದಲಾಗಿ ಹೇಳಿದರು.

ತಾ. ೩ರಂದು ಮುಂಜಾನೆ ಹುಬ್ಬಳ್ಳಿ ಮೆಡಿಕಲ್ ಅಸೋಸಿಯೇಶನ್ನಿಗೆ ಭೆಟ್ಟಿಕೊಟ್ಟರು. ರಾಯ್ಟರ ಕಚೇರಿಯಲ್ಲಿ ಪತ್ರಿಕಾಕರ್ತರೊಡನೆ ವಿಚಾರವಿನಿಮಯಮಾಡಿದರು ಹಾಗು ಹುಬ್ಬಳ್ಳಿ ಗಂಗಾಧರ ವಾಣಿಜ್ಯ ಹಾಗು ಎಂಜನಿಯರಿಂಗ ಕಾಲೇಜಿನ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತ, ಸ್ವಾತಂತ್ರ್ಯವನ್ನು ... ಗಳಿಗೆ ತರುಣರು ... ತರುಣರಾದ ನೀವು ಉದಾತ್ತ ಆದರ್ಶದಿಂದ ತಮ್ಮ ಜೀವನವನ್ನು ರಾಷ್ಟ್ರಜೀವನದ ದೇದೀಪ್ಯಮಾನಗೊಳಿಸಬೇಕೆಂದು ಉಪದೇಶಿಸಿದರು.

ಅನಂತರ ಮಧ್ಯಾಹ್ನ ೧೨ ಕ್ಕೆ ಧಾರವಾಡ ನಗರಸಭೆಯ ಮಾನಪತ್ರ ಸ್ವೀಕರಿಸಿದರು. ಈ ಕಾರ್ಯಕ್ರಮ ಮುಗಿಸಿಕೊಂಡು ಮಧ್ಯಾಹ್ನಕ್ಕೆ ಬೆಳಗಾವಿಗೆ ಪ್ರಯಾಣ ಬೆಳೆಸಿದರು.

ಕರ್ಮವೀರ

ಶ್ರೀಮುಖ್ಯಾಲುಳ್ಳ ವಿಶ್ವಮ ವರ್ಷ ೫೭೬
ಪುಷ್ಯ ಶುದ್ಧ ೧೧ ಸೋಮವಾರ

ಅಭಿನಂದನೀಯ


ಹಿಂದುಸ್ತಾನ ಸರಕಾರದ ರೇಲ್ವೆ ಮಂತ್ರಿಗಳಾದ ಮಾನ್ಯ ಗೋಪಾಲ ಸ್ವಾಮಿ ಅಯ್ಯಂಗಾರ ಮತ್ತು ರೇಲ್ವೆ ಕೆಲಸಗಾರರ ಮಹಾಮಂಡಳದ ಅಧ್ಯಕ್ಷರಾದ ಜಯಪ್ರಕಾಶ ನಾರಾಯಣರಲ್ಲಿ ಮುಂಬಯಿಯಲ್ಲಿ ಮಾತುಕತೆಗಳು ನಡೆದು ಮುಖ್ಯ ವಿಷಯಗಳಲ್ಲಿ ಒಡಂಬಡಿಕೆಯಾಗಿದೆ ಎಂಬುದನ್ನು ಓದಿ ಪ್ರತಿಯೊಬ್ಬ ಭಾರತೀಯನಿಗೂ ಸಂತೋಷವಾಗದಿರದು. ತುಟ್ಟಿ ಭತ್ತೆ, ಧಾನ್ಯದ ಅಂಗಡಿಗಳು, ಸಂಬಳ ಸಮಿತಿಯ ಸೂಚನೆಗಳನ್ನು ಅನ್ವಯಿಸಬಹುದಾದ ವಿಷಯಗಳು ಮತ್ತು ಸಂಬಳ ಸಮಿತಿಯ ಸೂಚನೆಗಳಲ್ಲಿ ಕಂಡು ಬರುವ ಲೋಪಗಳನ್ನು ಪರಿಶೀಲಿಸಲು ಏರ್ಪಡಿಸುವದು ಈ ನಾಲ್ಕು ವಿಷಯಗಳಲ್ಲಿ ಮಾತುಕತೆ ನಡೆದು ಒಡಂಬಡಿಕೆ ಸಾಧ್ಯವಿದೆಯೆಂದು ಎನಿಸಿದ್ದರಿಂದ ಮುಂದೆ ಕೂಡಬಹುದಾದ ರೇಲ್ವೆ ಮಹಾಮಂಡಲ ಮತ್ತು ಸರಕಾರಿ ಅಧಿಕಾರಿಗಳಲ್ಲಿ ಮಾತುಕತೆ ನಡೆಯಬೇಕೆಂದು ಗೊತ್ತಾಗಿದೆ. ಆದರೆ ಈ ಮೊದಲು ಗೊತ್ತುಪಡಿಸಿದಂತೆ ಸಂಪಿನ ಸಂಬಂಧದಲ್ಲಿ ಮತಗಣನೆ ನಡೆಯಲು ಯಾವ ಪ್ರತ್ಯವಾಯವೂ ಇಲ್ಲ; ಮತಗಣನೆ ತೆಗೆದುಕೊಳ್ಳುವುದೆಂದರೆ ಸಂಪು ಹೂಡಬೇಕೆಂದು ಅರ್ಥವಲ್ಲ; ರೇಲ್ವೆ ಕೆಲಸಗಾರರ ಅಭಿಪ್ರಾಯವನ್ನು ತಿಳಿದುಕೊಳ್ಳುವದು ಮಾತ್ರ ಅದರ ಉದ್ದೇಶವೆಂದು ಮುಂತಾಗಿ ಜಯಪ್ರಕಾಶರು ಸ್ಪಷ್ಟೀಕರಿಸಿದ್ದಾರೆ.

ಒಡಂಬಡಿಕೆಯ ಈ ಸಮಯದಲ್ಲಿ ಸರಕಾರ ಮತ್ತು ರೇಲ್ವೆ ಮಹಾಮಂಡಳಕ್ಕೆ ಕೆಲ ಮಾತುಗಳನ್ನು ಹೇಳುವದು ಅಪ್ರಸ್ತುತವಾಗಲಾರದು. ಯುದ್ಧದ ಸಮಯದಲ್ಲಿ ಹಿಂದಿನ ಸರಕಾರದವರು ರೇಲ್ವೆ ಕೆಲಸಗಾರರಿಗೆ ವಿಶೇಷ ಸೌಕರ್ಯ ಕೊಟ್ಟು ತಮ್ಮ ಕಾರ್ಯವನ್ನು ಸಾಧಿಸಿಕೊಂಡದ್ದುಂಟು. ಸರಕಾರದ ಇತರ ನವಕರರಿಗೆ ಇಲ್ಲದಂತಹ ಧಾನ್ಯದ ಅಂಗಡಿಗಳ ಸವಲತ್ತನ್ನೂ ಅವರಿಗೆ ಕೊಡಲಾಗಿದ್ದಿತು. ಆದರೆ ಅಂಗಡಿಗಳ ಸವಲತ್ತಿನ ದುರುಪಯೋಗವಾಗಿ ಕಳ್ಳ ಪೇಟೆಗೆ ವಿಶೇಷ ಅವಕಾಶ ಸಿಕ್ಕಿತೆಂಬುದು ಎಲ್ಲರೂ ಒಪ್ಪತಕ್ಕ ಮಾತಾಗಿದೆ. ಅಲ್ಲದೆ ಈ ಬಗೆಗೆ ವಿಚಾರ ಮಾಡಲು ನೇಮಿಸಲ್ಪಟ್ಟಿದ್ದ ಸಮಿತಿಯವರೂ ಇದೇ ಬಗೆಯ ಅಭಿಪ್ರಾಯ ಪಟ್ಟಿರುತ್ತಾರೆ. ಬೇರೆ ಸರಕಾರಿ ನವಕರರಿಗೆ ಸಿಕ್ಕುತಿರುವಂತೆ ಇವರಿಗೂ ಭತ್ತೆಯನ್ನು ಕೊಡುವದು ನ್ಯಾಯ್ಯ ಮತ್ತು ಸಮಂಜಸ. ಸಂಬಳ ಸಮಿತಿಯವರು ಸೂಚಿಸಿದ ಭತ್ತೆ ಕಡಿಮೆಯಾಗಿದ್ದರೆ ಎಲ್ಲ ನೌಕರರ ಭತ್ತೆಯಂತೆ ರೇಲ್ವೆ ಜನರ ಭತ್ತೆಯನ್ನೂ ಹೆಚ್ಚಿಸಬಹುದು. ಅದೇ ಬಗೆಯಾಗಿ ಸಂಬಳ ಸಮಿತಿಯವರ ಇತರ ಸೂಚನೆಗಳನ್ನೂ ವಿಚಾರಿಸಬಹುದು. ರೇಲ್ವೆ ಕೆಲಸಗಾರರು ಯುದ್ಧ ಕಾಲದಲ್ಲಿಯ ಸೌಕರ್ಯಗಳೆ ಸಿಕ್ಕಬೇಕೆಂಬ ಹಟ ಹಿಡಿಯದೆ ಒಡಂಬಡಿಕೆಗೆ ಸಿದ್ಧರಾದರೆ ಈ ಪ್ರಶ್ನೆ ಬಗೆಹರಿಯಲು ಕಾಲವಿಲಂಬವಾಗದು.

ಹಿಂದುಸ್ತಾನ ಈದೀಗ ಸ್ವಾತಂತ್ರ್ಯವನ್ನು ಪಡೆದಿದ್ದರಿಂದ ಅನೇಕ ಪ್ರಶ್ನೆಗಳನ್ನು ಬಿಡಿಸಬೇಕಾಗಿದೆ. ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಬೇಕಾಗಿದೆ. ದೇಶದ ಆರ್ಥಿಕ ಸ್ಥಿತಿ ಸುಧಾರಿಸಬೇಕಾದರೆ ಬೇರೆ ಬೇರೆ ಕೆಲಸಗಾರರು ತಮ್ಮ ಹಾರ್ದಿಕ ಸಹಾಯವನ್ನು ಸಲ್ಲಿಸುವದು ಅತ್ಯವಶ್ಯವಾಗಿದೆ. ಸಂಪು ಮುಂತಾದನ್ನು ಹೂಡಿದರೆ ಆರ್ಥಿಕ ಸ್ಥಿತಿ ಹದಗೆಟ್ಟು ಪ್ರಜೆಗಳು ಬಗೆಬಗೆಯ ಕಷ್ಟ ನಿಷ್ಠುರಗಳಿಗೆ ತುತ್ತಾಗಬೇಕಾಗುತ್ತದೆ. ರೇಲ್ವೆ ಮಹಾ ಮಂಡಳದವರು ಈ ಒಡಂಬಡಿಕೆಯ ಬಗ್ಗೆ ವಿಚಾರ ಮಾಡುವಾಗ ಮೇಲೆ ಹೇಳಿದಂತೆ ಇಡೀ ರಾಷ್ಟ್ರದ ಹಿತವನ್ನು ನೋಡಬೇಕಲ್ಲದೆ ಭಾವನಾವಶರಾಗಿ ಇಲ್ಲವೆ ಯಾವದೊಂದು ರಾಜಕೀಯ ದುಷ್ಟ ಹೇತುವನ್ನಿಟ್ಟುಕೊಂಡು ಏನೇನೋ ತಲೆಯಲ್ಲಿ ತುಂಬುತಿರುವವರ ಮಾತುಗಳತ್ತ ಲಕ್ಷಿಸಬಾರದಾಗಿ ಸೂಚಿಸ ಬಯಸುತ್ತೇವೆ.

ಸಂಪು, ಸತ್ಯಾಗ್ರಹ ಮೊದಲಾದವು ಕೊನೆಯ ಅಸ್ತ್ರಗಳು. ಅದರಲ್ಲಿಯೂ ತಮ್ಮದೇ ಆದ ಸರಕಾರದ ವಿರುದ್ಧ ಸಂಪು ಹೂಡುವದಾಗಲಿ ಸತ್ಯಾಗ್ರಹವನ್ನು ಸಾರುವದಾಗಲಿ ಬಹಳ ಹೊಣೆಗಾರಿಕೆಯದು. ವಿಚಾರಮಾಡದೆ ಸಂಪು ಹೂಡಿದರೆ ಕರ್ತವ್ಯದಲ್ಲಿ ತಪ್ಪಿದಂತಾಗುವದು. ಆರ್ಥಿಕ ಮಟ್ಟವನ್ನೇ ಬುಡಮೇಲು ಮಾಡುವಂತಹ ಯಾವದೇ ಸಂಪಿಗೆ ಜನತೆಯ ಬೆಂಬಲವೂ ಸಿಕ್ಕಲಾರದು. ಇದೆಲ್ಲವನ್ನು ವಿಚಾರಿಸಿ ಸೂಕ್ತವಾದ ಧೋರಣವನ್ನು ಮಹಾ ಮಂಡಳದವರು ಸ್ವೀಕರಿಸುವರೆಂದು ನಂಬುತ್ತೇವೆ.

ಖೆಡ್ಡಾ ಕಾರ್ಯಕ್ರಮ



ಮೈಸೂರಿಂದ ೪೩ ಮೈಲು ದೂರದಲ್ಲಿರುವ ಖರಪುರದ ಅಡವಿಯಲ್ಲಿ ಮುಖ್ಯಮಂತ್ರಿ ನೆಹರೂ ಅವರು ಆನೆಗಳನ್ನು ಹಿಡಿದು ಪಳಗಿಸುವ "ಖೆಡ್ಡಾ" ಕಾರ್ಯಕ್ರಮವನ್ನು ಅವಲೋಕಿಸಲು ಹೋದಾಗಿನ ಚಿತ್ರ (ಡಿಸೆಂ. ೨೪) ಚಿತ್ರದಲ್ಲಿ ಮುಖ್ಯ ಮಂತ್ರಿಗಳ ಅಕ್ಕಪಕ್ಕದಲ್ಲಿದ್ದವರು ಚನ್ನಕೇಶವ ಮತ್ತು ಕಿಕ್ಕೆಯ್ಯ ಎಂಬವರು ಆನೆಗಳನ್ನು ಹಿಡಿಯುವರು.

ವಾರದ ಸಿಂಹಾವಲೋಕನ

ಮೈಸೂರನ್ನೊಳಗೊಂಡ ಕರ್ನಾಟಕ

ದರ್ ಸಮಿತಿಯ ವರದಿಯಿಂದ ಮತ್ತು ಹಿರಿಯ ಧುರೀಣರ ಅನವಶ್ಯಕ ಭಾಷಣಗಳಿಂದ ಭಾಷಾನ್ವಯ ಪ್ರಾಂತಗಳ ಪುರಸ್ಕರ್ತರಲ್ಲಿ ಒಂದು ಬಗೆಯ ದ್ವೇಷವುಂಟಾಗಿದೆಂಬುದು ಸ್ಪಷ್ಟ. ಅಂತೆಯೇ ಅವರಲ್ಲಿ ಹಲವರು ಹೇಗಾದರೂ ಮಾಡಿ ಭಾಷಾನ್ವಯ ಪ್ರಾಂತಗಳನ್ನು ಪಡೆದೇ ತೀರುವಾ ಎಂದು ಆವೇಶದಿಂದ ಪ್ರತಿಪಾದಿಸುತಿರುವರು. ಬೇರೆ ಪ್ರಾಂತಗಳ ಪ್ರತಿಕ್ರಿಯೆ ಏನೇ ಇದ್ದರೂ ಕರ್ನಾಟಕಸ್ಥರು ಮಾತ್ರ ಈ ಸಂಬಂಧದಲ್ಲಿ ಸಮಂಜಸ ವೃತ್ತಿಯನ್ನು ತಾಳುವದು ಅವಶ್ಯವಾಗಿದೆ. ಹಿಂದುಸ್ತಾನ ಸರಕಾರದ ಸುದ್ದಿ ಮತ್ತು ಆಕಾಶವಾಣಿ ಖಾತೆಯ ಮಂತ್ರಿಗಳಾದ ಶ್ರೀ ದಿವಾಕರರು ಕಳೆದವಾರ ಮೈಸೂರು ಧಾರವಾಡ ಮತ್ತು ಬೆಳಗಾವಿಗಳಲ್ಲಿ ಸಂಚರಿಸಿದಾಗ ಕರ್ನಾಟಕಸ್ಥರು ಸ್ವತಂತ್ರ ಪ್ರಾಂತ ರಚನೆಯ ಬಗೆಗೆ ನಿರಾಶರಾಗಬೇಕಾದುದಿಲ್ಲ ಎಂದು ಸಾರಿ ಹೇಳಿದ್ದಾರೆ. ಕೇವಲ ನಾಲ್ಕು ಇಲ್ಲವೆ ಆರು ಜಿಲ್ಲೆಗಳ ಬಗ್ಗೆಯೇ ಪ್ರಯತ್ನಿಸದೆ ಮೈಸೂರು ಮತ್ತು ಅದರ ಆಚೆಗಿರುವ ಒಕ್ಕೂಟದಲ್ಲಿಯ ಕನ್ನಡ ಪ್ರದೇಶ ಸಹಿತವಾದ ಕರ್ನಾಟಕ ಪ್ರಾಂತ ರಚಿಸುವ ಧ್ಯೇಯದಿಂದ ಕನ್ನಡಿಗರು ಮುಂದಡಿಯಿಡುವದು ಅವಶ್ಯವಾಗಿದೆ. ಮೈಸೂರಿನವರಾದರೂ ಈ ಬಗ್ಗೆ ಮೊದಲಿನಷ್ಟು ಉದಾಸೀನ ವೃತ್ತಿಯವರಾಗಿಲ್ಲ. ಅವರೂ ಕರ್ನಾಟಕ ಪ್ರಾಂತೀಕರಣದ ಬಗ್ಗೆ ಆತುರರಿರುವರು, ಆದುದರಿಂದ ಮೈಸೂರನ್ನು ಬಿಟ್ಟುಗೊಟ್ಟು ಅವಸರದಿಂದ ಆರೇ ಜಿಲ್ಲೆಗಳ ಏಕೀಕರಣಕ್ಕೆ ಪ್ರಯತ್ನಿಸಿದರೆ ಮತ್ತು ಅದನ್ನು ಸಾಧ್ಯಮಾಡಿಕೊಂಡರೆ ಜಾಣತನದ್ದಾಗಲಾರದೆಂದು ಮಾನ್ಯ ಮಂತ್ರಿಗಳು ಸ್ಪಷ್ಟಪಡಿಸಿರುವರು. ಒಮ್ಮೆ ಈ ರೀತಿ ಕರ್ನಾಟಕದಲ್ಲಿ ಎರಡು ಭಾಗಗಳಾಗಿ ಬಿಟ್ಟರೆ ಮುಂದೆ ಎಂದೂ ಅವು ಒಂದಾಗಲಾರವೆಂದೂ ಅವರು ಎಚ್ಚರಿಕೆ ಕೊಟ್ಟಿದ್ದಾರೆ. ಆದುದರಿಂದ ಕರ್ನಾಟಕದಲ್ಲಿಯ ಕಾರ್ಯಕರ್ತರು ಮೈಸೂರಿನ ಪ್ರಜೆಗಳ ಮನವೊಲಿಸಿ ಅವರು ಕರ್ನಾಟಕ ಪ್ರಾಂತದಲ್ಲಿ ಸೇರುವಂತೆ ಮಾಡಿದ್ದಾದರೆ, ಸ್ವತಂತ್ರ ಕರ್ನಾಟಕ ಪ್ರಾಂತ ರಚನೆಯನ್ನು ಯಾರೂ ತಡೆಯರೆಂಬೂ ಅವರು ಅಭಿಪ್ರಾಯ ಪಟ್ಟಿದ್ದು ಉಚಿತವಾಗಿದೆ.

ಸ್ವಾಗತಾರ್ಹ ಘೋಷಣೆ

ಹೊಸ ವರುಷದ ಮೊದಲನೆಯ ತಾರೀಕು ಹಿಂದುಸ್ತಾನ ಪಾಕಿಸ್ತಾನ ಹಾಗು ಕಾಶ್ಮೀರದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂತಹ ದಿನವು. ಅಂದು ಪಾಕಿಸ್ತಾನ ಮತ್ತು ಹಿಂದುಸ್ತಾನಗಳಲ್ಲಿ ಕಾಶ್ಮೀರದಲ್ಲಿ ನಡೆದ ಪ್ರತ್ಯಕ್ಷ ಅಪ್ರತ್ಯಕ್ಷ ಯುದ್ಧವು ನಿಂತು ಕಾಶ್ಮೀರದ ಭವಿತವ್ಯವನ್ನು ನಿರ್ಣಯಿಸುವ ಹಕ್ಕು ಅಲ್ಲಿಯ ಪ್ರಜೆಗಳಿಗೆ ಸೇರಿದೆ ಎಂಬುದಾಗಿ ಸಾರಲಾಯಿತು. ಕಾಶ್ಮೀರ ಸಮಸ್ಯೆಯ ಕಳೆದ ಹದಿನಾಲ್ಕು ತಿಂಗಳುಗಳ ಇತಿಹಾಸವನ್ನು ಸೂಕ್ಷ್ಮ ರೀತಿಯಿಂದ ಮತ್ತು ನಿರ್ವಿಕಾರ ಮನಸ್ಸಿನಿಂದ ವಿಚಾರಿಸಿದ್ದಾದರೆ ಹಿಂದುಸ್ತಾನ ಸರಕಾರದ ನಿಲುಮೆ ಸಮಂಜಸ ಮತ್ತು ನ್ಯಾಯ್ಯವಾಗಿತ್ತೆಂಬುದು ಸ್ಪಷ್ಟವಾಗದಿರದು. ದಾಳಿಗಾರರ ನೆವ ಮುಂದೆ ಮಾಡಿ ಪಾಕಿಸ್ತಾನ ಸರಕಾರದ ಸೈನಿಕರು ಕಾಶ್ಮೀರದ ಮೇಲೆ ಗುಪ್ತ ರೀತಿಯಿಂದ ದಾಳಿ ಇಟ್ಟು ರಾಜಧಾನಿಯಾದ ಶ್ರೀನಗರವನ್ನು ಸಮೀಪಿಸಿದ್ದರು. ಹಿಂದುಸ್ತಾನ ಸರಕಾರದವರು ಮುಂಜಾಗ್ರತೆ ವಹಿಸಿ ಆ ದಾಳಿಗಾರರ ಮೇಲೆ ಏರಿ ಹೋಗಿರದಿದ್ದರೆ ಪ್ರಜೆಗಳ ಅಭಿಪ್ರಾಯದ ವಿರುದ್ಧವಾಗಿ ಇಂದು ಕಾಶ್ಮೀರವು ಪಾಕಿಸ್ತಾನದಲ್ಲಿ ಸೇರಿ ಹೋಗುತಿದ್ದಿತು. ಈ ದುರ್ಘಟನೆಯನ್ನು ತಪ್ಪಿಸುವದಕ್ಕಾಗಿಯೇ ಹಿಂದುಸ್ತಾನ ಸರಕಾರದವರು ಕಾಶ್ಮೀರ ಯುದ್ಧವನ್ನು ಸಾರಿ ಕಳೆದ ಹದಿನಾಲ್ಕು ತಿಂಗಳುಗಳಿಂದ ಅದನ್ನು ನಡೆಸಿಕೊಂಡು ಬಂದಿದ್ದಾರೆ. ಎಲ್ಲ ಬಗೆಯ ಅಡ್ಡಿ ಅಡಚಣೆಗಳನ್ನು ಯಶಸ್ವಿಯಾಗಿ ಎದುರಿಸಿ ಇಂದು ಪಾಕಿಸ್ತಾನ ಒಡಂಬಡಿಕೆಗೆ ಬರಲು ಮಾಡಿದ್ದು ಅಭಿನಂದನೀಯವಾಗಿದೆ. ಹಿಂದುಸ್ತಾನ ಸರಕಾರ ಮೊದಲಿನಿಂದಲೂ ಹೇಳುತ್ತ ಬಂದಂತೆ ಸಾರ್ವತ್ರಿಕ ಮತಗಣನೆಯಿಂದ ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸಲು ಪಾಕಿಸ್ತಾನ ಒಪ್ಪಿಕೊಂಡಿದೆ. ಈ ಸಮಯದಲ್ಲಿ ಜನತೆಯ ಮೇಲೆ ಯಾವದೇ ಬಗೆಯ ಒತ್ತಾಯವಾಗದಂತೆ ನೋಡಿಕೊಳ್ಳುವದು ಅವಶ್ಯವಾಗಿದೆ. ಪ್ರಜೆಗಳಾದರೂ ತಮ್ಮ ಭವಿತವ್ಯದ ನಿರ್ಣಯವನ್ನು ಅತ್ಯಂತ ದಕ್ಷತೆಯಿಂದ ಮಾಡುವದು ಕರ್ತವ್ಯವಾಗಿದೆ.

ಏಶಿಯಾ ರಾಷ್ಟ್ರಗಳ ಸಭೆ

ಇದೇ ತಿಂಗಳು ೨೦ ನೇ ತಾರೀಕಿಗೆ ಏಶಿಯಾ ರಾಷ್ಟ್ರಗಳ ಪರಿಷತ್ತನ್ನು ಕರೆಯಬೇಕೆಂದು ಹಿಂದುಸ್ತಾನ ಸರಕಾರದ ಮುಖ್ಯ ಮಂತ್ರಿಗಳು ಘೋಷಿಸಿದ್ದು ಸ್ವಾಗತಾರ್ಹವಾಗಿದೆ. ಏಶಿಯಾ ಪಲ್ಲಿಯ ಹದಿನೈದು ರಾಷ್ಟ್ರಗಳು ಈ ಸಮ್ಮೇಲನದಲ್ಲಿ ಭಾಗವಹಿಸಲಿರುವುವು. ಮುಖ್ಯವಾಗಿ ಇಂಡೋನೇಶಿಯಾ ಸಮಸ್ಯೆಯನ್ನು ಚರ್ಚಿಸುವುದಕ್ಕಾಗಿಯೇ ಈ ಪರಿಷತ್ತನ್ನು ಕರೆಯಲಾಗಿದ್ದರೂ ಏಶಿಯಾ ರಾಷ್ಟ್ರಗಳನ್ನು ಯುರೋಪ ಅಮೇರಿಕೆಯ ಪ್ರಬಲ ರಾಷ್ಟ್ರಗಳ ಆಕ್ರಮಣದಿಂದ ಮುಕ್ತಮಾಡುವ ಬಗ್ಗೆಯೂ ಚರ್ಚೆ ಮಾಡಲಾಗುವುದು. ಭದ್ರತಾಮಂಡಲದ ಆಜ್ಞೆಯನ್ನು ಧಿಕ್ಕರಿಸಿ ನಡೆಯುತಿರುವ ಡಚ್ಚರಿಗೆ ಪಾಠ ಕಲಿಸುವುದಕ್ಕಾಗಿಯೂ ಏಶಿಯಾ ರಾಷ್ಟ್ರಗಳು ಒಂದೆಡೆ ಕೂಡಿ ವಿಚಾರವಿನಿಮಯ ಮಾಡಿ ಭವಿತವ್ಯವನ್ನು ನಿರ್ಧರಿಸುವದು ಅವಶ್ಯವೆಂದು ಬೇರೆ ಹೇಳಬೇಕಿಲ್ಲ. ಭದ್ರತಾಮಂಡಳವು ಯುದ್ಧ ನಿಲ್ಲಿಸುವ ಆದೇಶ ಕೊಟ್ಟಿದ್ದರೂ ಡಚ್ಚರು ಅವನ್ನು ಕಡೆಗಣಿಸಿ ಈ ಪ್ರಶ್ನೆಯು ಕೇವಲ ತಮ್ಮ ಮತ್ತು ಇಂಡೋನೇಶಿಯಾ ರಾಷ್ಟ್ರಗಳ ನಡುವಿನ ಪ್ರಶ್ನೆಯಾದ್ದರಿಂದ ಇದರಲ್ಲಿ ಎರಡನೆಯವರು ಕೈಹಾಕಲಾರರೆಂದು ವಾದಿಸಿದ್ದಾರೆ. ಆದರೆ ಇದು ಎಷ್ಟರಮಟ್ಟಿಗೆ ಸಮಂಜಸವಾದುದೆಂಬುದು ವಿಚಾರ ಮಾಡತಕ್ಕ ವಿಷಯವಾಗಿದೆ. ಯಾವುದೊಂದು ದುರ್ಬಲ ರಾಷ್ಟ್ರದ ಮೇಲೆ ಪ್ರಭುತ್ವ ಪ್ರಸ್ಥಾಪಿಸುವದನ್ನೂ ಅದರ ರಾಜಕೀಯ ಸ್ವಾತಂತ್ರ್ಯವನ್ನು ಹತ್ತಿಕ್ಕುವುದನ್ನೂ ತಡೆಯಲು ಪ್ರಯತ್ನಿಸುವದು ಕರ್ತವ್ಯವಾಗಿದೆ. ಭದ್ರತಾಮಂಡಳವು ಪರಿಣಾಮಕಾರಕವಾದ ನ್ಯಾಯವನ್ನು ಇಂಡೋನೇಶಿಯಾಕ್ಕೆ ಒದಗಿಸಲು ಸಮರ್ಥವಾಗದ್ದರಿಂದಲೆ ಏಶಿಯ ರಾಷ್ಟ್ರಗಳು ತಮ್ಮ ಭವಿತವ್ಯವನ್ನು ನಿರ್ಣಯಿಸಿಕೊಳ್ಳಲು ಇಂತು ಅಣಿಯಾಗಬೇಕಾಗಿದೆ. ಇದರಲ್ಲಿ ಯಾವದೇ ಬಗೆಯ ಅನ್ಯಾಯ ಇಲ್ಲವೆ ಅಸಾಮಂಜಸ್ಯ ಇಲ್ಲವೆಂಬುದು ಸುಸ್ಪಷ್ಟವಾಗಿದೆ.

ಸಂಸ್ಥಾನಗಳ ಸಮೀಕರಣ

ಹಿಂದುಸ್ತಾನ ಸರಕಾರದವರು ವಿಲೀನ ಸಂಸ್ಥಾನಗಳನ್ನು ತಾತ್ಪೂರ್ತಿಕವಾಗಿ ಆಯಾ ಪ್ರಾಂತಗಳಲ್ಲಿ ಸೇರಿಸಿ ಆಡಳಿತವನ್ನು ಅವುಗಳಿಗೆ ಒಪ್ಪಿಸಿ ಕೊಟ್ಟಿರುವರಷ್ಟೆ. ಆದರೆ ಹೀಗೆ ಮಾಡಲು ಅವಶ್ಯಕವಾದ ಅಧಿಕಾರವನ್ನು ಪಡೆಯಲು ಸಂಸ್ಥಾನಖಾತೆಯ ಮಂತ್ರಿಗಳಾದ ಸರದಾರ ವಲ್ಲಭಭಾಯಿಯವರು ಘಟನಾಸಮಿತಿಯಲ್ಲಿ ಒಂದು ಮಸೂದೆಯನ್ನು ಮುಂದಿಟ್ಟು ಪಾಸು ಮಾಡಿಸಿಕೊಂಡರು. ೧೯೩೫ನೇ ಇಸ್ವಿಯ ಹಿಂದುಸ್ತಾನ ಸರಕಾರದ ಕಾಯದೆಯಲ್ಲಿ ಅವಶ್ಯಕ ತಿದ್ದುಪಡಿ ಮಾಡಿ ಸಂಸ್ಥಾನಗಳನ್ನು ಪ್ರಾಂತಗಳಲ್ಲಿ ಪೂರ್ಣ ಸಮಾವೇಶ ಮಾಡುವ ಅಧಿಕಾರವನ್ನು ಪಡೆಯುವದೆ ಈ ತಿದ್ದುಪಡಿಯ ಮುಖ್ಯಾಶಯವಾಗಿದ್ದಿತು. ಈ ಸಂಬಂಧದಲ್ಲಿ ಚರ್ಚೆಗೆ ಉತ್ತರ ಕೊಡುತ್ತ ಸರದಾರರು ಸಂಸ್ಥಾನಗಳ ಭವಿತವ್ಯವನ್ನು ಬರೆದು ಬಿಟ್ಟರು. ಭೋಪಾಳದ ಪ್ರಜೆಗಳು ಪ್ರಾಂತ ಅಥವಾ ಸಂಸ್ಥಾನ ಒಕ್ಕೂಟದಲ್ಲಿ ಸೇರಲು ನಿರ್ಧರಿಸಿದರೆ ನವಾಬರು ಅಡ್ಡಬರಲಾರರು ಎಂದು ಸರದಾರರು ಸಾರಿದರು. ಪ್ರಜಾಪ್ರಭುತ್ವ ಯುಗದಲ್ಲಿ ರಾಜರು ಪ್ರಜೆಗಳ ಅಭಿಪ್ರಾಯವನ್ನು ಕಡೆಗಣಿಸುವ ಧೈರ್ಯವನ್ನು ಮಾಡಲಾರರು. ಯಾವ ಸಂಸ್ಥಾನಗಳಿಗೆ ಪ್ರಾಂತಗಳಲ್ಲಿ ಸೇರುವದು ಬೇಡವಾಗಿದೆಯೋ ಅವು ಸ್ಪಷ್ಟವಾಗಿ ಹಾಗೆ ಹೇಳಲಿ; ಆದರೆ ಅಂಥವರು ಮುಂದೆ ಎಂದೂ ನಮ್ಮಿಂದ ಯಾವದೆ ಬಗೆಯ ಸಹಾಯವನ್ನು ಅಪೇಕ್ಷಿಸುವದಿಲ್ಲ ಎಂದು ಒಪ್ಪಿಕೊಳ್ಳಬೇಕು ಅಂದರೆ ಈ ಕಾಗದದ ಒಪ್ಪಂದವನ್ನು ರದ್ದುಗೊಳಿಸುವೆವೆಂದು ಸರದಾರರು ಹೇಳಿದರು. ಯಾವದೊಂದು ಸಂಸ್ಥಾನದ ಪ್ರಜೆಗಳ ಮತದ ವಿರುದ್ಧ ವಿಲೀನೀಕರಣವನ್ನಾಗಲಿ ಪ್ರಜಾಪ್ರಭುತ್ವವನ್ನಾಗಲಿ ತಾವು ಹೇರಬಯಸುವದಿಲ್ಲೆಂದೂ ಹೇಳಿದರು. ಕೊಲ್ಹಾಪುರ ಪ್ರಜೆಗಳಿಗೆ ವಿಲೀನೀಕರಣವು ಬೇಕಾಗಿದೆ. ಅಲ್ಲಿನ ಪರಿಸ್ಥಿತಿಯನ್ನು ನೋಡಿದರೆ ಸಾರ್ವತ್ರಿಕ ಮತಗಣನೆಗೆ ಅದು ಸದ್ಯಕ್ಕೆ ಅನುಕೂಲವಾಗಿಲ್ಲ ಎಂದೂ ಹೇಳಬಹುದು. ಸಂಸ್ಥಾನಗಳ ಸಮೀಕರಣವು ಸಂಪೂರ್ಣವಾಗಿ ಸಾಧ್ಯವಾದುದು ಅದರಿಂದ ಹಿಂದುಸ್ತಾನದ ಸಂಘಟನೆಗೆ ಬಲು ಅನುಕೂಲವಾಯಿತೆಂದು ಬೇರೆ ಹೇಳಬೇಕಿಲ್ಲ.

ಹರಿಜನ ಲೇಖ

ಸಮರಶಿಕ್ಷಣಕ್ಕಿಂತಲೂ ಮೇಲು

“ಭಾರತದ ಜೀವನದ ಗರ್ಭದಲ್ಲಿ ನಿಜವಾದ ಬಂಧುಭಾವ ಬೆಳೆಯುತ್ತಿದೆಯೆಂದು ಕೇಳಿ ನಿಜವಾಗಿ ಧೈರ್ಯವುಂಟಾಗುತ್ತಿದೆ. ನಾಗರಿಕಂಮನ್ಯರಾದ ನಾವು ಪಾಶ್ಚಾತ್ಯರು, ವಿಧಿವಿಧಾನದ ಜಂಜಾಟದಲ್ಲಿ ತೊಳಲುತ್ತ ಮಾನವನೀತಿಯ ವಿಷಯದಲ್ಲಿ ಎಷ್ಟು ಹಿಂದೆ ಬಿದ್ದಿದ್ದೇವೆ! ಯೇಸುಕ್ರಿಸ್ತನು ತನ್ನ ಅನುಯಾಯಿಗಳ ಹೃದಯದಲ್ಲಿ ಅವತರಿಸುವೆನೆಂದಂತೆ ಗಾಂಧೀಜಿಯೂ ಸಮಾನಧರ್ಮರಾದವರ ಹೃದಯದಲ್ಲಿ ಒಂದಲ್ಲ, ಕೋಟ್ಯಂತರ ಅವತಾರಗಳನ್ನು ಎತ್ತಿದ್ದಾರೆ. ಭಾರತದಲ್ಲಿದ್ದ ಬಿಶಪ್ ಫಿಶರರು ಗಾಂಧಿಯೊಬ್ಬನೇ ಭಾರತದಲ್ಲಿರುವ ನಿಜವಾದ ಕ್ರೈಸ್ತನೆಂದು ಹಿಂದೊಮ್ಮೆ ಹೇಳಿದ್ದರು. ಅದು ತೀರ ಉತ್ಪ್ರೇಕ್ಷೆಯ ಮಾತೆಂದು ನಾನು ಆಗ ಭಾವಿಸಿದ್ದರೂ ಈಗ ಅವರೆಂದುದು ಸತ್ಯಕ್ಕೆ ಅನತಿದೂರವೆಂದು ನನಗೆನಿಸುತ್ತಿದೆ.... ಯೇಸು ಕ್ರಿಸ್ತನ ಕತೆ ಪುನಃ ಭರತ ಭೂಮಿಯಲ್ಲಿ ಅಭಿನಯಿಸಲ್ಪಟ್ಟಿತೇನೋ. ಇಲ್ಲಿ ಗಾಂಧಿಯ ಬಗ್ಗೆ ಬುದ್ಧಿಶಾಲಿಗಳೆಲ್ಲರಲ್ಲಿಯೂ ಗಾಢವಾದ ಆದರವಿದೆ. ಆದರೂ ಶಸ್ತ್ರಸಂನ್ಯಾಸಕ್ಕೆ, ಶಸ್ತ್ರಬಲವನ್ನು ಮಿತಿಗೊಳಪಡಿಸಲಿಕ್ಕೆ ಅಂಜುವ ಭ್ರಾಂತಚಿತ್ತರ ಸಂಖ್ಯೆ ಅದಕ್ಕಿಂತಲೂ ಹೆಚ್ಚಾಗಿದೆ. ಹದಿನೆಂಟು ವಯಸ್ಸಿನ ಹುಡುಗರಿಗೆಲ್ಲ ಸಾರ್ವತ್ರಿಕ ಸಮರಶಿಕ್ಷಣ ಕೊಡಬೇಕೆನ್ನುತ್ತಾರೆ ಅವರು.”

ಹೀಗೆ ಬರೆಯುತ್ತಾರೆ ಭಾರತದ, ಮಿತ್ರರೂ ಗಾಂಧೀಜಿಯ ಪ್ರಶಂಸಕರೂ ಆದ ವಿದೇಶೀಯರೊಬ್ಬರು. ನರಕಸದೃಶವಾದ ಯುದ್ಧಯಾತನೆಯಿಂದ ದೂರವಾದ ಶಾಂತಿಮಾರ್ಗದಲ್ಲಿ ಭಾರತದಿಂದ ಮಾರ್ಗದರ್ಶನವನ್ನು ಅಪೇಕ್ಷಿಸುವ ಸಾವಿರಗಟ್ಟಲೆ ಜನರು ಪಶ್ಚಿಮ ದೇಶಗಳಲ್ಲಿರುವರೆಂದು ಹೇಳಲು ಬೇಕಾದಷ್ಟು ಪ್ರಮಾಣಗಳು ದೊರೆಯಬಹುದು.

ಆದರೆ ನಮ್ಮ ಮುಂದಾಳುಗಳಲ್ಲಿಯೂ ಹಲವಾರು ಜನರು “ಭ್ರಾಂತಚಿತ್ತ”ರಾಗಿದ್ದಾರೆಂದು ತೋರುತ್ತದೆ. ಗತಕಾಲದ ಸಂಗತಿಗಳಿಂದ ತೀರ್ಮಾನಕ್ಕೆ ಬರುವ ಪ್ರಯತ್ನ ಬೇಡ. ಸನ್ಮಾರ್ಗದರ್ಶನವನ್ನೆ ಮಾಡಿದ ನಮ್ಮ ಮುಂದಾಳುಗಳನ್ನು ನಿಷ್ಕಾರಣವಾಗಿ ನಿಂದೆಗೆ ಗುರಿಮಾಡೋಣ ಬೇಡ. ಹೈದರಾಬಾದಿನ ವಿಷಯದಲ್ಲಿ ಭಾರತ ಸರಕಾರ ಅಹಿಂಸಾಪೂರ್ಣ ಸಹನೆಯನ್ನೆ ಅವಲಂಬಿಸಿತ್ತೆಂದು ನನ್ನೆಣಿಕೆ. ಸಾರ್ವಜನಿಕ ಅಭಿಪ್ರಾಯವೂ ಸ್ಥಿತಿಗತಿಗಳೂ ಉಲ್ಬಣಾವಸ್ಥೆಗೆ ಮುಟ್ಟಿದ ನಂತರವೇ ಹೈದರಾಬಾದ ಸಂಸ್ಥಾನದ ಗಡಿಯೊಳಗೆ ಸೈನ್ಯದ ಪ್ರವೇಶವಾಯಿತು. ಅಲ್ಲಾದರೂ ಪೂರ್ಣಸನ್ನಾಹದ ಬಲದಿಂದ ಎಂದು ತೋರುತ್ತದೆ, ಶೀಘ್ರವಾಗಿಯೂ ಸಾಧ್ಯವಿದ್ದಷ್ಟು ಕಡಿಮೆ ಹಿಂಸೆಯಿಂದಲೂ ಮಾಡಬೇಕಾದುದನ್ನು ಮಾಡಿ ಮುಗಿಸಿದರು. ಆದರೂ ಗಾಂಧೀಜಿ ಉಪದೇಶಿಸಿದಂತೆ ಅಹಿಂಸಾಮಾರ್ಗವನ್ನು ಅನುಸರಿಸಬೇಕೆಂಬವರಲ್ಲಿ ಒಬ್ಬನೆನಿಸುವ ನಾನು ಈ ಸಂದರ್ಭದಲ್ಲಿ ದೇಶಕ್ಕೆ ಯಾವ ಬಗೆಯ ಮಾರ್ಗದರ್ಶನವನ್ನು ಮಾಡಿದೆನೆಂದು ನಾನೇ ಶಂಕಿಸುತ್ತಿದ್ದೇನೆ! ಇಂಥ ಅವಸ್ಥೆಯಲ್ಲಿ ನಾನು ನಮ್ರನೆ ಆಗಿರಬೇಕಲ್ಲವೆ?

ಆದರೂ ಕಾಂಗ್ರೆಸ್ ಸರಕಾರವು ಮಾಡಿದ ಮಾರ್ಗದರ್ಶನ ನಿಶ್ಚಿತವಾಗಿ ಸಮರಾತ್ಮಕ ಮಾರ್ಗದರ್ಶನವೆಂದು ಮನಗಂಡು ನಾವು ವ್ಯಥಿತರಾಗುತ್ತೇವೆ. ಅವರು ಉಪಯೋಗಿಸಿದ ವಾದಗಳೂ ಪಾಶ್ಚಿಮಾತ್ಯ ಸಮರವಾದಿಗಳು ಉಪಯೋಗಿಸಿದವುಗಳೂ ಒಂದೇ ಬಗೆಯವು. ಕೆಲಜನ ಶಿಕ್ಷಣಮಂತ್ರಿಗಳೂ ಇತರರೂ ಶಾಲೆಗಳಲ್ಲಿ ಸಮರಶಿಕ್ಷಣವನ್ನು ಪ್ರಾರಂಭಿಸಲು ಅಕಾರಣ ಆತುರವನ್ನು ಪ್ರದರ್ಶಿಸುತ್ತಿದ್ದಾರೆ. ಒಂದು ಸಂದರ್ಭದಲ್ಲಂತೂ ಸಮರಶಿಕ್ಷಣವನ್ನು ತಾತ್ವಿಕವಾಗಿ ವಿರೋಧಿಸುವ ಒಂದಾನೊಂದು ಶಾಲೆಯ ಅಧಿಕಾರಿಗಳು ಈ ವಿಚಾರದಲ್ಲಿ ಸರಕಾರದವರಿಂದ ತಮ್ಮ ಮೇಲೆ ಒತ್ತಾಯ ಬರಬಹುದೆಂದು ಚಿಂತೆಗೊಳಗಾಗಿದ್ದಾರಂತೆ.

ದೇಹದಾರ್ಢ್ಯವನ್ನೂ ಶಾರೀರಿಕ ನಿಯಮವನ್ನೂ ಸಾಧಿಸಬೇಕಾದರೆ ಸಮರ ಶಿಕ್ಷಣವಲ್ಲದೆ ಬೇರೆ ದಾರಿಗಳೂ ಇವೆ. ನಮಗೆ ಬೇಕಾಗಿದೆ ಪ್ರಜಾತಂತ್ರ. ಸೈನಿಕ ಪದ್ಧತಿಯ ಗುಣಗಳೇನೇ ಇರಲಿ ಅದು ಪ್ರಜಾತಂತ್ರಕ್ಕೆ ಅತ್ಯಂತ ಮಾರಕವಾದುದು. ಅದರಲ್ಲಿ ಶಿಸ್ತಿದೆ— ಆದರೆ ಅದು ಕರ್ತವ್ಯಕಾಲದಲ್ಲಿ ಮಾತ್ರ; ಒಮ್ಮೆ ಆ ಬಂಧನ ಸಡಿಲಿತೆಂದರೆ ಸಾಕು, ಅತ್ಯಂತ ಶಿಸ್ತುಗೆಟ್ಟ ವರ್ತನೆಯಲ್ಲಿ ಅದರ ಪ್ರತಿಕ್ರಿಯೆಯಾಗುತ್ತದೆ! ಮತ್ತಾರಲ್ಲದಿದ್ದರೂ ಸೈನಿಕರು.. ಪಾಶ್ಚಿಮಾತ್ಯ ಸೈನಿಕರಾದರೂ.. ಕರ್ತವ್ಯ ಬಂಧನದಿಂದ ಬಿಡುಗಡೆ ದೊರೆತಾಗ ನಡೆದುಕೊಳ್ಳುವ ರೀತಿಯನ್ನು ನೋಡಿರಿ. ಮೊನ್ನೆ ಮೊನ್ನೆ ಪಾಶ್ಚಾತ್ಯ ದೇಶಗಳಲ್ಲಿ ಪ್ರವಾಸ ಮಾಡಿ ಮರಳಿದ ಶ್ರೀ ಜೆ. ಸಿ. ಕುಮಾರಪ್ಪನವರು, ಅಮೇರಿಕನ್ ಸೈನಿಕರ ಮೇಲೆ ಬ್ರಿಟನ್ನಿನಲ್ಲಿ ಮೊದಲ್ಗೊಂಡು ಯುರೋಪದಲ್ಲೆಲ್ಲ ಹಬ್ಬಿದ ದ್ವೇಷಭಾವನೆಯನ್ನು ಕುರಿತು ಹೇಳುತ್ತಾರೆ. ಅಮೇರಿಕನ್ ಸೈನಿಕರು ಬಿಡುವಿನಲ್ಲಿ ಆಚರಿಸುವ ರೀತಿಯೆ ಇದಕ್ಕೆ ಕಾರಣ. ಅವರು ಬಿಡುವಿನಲ್ಲಿ ಹೊರಬಿದ್ದಾಗವಾಗ ಎದುರಿಗೆ ಸಿಗುವ ಸ್ತ್ರೀಯರು ಸುರಕ್ಷಿತವಾಗಿರುವಂತಿಲ್ಲ! ಸದ್ಯದಲ್ಲಿ ಅವರಿಗಿಂತ ಹೆಚ್ಚು ಶಿಸ್ತುಳ್ಳ ನಮ್ಮ ಭಾರತೀಯ ಯುವಕರೂ ಇದೇ ಮಾದರಿಯ ನಡೆವಳಿಯವರಾಗಬೇಕೆಂದು ನಮ್ಮ ಬಯಕೆಯೆ? ಅನೇಕ ವರ್ಷಗಳ ಹಿಂದೆ, ಅಧ್ಯಕ್ಷ ರೂಜವೆಲ್ಟರು ಪ್ರಾರಂಭಿಸಿದ ಪೈರಿನ ಸಂರಕ್ಷಣೆಯ ಚಟುವಟಿಕೆಗಳ ಕಾಲದಲ್ಲಿ ಕಂಡು ಬಂದ ರಚನಾತ್ಮಕ ಶಿಸ್ತಿನ ನಡೆವಳಿಯಿಂದ ಅಮೇರಿಕನ್ ನಾಗರಿಕರಿಗೆ ಸಾನಂದಾಶ್ಚರ್ಯವಾಯಿತಂತೆ. ಕಾಡು ಬೆಳೆಸುವದು, ಭೂಸಾರನಾಶದ ವಿರುದ್ಧ. ಕ್ರಮಗಳನ್ನು ಕೈಕೊಳ್ಳುವದೇ ಮೊದಲಾದ ರಾಷ್ಟ್ರ ಹಿತ ಕಾರ್ಯಗಳಿಗಾಗಿ ಯುವಕರನ್ನು ನಿಯೋಜಿಸಲಾಗಿತ್ತು. ಅರ್ಥಪೂರ್ಣವಾದ ಆ ಶಾರೀರಕ ಪರಿಶ್ರಮದ ವೇಳೆಯಲ್ಲಿ ಅವರು ಉತ್ತಮವಾದ, ನಿಜವಾದ ಶಿಸ್ತನ್ನು ತೋರ್ಪಡಿಸಿದರು. ಅವರು ಸುಯೋಗ ವಾತಾವರಣದಲ್ಲಿ ನಾಗರಿಕ ಕರ್ತವ್ಯಗಳನ್ನು ಕಲಿತರು. ಅಜ್ಞಾನಮಯ ವಿಕಾಸಪರ ವಾತಾವರಣದಲ್ಲಿ ವೃತ್ತಿ ಶಿಕ್ಷಣದ ವರ್ಗಗಳಿಗೆ ಉತ್ತೇಜನ ಕೊಡಲಾಗುತಿತ್ತು. ಭಾರತವೂ ಕಾಲೇಜ ಶಿಕ್ಷಣದ ಅಂಗವಾಗಿ ಅಂಥ ಕ್ರಮವನ್ನು ಕೈಕೊಳ್ಳಬೇಕೆಂದು ಸೂಚಿಸಿದೆ. ಆದರೆ ಅದನ್ನು ತನ್ನಲ್ಲಿ ಕೈಕೊಳ್ಳಲಾಗಿದೆಯೆಂದು ಹೇಳಿಕೊಳ್ಳುವ ಸಂಸ್ಥೆಯ ಹೆಸರನ್ನು ನಾನಂತೂ ಇನ್ನೂ ಕೇಳಿಲ್ಲ. ಗಾಂಧೀ ಗ್ರಾಮದಲ್ಲಿ ನಾಳೆ ದೀರ್ಘರಜೆಯ ಕಾಲದಲ್ಲಿ ನಾವು ಒಂದು ಪರಿಶ್ರಮ ಶಿಬಿರವನ್ನು ಪ್ರಾರಂಭಿಸಬೇಕೆಂದಿದ್ದೇವೆ. ನಾವು ಸಂಕಲ್ಪಿಸಿರುವ ಸಹಕಾರಿ ಕೃಷಿ ನಿವೇಶನದಲ್ಲಿ ನಮಗೆ ಸಹಾಯ ಮಾಡಲು ಬರಬಯಸುವ ಕಾಲೇಜ ವಿದ್ಯಾರ್ಥಿಗಳಿಗೆ ಉತ್ತೇಜನ ಕೊಡಲಾಗುವದು. ಈ ನಿವೇಶನಕ್ಕೆ ಬಂದಿರುವ ಹಳ್ಳಿಗರ ಜತೆಯಲ್ಲಿ ಅವರು ಕೆಲಸ ಮಾಡಬೇಕಾಗುವದು. ಅವರು ಅಣೆಕಟ್ಟುಗಳನ್ನೂ ಭೂಸಾರನಾಶವನ್ನು ತಡೆಯುವ ಒಡ್ಡುಗಳನ್ನೂ ಕಟ್ಟುವರು. ಈಗಾಗಲೆ ನಟ್ಟಿರುವ ಹಣ್ಣಿನ ಗಿಡಗಳಿಗೆ ನೀರೆರೆದು ಅವರು ಭಾವೀ ಪೀಳಿಗೆಗಾಗಿ ಕೆಲಸ ಮಾಡುವ ಅವಶ್ಯಕತೆಯನ್ನು ಮನಸಿನಲ್ಲಿ ಅಚ್ಚೊತ್ತಿಕೊಳ್ಳುವರು. ವಿರಾಮ ವೇಳೆಯಲ್ಲಿ ಅವರು ರಚನಾತ್ಮಕ ಕಾರ್ಯಕ್ರಮವನ್ನು ಅಭ್ಯಸಿಸುವರು. ಅವರು ಅಹಿಂಸೆಯ ಅರ್ಥ ವಿಶೇಷಗಳನ್ನೂ ಚರ್ಚಿಸುವರು. ಅವರನ್ನು ಶಾಂತಿಪಥಕವಾಗಿ ಸಂಘಟಿಸಲಾಗುವದು. ಅವರು ತಮ್ಮ ಕಾಲೇಜುಗಳಿಗೆ ಮರಳಿದಾಗ, ಕಳೆದ ವರ್ಷದ ಶಿಬಿರ ಸದಸ್ಯರು.. ಆಗ ಈ ಶಿಬಿರ ಪರಿಶ್ರಮ ಶಿಬಿರವಾಗಿದ್ದಿಲ್ಲ.. ತಮ್ಮ ಕಾಲೇಜುಗಳಲ್ಲಿ ನೂಲುವ ಮತ್ತು ಇತರ ಕಾರ್ಯಗಳ ವರ್ಗಗಳನ್ನು ಸಂಘಟಿಸಿದಂತೆ ವಿಶೇಷ ವರ್ಗಗಳನ್ನು ಪ್ರಾರಂಭಿಸಬಹುದು. ಈ ಶಿಬಿರಗಳಲ್ಲಿ ಆತ್ಯಂತಿಕ ಶಿಸ್ತು ಮತ್ತು ನೈಷ್ಠಿಕ ಜೀವನವಿದೆ. ಆದರೆ ಆ ಶಿಸ್ತು ಬಾಂಧವ್ಯದಿಂದಲೇ ಮೊಳೆತು ಬೆಳೆದುದು. ವಿದ್ಯಾರ್ಥಿಗಳು ತಮ್ಮದೇ ಆದ ಕಾರ್ಯ ಸಮಿತಿಯನ್ನು ಆರಿಸುವರು. ಯಾವಾಗಲೂ ಯುವಕರ ಮನೋಭಾವನೆಗಳನ್ನು ಸಹಾನುಭೂತಿಪೂರ್ವಕವಾಗಿ ಅರಿತುಕೊಳ್ಳಬಲ್ಲ ಅನುಭವಶಾಲಿಗಳಾದವರ ಮುಂದಾಳ್ತನದಲ್ಲಿ ಯುವಕರು ತಮ್ಮ ದೈನಂದಿನ ಕಾರ್ಯಕ್ರಮಗಳನ್ನು ಗೊತ್ತುಪಡಿಸುವರು. ಆದರೆ ಇದರ ಸೂಕ್ಷ್ಮ ವಿವರಣೆ ಅವಶ್ಯವಿಲ್ಲ. ಸರಕಾರಗಳು ಈ ಬಗೆಯಲ್ಲಿ ವಿದ್ಯಾರ್ಥಿಗಳನ್ನು ಪ್ರವರ್ತಕ ತರಬೇತಿಗೊಳಪಡಿಸುವ ವಿಷಯದಲ್ಲಿ ಗಾಢಾಲೋಚನೆ ಮಾಡಬೇಕೆಂದಿಷ್ಟೇ ನಮ್ಮ ಸೂಚನೆ.

ನಾವು ಅಹಿಂಸಾನಿಷ್ಠನೆಂದಿನಿಸಿಕೊಳ್ಳುತಿದ್ದರೂ ಹಿಂಸಾಕಾರ್ಯದಲ್ಲಿ ಪ್ರವೃತ್ತರಾಗಿದ್ದಾಗಲೂ ಅಹಿಂಸಾತ್ಮರಾಗಿರುವ ನೆಹರು ಪ್ರಭೃತಿಗಳ ಕೃತಿಗಳನ್ನು ಖಂಡಿಸುವ ಗೋಜಿಗೆ ಹೋಗಲಾರೆ. ಆದರೆ ರಚನಾತ್ಮಕ ಕಾರ್ಯದಲ್ಲಿರಲಿ, ಸರಕಾರಿ ಅಧಿಕಾರ ಪದಗಳಲ್ಲಿರಲಿ, ಅಹಿಂಸೆಯಲ್ಲಿ ನಿಜವಾದ ವಿಶ್ವಾಸುಳ್ಳವು ನಮ್ಮಂಥವರೆಲ್ಲರೂ ಅದರ ಸಾಧನೆಗಾಗಿ ಹೆಚ್ಚು ಮನಃಪೂರ್ವಕವಾಗಿ ದುಡಿಯಬೇಕಾದುದು ಅವಶ್ಯವೆಂದು ಸೂಚಿಸುವೆ. ಶಾಲೆ ಕಾಲೇಜುಗಳಲ್ಲಿ ಸಮರ ಶಿಕ್ಷಣಕ್ಕಿಂತ ಹೆಚ್ಚು ರಚನಾತ್ಮಕವಾದ ಬೇರೊಂದು ಕ್ರಮ ಖಂಡಿತವಾಗಿ ಅವಶ್ಯವಿದೆ. ಅದು ಸಾಮಾನ್ಯ ಆಟಪಾಟಗಳಿಗಿಂತ ಉದಾತ್ತವಾಗಿರಬೇಕು. ಅದರಲ್ಲಿ ವಾಸ್ತವಿಕತೆಯ ತಾನವಿರಬೇಕು. ಅದು ಜೀವನ ಸಮಸ್ಯೆಯೊಡನೆ ಸಂಗತವಾಗಿರಬೇಕು. ಅದು ಯುವಕರ ಧ್ಯೇಯವಾದವನ್ನು ಕೆರಳಿಸುವಂತಿರಬೇಕು. ಅರ್ಥಾತ್ ಅದಕ್ಕೆ ಒಂದು ಬಗೆಯ ಭವಿಷ್ಯತ್ ಸಂಕೇತಾರ್ಥವಿರಬೇಕು. ಅದು ಜಗತ್ತಿಗೇ ಅರ್ಥವತ್ತೆನಿಸಬಹುದಾದ ಪ್ರವರ್ತಕ ಪ್ರಯತ್ನದಿಂದ ಗರ್ಭಿತವಾಗಿರಬೇಕು. ಒಂದು ಕಾಲದಲ್ಲಿ ಚೀನದ ಎಷ್ಟೋ ಯುವಕರನ್ನು ಹುರಿದುಂಬಿಸಿದ ನವಜೀವನ ಆಂದೋಲನದಂತೆ ಸ್ವಲ್ಪಮಟ್ಟಿಗಾದರೂ ಧಾರ್ಮಿಕ ಆವೇಶ ಅದರಲ್ಲಿರಬೇಕು. ಈ ಭಾವನೆಯ ಸಂಗಡ, ಮತ್ತು ಅಖಂಡ ಜಗತ್ತನ್ನು ಕಟ್ಟುವ ಚಟುವಟಿಕೆಗಳೊಡನೆ ನಮ್ಮ ಶಾಲೆ ಕಾಲೇಜುಗಳಲ್ಲಿ ಬಡವರ ಅವಶ್ಯಕತೆಗಳನ್ನು ಗಮನಿಸುವ ಶಾಂತಿಪಥಕಗಳು ಸಂಘಟಿತವಾಗಬೇಕು. ಆಸ್ಥೆಯುಳ್ಳ ಯುವಕರಿಗೆ ಅಹಿಂಸಾಹೃದಯವನ್ನೂ ಸತ್ಯಾಗ್ರಹ ಸಾಮರ್ಥ್ಯವನ್ನೂ ಅರಿಯುವ ಅವಕಾಶ ಕೊಡಬೇಕು. ಅವರು ಅಪೇಕ್ಷಿಸಿದರೆ ರಣರಂಗಗಳಿಗೆ ಅಥವಾ ಯುದ್ಧಪ್ರಸಕ್ತವಾದ ನಮ್ಮವೇ ಗಡಿನಾಡುಗಳಿಗೆ ಹೋಗಿ ಶಾಂತಿಸಿದ್ಧಿಗಾಗಿ ತಮ್ಮ ಪ್ರಾಣ ಕೊಡುವ ಕಾರ್ಯಕ್ಕಾಗಿ ಪೂರ್ವ ತರಬೇತಿ ಅವರಿಗೆ ದೊರೆಯುವಂತಿರಬೇಕು. ಇಂಥ ತರಬೇತಿಯೂ ಶಿಸ್ತೂ ಸಮರ ಶಿಕ್ಷಣಕ್ಕಿಂತ ಕಷ್ಟತರವೆಂದು ನಾ ಬಲ್ಲೆ. ಆದರೂ ಅದನ್ನು ಒಡನೆ ಪ್ರಾರಂಭಿಸಬೇಕು. ಖಾಸಗಿ ಮತ್ತು ಸರಕಾರಿ ಸಂಸ್ಥೆಗಳೆರಡರಲ್ಲೂ.

ಜಾಗತಿಕ ಶಾಂತಿವಾದಿಗಳ ಸಮಿತಿಯು ಭಾರತಕ್ಕೆ ಮುಂದಿನ ಜಾನೇವರಿಗೆ ಬರುವದಿತ್ತು. ಕೆಲ ತಿಂಗಳು ಅದನ್ನು ಮುಂದೆಹಾಕಲಾಗಿದೆ. ಆದರೆ ಅಖಿಲ ವಿಶ್ವದ ಶಾಂತತಾವಾದಿಗಳಿಗೆ, ಅಣುಬಾಂಬಿನ ಮೂಲಕ ಉಂಟಾಗಬಹುದಾದ ಬಿಕ್ಕಟ್ಟಿನ ಸಂದರ್ಭಗಳಿಗಾಗಿ ಹೊಸ ಉಪಾಯಯೋಜನೆಯು ಅಗತ್ಯ ಎನ್ನಿಸಹತ್ತಿದೆ. ಅವರೆಲ್ಲ ಗಾಂಧೀಜಿಯ ಮಾರ್ಗದರ್ಶನದ ಬಗ್ಗೆ ಆಶಾನ್ವಿತ ನಿರೀಕ್ಷೆಯಿಟ್ಟುಕೊಂಡಿದ್ದರು. ಇಂದು ಅವರ ಅನುಯಾಯಿಗಳತ್ತ ನೋಡುತ್ತಿದ್ದಾರೆ. ಅವರು ಭಾರತಕ್ಕೆ ಬಂದಾಗ ನಿರಾಶೆಗೊಂಡು ಮರಳುವಂತಾಗದಿರಲಿ. ನಮ್ಮ ರಾಷ್ಟ್ರ ನಿರ್ಮಾಪಕ ಕೇಂದ್ರಗಳಲ್ಲಿ ನಿಜವಾದ ಸತ್ವಯುತ ಕಾರ್ಯವು ಪ್ರತ್ಯಕ್ಷವಾಗಿ ನಡೆದಿದೆಯೆಂಬುದನ್ನೂ ಇದರ ತಳಹದಿಯ ಮೇಲೆಯೇ ಜಾಗತಿಕ ಶಾಂತಿಸ್ಥಾಪನೆಯು ಸಾಧಿಸಬಹುದೆಂಬುದನ್ನೂ ಅವರು ಮನಗಾಣಲಿ. ಜಗತ್ತನ್ನೆಲ್ಲ ಶಾಂತತೆಯ ದಾರಿಗೆ ಹಚ್ಚುವಂತಹ ರೀತಿಯಲ್ಲಿ ಸಾಗಿದ ತಮ್ಮ ರಾಜ್ಯಭಾರದ ಯೋಜನೆಗಳನ್ನು ಆಳುವವರ ಮುಖಾಂತರ ಅವರು ಕೇಳಿ ಅರಿವಂತಾಗಲಿ. ಈ ದಿನಗಳಲ್ಲಿ ಭಾರತಕ್ಕೆ ಈ ದೃಷ್ಟಿಯಿಂದ ಅನೇಕ ಅಸಾಧಾರಣ ಸುಸಂಧಿಗಳು ಲಭಿಸಿವೆ. ಇದರ ಅರಿವು ನಮಗುಂಟೆ? ಇದಕ್ಕೆ ತಕ್ಕಂತೆ ನಾವು ನಡೆದುಕೊಳ್ಳುತ್ತಿರುವೆವೆ? ಈ ಬಗ್ಗೆ ವಿಶೇಷ ಆಸ್ಥೆ ಇದ್ದವರು, ಇದೇ ಧೋರಣೆ ಇಟ್ಟುಕೊಂಡ ಪತ್ರಿಕೆಗಳ ಮುಖಾಂತರ ಸಾರ್ವಜನಿಕ ವಿಚಾರಪ್ರಸಾರ ಕೈಕೊಂಡು, ಜಗತ್ತು ಮುಂದೇನನ್ನು ಎದುರಿಸಬೇಕಾಗಿದೆ ಹಾಗೂ ಗಾಂಧೀಜಿಯ ನಿಷ್ಠಾವಂತ ವಿಶಿಷ್ಟ ಅನುಯಾಯಿಗಳಾದ ನಮ್ಮಲ್ಲಿ ಯಾವ ನಿವಾರಣೋಪಾಯಗಳಿವೆ ಎಂಬುದನ್ನು ಸ್ಪಷ್ಟಪಡಿಸುವದು ಯುಕ್ತವೂ ಅವಶ್ಯವೂ ಎಂದು ನಾನಿಲ್ಲಿ ಸೂಚಿಸಬಹುದೆ? ಅನೇಕ ವರ್ಷಗಳ ಹಿಂದೆ ನಾನೊಮ್ಮೆ ಗಾಂಧೀಜಿಗೆ, ತಮಗೆ ನಮ್ಮಿಂದ ಅತ್ಯುತ್ತಮ ನೆರವು ದೊರಕಲು ನಾವೇನು ಮಾಡಬೇಕು ಎಂದು ಕೇಳಿದೆ. ಅವರು ತುಸು ಹೆಚ್ಚುಕಡಮೆ ಕೆಳಗಿನಂತೆ ಉತ್ತರ ಹೇಳಿದರು:

“ನಾನು ಅಹಿಂಸೆಯ ಬಗ್ಗೆ ಅತ್ಯಲ್ಪವನ್ನು ಮಾತ್ರ ಅರಿತಿದ್ದೇನೆ ಮತ್ತು ಅಹಿಂಸೆಯಿಂದ ಅತ್ಯಲ್ಪವನ್ನೇ ಸಾಧಿಸಿದ್ದೇನೆ. ಇನ್ನೂ ಅಪಾರ ಪ್ರಯೋಗ ನಡೆಯಬೇಕಾಗಿದೆ. ಈ ಅಜಿಂಕ್ಯ ಆತ್ಮಶಕ್ತಿಯ ವಿಷಯಕ್ಕೆ ಭಾರತದಲ್ಲಿ ಸರ್ವತ್ರ ನೂರಾರು ಪ್ರಯೋಗ ಕೇಂದ್ರಗಳಾದರೂ ಆಗಬೇಕು. ಅಹಿಂಸಾ ಪ್ರಯೋಗ ಕೈಕೊಳ್ಳುವ ಮೂಲಕ ನನಗೆ ನಿಮ್ಮಿಂದ ಅಸದೃಶ ನೆರವು ದೊರಕಬಹುದು.”

ರಚನಾತ್ಮಕ ಕಾರ್ಯಕರ್ತರಿಗೆ ಇದಕ್ಕಿಂತ ಹೆಚ್ಚು ಆಹ್ವಾನವು ಇನ್ನಾವುದಿದೆ? ನಾವೆಲ್ಲ ಇದನ್ನು ಎದುರಿಸೋಣ.

—ರ್‍ಯಾಲ್ಫ ರಿಚರ್ಡ ಕೈಥಾನ

ಭಾರತದ ಘಟನಾಸಮಿತಿ

ಹದಿನೈದು ದಿನಗಳ ವಿರಾಮಾನಂತರ ಘಟನಾಸಮಿತಿಯು ಮತ್ತೆ ಡಿಸೆಂಬರ ತಾ. ೨೭ ಕ್ಕೆ ಸಭೆ ಸೇರಿತು. ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರೆ ಆರೋಗ್ಯ ಸರಿಯಾಗಿರದ್ದುದರಿಂದ ಆ ಸ್ಥಾನವನ್ನು ಉಪಾಧ್ಯಕ್ಷ ಶ್ರೀ ಎಚ್. ಸಿ. ಮುಕರ್ಜಿಯವರು ಅಲಂಕರಿಸಿದ್ದರು.

ಈ ದಿನ ನಡೆದ ಚರ್ಚೆಯು ಹಿಂದುಸ್ತಾನ ಒಕ್ಕೂಟದ ಅಧ್ಯಕ್ಷ ಪದದ ಚುನಾವಣೆಗೆ ನಿಲ್ಲತಕ್ಕವರ ಪಾತ್ರಾಪಾತ್ರತೆಯನ್ನು ಕುರಿತಿತ್ತು. ಈ ಹುರಿಯಾಳು ಹಿಂದುಸ್ತಾನದ ನಾಗರಿಕನಾಗಿರಬೇಕು, ೩೫ ವರ್ಷ ಮಿಕ್ಕಿರಬೇಕು, ಲೋಕಸಭೆಯ ಸದಸ್ಯನಾಗಿರಬೇಕು, ಎಂದೂ ಕೇಂದ್ರ ಇಲ್ಲವೆ ಪ್ರಾಂತಿಕ ಸರಕಾರಗಳ ನೌಕರನಾಗಿರಕೂಡದು ಎಂದೂ ಈ ಕಲಮಿನಲ್ಲಿದೆ. ಇದಕ್ಕೆ ಪ್ರೊ. ಶಹಾ ಹಾಗೂ ಡಾ. ಅಂಬೇಡಕರರು ತಿದ್ದುಪಡಿ ತಂದರು. ಪ್ರೊ. ಶಹಾ ಅವರ ತಿದ್ದುಪಡಿ ಬಿದ್ದುಹೋಗಿ ಡಾ. ಅಂಬೇಡಕರರ ತಿದ್ದುಪಡಿಯು ಸ್ವೀಕೃತವಾಯಿತು. ಪ್ರಾಂತಗಳ ಇಲ್ಲವೆ ಕೇಂದ್ರದ ಗವರ್ನರರಾಗಲಿ ಮಂತ್ರಿಗಳಾಗಲಿ ಸ್ವಂತ ಲಾಭಕ್ಕಾಗಿ ಸರಕಾರಿ ನೌಕರಿಯಲ್ಲಿ ಸೇರಿದವರಲ್ಲವಾದ್ದರಿಂದ ಅಧ್ಯಕ್ಷ ಪದದ ಆಯ್ಕೆಗೆ ಅವರು ಅನರ್ಹರಾಗಬಾರದು ಎಂಬುದೇ ಡಾ. ಅಂಬೇಡಕರರ ತಿದ್ದುಪಡಿಯ ಆಶಯವಾಗಿತ್ತು. ಈ ಕಲಮು ಡಾ ಅಂಬೇಡಕರರ ತಿದ್ದುಪಡಿಯೊಂದಿಗೆ ಸ್ವೀಕೃತವಾಯಿತು.

ತಾ ೨೯ ರಂದು ಹಿಂದುಸ್ತಾನ ಒಕ್ಕೂಟದ ಉಪಾಧ್ಯಕ್ಷರ ಚುನಾವಣೆಯ ಕಲಮಿನ ಚರ್ಚೆ ನಡೆದು ಅದು ಯಾವ ಬದಲಾವಣೆಯಿಲ್ಲದೆ ಮೂಲಸ್ವರೂಪದಲ್ಲಿಯೇ ಕೊನೆಗೆ ಅಂಗೀಕೃತವಾಯಿತು. ಆ ಮೇಲೆ, ಅನಿವಾರ್ಯ ಸಂದರ್ಭಗಳಲ್ಲಿ ಅಧ್ಯಕ್ಷನ ಕಾರ್ಯನಿರ್ವಹಣಕ್ಕೆ ಲೋಕಸಭೆಗೆ ಅಧಿಕಾರ, ಕೆಲ ಸಂದರ್ಭಗಳಲ್ಲಿ ಶಿಕ್ಷೆಗಳನ್ನು ಕಡಿಮೆಮಾಡಲು ಇಲ್ಲವೆ ರದ್ದುಗೊಳಿಸಲು ಅಧ್ಯಕ್ಷನಿಗೆ ಅಧಿಕಾರ ಇವೇ ಮೊದಲಾದ ಕಲಮುಗಳು ವಿಶೇಷ ಚರ್ಚೆಯಿಲ್ಲದೆ ಸ್ವೀಕರಿಸಲ್ಪಟ್ಟವು. ಒಕ್ಕೂಟ ಆಡಳಿತೆಯ ಅಧಿಕಾರದ ಬಗ್ಗೆ ಇದ್ದ ಕಲಮಿನ ಚರ್ಚೆ ನಡೆದಾಗ, ಸರ್ ಅಕಬರ ಹೈದರಿಯವರ ನಿಧನವಾರ್ತೆ ಬಂದುದರಿಂದ ಮುಂದಿನ ಕಾರ್ಯಕಲಾಪಗಳನ್ನು ಅಷ್ಟಕ್ಕೆ ನಿಲ್ಲಿಸಲಾಯಿತು.

ತಾ. ೩೦ ರಂದು ಮಂತ್ರಿಮಂಡಲದ ರಚನೆಯ ಬಗ್ಗೆ ಚರ್ಚೆಯಾಗಿ ಅನೇಕ ತಿದ್ದುಪಡಿಗಳು ಬಂದು ಕೊನೆಗೆ ಈ ಕಲಮು ಮೂಲಸ್ವರೂಪದಲ್ಲಿಯೇ ಸ್ವೀಕೃತವಾಯಿತು. ಒಕ್ಕೂಟದ ಅಧ್ಯಕ್ಷನಿಗೆ ಸಹಾಯ ಮಾಡಲು ಒಂದು ಮಂತ್ರಿಮಂಡಲ, ಅದರ ಘಟನೆ, ಅದರ ಕಾರ್ಯಭಾರ ಇವೇ ಮೊದಲಾದ ಅಂಶಗಳು ಈ ಕಲಮಿನಲ್ಲಿವೆ. ಆ ಮೇಲೆ, ಅಧ್ಯಕ್ಷರು ಮುಖ್ಯಮಂತ್ರಿಯನ್ನು ನೇಮಿಸಬೇಕು, ಈ ಮುಖ್ಯ ಮಂತ್ರಿಯ ಸಲಹೆ ಪಡೆದು ಉಳಿದ ಮಂತ್ರಿಗಳನ್ನೂ ಅಧ್ಯಕ್ಷರೇ ನೇಮಿಸಬೇಕು. ಎಂಬ ಕಲಮು ಚರ್ಚೆಗೆ ಬಂದಿತು. ತಾ. ೩೧ ರಂದು ಇದೇ ವಿಷಯ ಚರ್ಚಿಸಲ್ಪಟ್ಟು ಕೊನೆಗೆ ಯಾವ ತಿದ್ದುಪಡಿಯೂ ಇಲ್ಲದೆ ಈ ಕಲಮು ಸ್ವೀಕೃತವಾಗಿ ಸೋಮವಾರಕ್ಕೆ ಸಭೆಯು ಮುಂದರಿಯಿತು.

ಸೋಮವಾರ ತಾ. ೩ ರಂದು ಸ್ವತಂತ್ರ ಹಿಂದುಸ್ತಾನದ ಕಾಯದೆಮಂಡಲ ಹಾಗು ಅವುಗಳ ಚುನಾವಣೆಗೆ ಸಂಬಂಧಿಸಿದ ಕಲಮುಗಳು ಚರ್ಚಿಸಲ್ಪಟ್ಟವು. ೧೯೫೦ ರಲ್ಲಿಯೇ ಹೊಸ ಚುನಾವಣೆ ನಡೆಯಬೇಕಾಗಿದೆಯಾಗಿ ಈ ಕಲಮುಗಳನ್ನು ಮುಂಚಿತವಾಗಿಯೇ ಚರ್ಚೆಗೆತ್ತಿಗೆದುಕೊಳ್ಳಲಾಯಿತು. ಈ ನೊದಲು ಕಾಶ್ಮೀರದ ಯುದ್ಧವು ತಾ. ೧ ರಂದು ಮಧ್ಯರಾತ್ರಿಗೆ ನಿಂತದ್ದಕ್ಕಾಗಿ ಸಭೆಯು ಒಂದು ನಿಮಿಷ ಮೌನದಿಂದ ಎದ್ದುನಿಂತು ಪರಮಾತ್ಮನಿಗೆ ಕೃತಜ್ಞತೆ ಸಲ್ಲಿಸಿತು.

ಕಾಯದೆಮಂಡಲದ ರಚನೆಯ ಕಲಮು ಮೊದಲು ಚರ್ಚೆಗೆ ಬಂದಿತು. ಹಿಂದುಸ್ತಾನಕ್ಕೆ ಮೇಲ್ಮನೆ ಮತ್ತು ಕೆಳಮನೆಗಳಿದ್ದ ಕಾಯದೆ ಮಂಡಲವಿರಬೇಕು. ಮೇಲ್ಮನೆಗೆ ಕೌನ್ಸಿಲ ಆಫ ಸ್ಟೇಟ ಅಥವಾ ರಾಜ್ಯಪರಿಷತ್ತು ಎಂದೂ ಕೆಳಮನೆಗೆ ಹೌಸ ಆಫ ಪೀಪಲ್ ಅಥವಾ ಲೋಕಸಭೆ ಎಂದೂ ಕರೆಯಬೇಕೆಂದು ಈ ಕಲಮಿನಲ್ಲಿ ನಿರ್ದೇಶಿಸಲಾಗಿದೆ.

ಈ ಬಗ್ಗೆ ಒಟ್ಟು ೧೧ ತಿದ್ದುಪಡಿಗಳು ಮುಂದಿಸಲ್ಪಟ್ಟಿದ್ದವು. ದೀರ್ಘ ಚರ್ಚಾನಂತರ ಕೊನೆಗೆ ಡಾ. ಅಂಬೇಡಕರರ ಮೂರು ಹಾಗು ಪ್ರಮಾಣಬದ್ಧ ಮತದಾನ ಪದ್ಧತಿಯನ್ನು ಅಂಗೀಕರಿಸಬೇಕೆನ್ನುವ ಶ್ರೀ. ತ್ಯಾಗಿಯವರ ತಿದ್ದುಪಡಿಗಳನ್ನೂ ಸಭೆಯು ಅಂಗೀಕರಿಸಿ ಮೇಲ್ಮನೆಯ ಕಲಮುಗಳಿಗೆ ಒಪ್ಪಿಗೆ ಕೊಟ್ಟಿತು. ಸಮಯವಾದ್ದರಿಂದ ಮರುದಿನಕ್ಕೆ ಸಭೆ ಮುಂದರಿದಿತು.

ಸರ್ವೋದಯ ಪ್ರದರ್ಶನದ ಸಂಘಟನೆ

ಅಖಿಲ ಭಾರತ ಸರ್ವೋದಯ ಪ್ರದರ್ಶನ ಸಮಿತಿಯ ಅಧ್ಯಕ್ಷರಾದ ಶ್ರೀ ಶ್ರೀಕೃಷ್ಣದಾಸ ಜಾಜು ಅವರು ಪ್ರದರ್ಶನವನ್ನು ಉದ್ಘಾಟಿಸಲು ಶ್ರೀ ಸತೀಶಚಂದ್ರ ದಾಸಗುಪ್ತರನ್ನು ಕೇಳಿಕೊಂಡರು. [illegible] ಅದರ ಚರಿತ್ರೆಯನ್ನು ಸಂಕ್ಷೇಪವಾಗಿ ವಿವರಿಸಿದರು. ಪ್ರದರ್ಶನವು ರಾಷ್ಟ್ರೀಯ ಕಾಂಗ್ರೆಸ್ಸಿನೊಡನೆ ಹೇಗೆ ಸಂಬಂಧ ಬೆಳೆಸಿಕೊಂಡಿತು ಮತ್ತು ಅದು ಕಾಂಗ್ರೆಸ್ಸಿನ ಸ್ವಾತಂತ್ರ್ಯವನ್ನು ಹೇಗೆ ಬಳಸಿಕೊಳ್ಳುತ್ತ ಬಂದಿತು ಎಂಬುದನ್ನು ಅವರು ವಿವರಿಸಿದರು. ಒಂದು ಕಾಲದಲ್ಲಿ ಅದು ಕಾಂಗ್ರೆಸ್ಸಿನ ಸ್ವಾಗತ ಸಮಿತಿಯಿಂದ ಸಂಘಟಿಸಿದ ಒಂದು ಸ್ವದೇಶೀಯ ವಸ್ತುಪ್ರದರ್ಶನವಾಗಿತ್ತು. ೧೯೩೪ರಲ್ಲಿ ಅದನ್ನು ಸಂಘಟಿಸುವ ಕೆಲಸವನ್ನು ಅ. ಭಾ. ಚರಕಸಂಘಕ್ಕೂ ಅ. ಭಾ. ಗ್ರಾಮೋದ್ಯೋಗ ಸಂಘಕ್ಕೂ ಒಪ್ಪಿಸಲಾಯಿತು ಮತ್ತು ಅದರ ವ್ಯಾಪ್ತಿಯನ್ನು ಖಾದಿ ಮತ್ತು ಗ್ರಾಮೋದ್ಯಮಗಳಿಗೆ ಮಿತಗೊಳಿಸಲಾಯಿತು. ಈ ಕಾಲ ಆ ಹೆಸರಿನಿಂದಲೇ ಅದು ಕರೆಯಲ್ಪಡುತ್ತಿತ್ತು. ಆ ಬಳಿಕ ಹಿಂದುಸ್ತಾನಿ ತಾಲಿಮಿ ಸಂಘ ಮತ್ತು ಗೋಸೇವಾ ಸಂಘಗಳು ತಮ್ಮ ಕೊಡುಗೆಯನ್ನು ಅದಕ್ಕೆ ಸಲ್ಲಿಸಿದವು; ಆದರೆ ಅದರ ಹೆಸರನ್ನು ಮಾತ್ರ ಬದಲಾಯಿಸಲಿಲ್ಲ. ಅದರ ಕಾರ್ಯಕ್ಷೇತ್ರ ಮತ್ತು ಉದ್ದೇಶಗಳು ರಚನಾತ್ಮಕ ಕಾರ್ಯಕ್ರಮವವೇ ಆಗಿದ್ದುದರಿಂದ ಮತ್ತು ಅದರ ಗುರಿಯು 'ಸರ್ವೋದಯ' ಎಂಬ ಶಬ್ದದಿಂದ ಹೊರಡುವ ಅರ್ಥವೇ ಆಗಿದ್ದುದರಿಂದ ಈ ವರ್ಷ ಅದನ್ನು 'ಸರ್ವೋದಯ ಪ್ರದರ್ಶನ' ಎಂದು ಕರೆಯಲು ನಿಶ್ಚಯಿಸಲಾಯಿತು.

ಈ ಪ್ರದರ್ಶನದ ಕ್ಷೇತ್ರ ಮತ್ತು ಉದ್ದೇಶಗಳಿಗೆ ಗಾಂಧೀಜಿಯವರು ಆಗಲೇ ಕೆಳಗಿನಂತೆ ಅರ್ಥ ಹೇಳಿದ್ದಾರೆ:

"ಹಳ್ಳಿಗಳು ಕೇವಲ ಅಸ್ತಿತ್ವದಲ್ಲಿ ಉಳಿಯಬೇಕೆಂಬುದಷ್ಟೇ ಸಾಲದು, ಅವು ಬಲಿಷ್ಠವೂ ಸಮೃದ್ಧವೂ ಆಗಬೇಕು ಎಂದು ನಾವು ಇಚ್ಛಿಸುವವರೂ ನಂಬುವವರೂ ಆಗಿರುವುದಾದರೆ, ಆಗ ಭಾರತಕ್ಕೆ ಗ್ರಾಮಹಿತ ಬುದ್ಧಿಯೊಂದೇ ಯುಕ್ತವಾದ್ದು. ಇದನ್ನು ಒಪ್ಪಿದರೆ ನಗರ ಜೀವನ ಶೌಕರ್ಯದ ಸಾಮಗ್ರಿಗಳು, ಪ್ರದರ್ಶನೀಯ ವಸ್ತುಗಳು ಮತ್ತು ಸಿರಿವಂತಿಕೆಯ ಸುಖಸಾಧನೆಗಳು ಇವುಗಳಿಗೆ ಸ್ಥಾನವೇ ಇಲ್ಲ. ಪ್ರದರ್ಶನವು ಒಂದು ತಮಾಷೆಯೂ ಕಾಂಗ್ರೆಸ್ಸಿಗೆ ದುಡ್ಡು ಕೂಡಿಸುವ ಒಂದು ಸಾಧನವೂ ಎನಿಸಕೂಡದು ಅಥವಾ ಅದು ವ್ಯಾಪಾರಗಾರರಿಗೊಂದು ಜಾಹೀರುಮಾಡುವ ಸ್ಥಳವೆನಿಸಲೂ ಬಾರದು. ಅದರಲ್ಲಿ ಮಾರುವ ಮತ್ತು ಕೊಳ್ಳುವ ದೊಂದು ಇರಬಾರದು. ಪ್ರದರ್ಶನವು ಒಂದು ಜ್ಞಾನಾರ್ಜನೆಯ ಸ್ಥಳವಿದ್ದು ಆ ರೀತಿಯಲ್ಲಿ ಅದು ಅತ್ಯಂತ ಕೌತುಕದ್ದಾಗಿರಬೇಕು. ಅದು ಹಳ್ಳಿಗರಿಗೆ ಇದನ್ನು ನೋಡಿಕೊಂಡು ಮನೆಗೆ ಹೋದ ಮೇಲೆ ಯಾವುದಾದರೊಂದು ಹಳ್ಳಿಯ ಕೈಗಾರಿಕೆಯನ್ನು ಕಲಿಯಬೇಕೆನಿಸುವಂತೆ ಪ್ರಚೋದಿಸಬೇಕು. ಪ್ರದರ್ಶನವು ಹಳ್ಳಿಗಳನ್ನು ಮುಸುಕಿರುವ ಅಸಹ್ಯವಹಾರಗಳನ್ನು ಅವ್ಯಗಳನ್ನು ಪರಿಹರಿಸಿಕೊಳ್ಳುವ ಬಗೆಯನ್ನೂ ಗ್ರಾಮಜೀವನದ ಕಾಲಕಾಲಕ್ಕೆ ಸಾಧಿಸಿದ ಪ್ರಗತಿಯನ್ನೂ ತೋರಿಸಬೇಕು."

ಪ್ರದರ್ಶನದ ಆಳವಳಿಯು ಯಾವಾಗಲೂ ಮೇಲಿನ ಧ್ಯೇಯವನ್ನು ತನ್ನ ಕಣ್ಣೆದುರು ಇಟ್ಟುಕೊಂಡಿತ್ತು ಮತ್ತು ಪ್ರದರ್ಶನದ ಸಂಘಟಕರು ತಮ್ಮ ಆಯ [illegible] ಅರಿತು ಸ್ಪಷ್ಟ ಆ ಧ್ಯೇಯವನ್ನು ಮರೆತಿರಲಿಲ್ಲ. ಅದರಿಗೆ ಈಗ ಮತ್ತೂ ಒಂದು ಕೊರತೆಯುಂಟಾಗಿದೆ. ಅದೆಂದರೆ, ಗಾಂಧೀಜಿಯವರ ಮಾರ್ಗದರ್ಶನವಿಲ್ಲದೆ ಅದು ಕೆಲಸ ಮಾಡಬೇಕಾಗಿದೆ. ಗಾಂಧೀಜಿಯವರಿದ್ದಾಗ ಅವರ ಸ್ಫೂರ್ತಿ ಮತ್ತು ಸಲ್ಲಕ್ಷಣಶಕ್ತಿಗಳು ಅವರಿಗೆ ದೊರೆತು ಬೆಂಬಲಿಸಿದ್ದವು ಎಂದು ಶ್ರೀ ಜಾಜು ಹೇಳಿದರು.

ಮುಂದುವರಿದು ಶ್ರೀ ಜಾಜು ಹಳ್ಳಿಗರ ಉದ್ಧಾರಕ್ಕೆ ಈ ಸಂಘಟಕರು ಮಾನ್ಯತೆ ಕೊಟ್ಟಿದ್ದಾರೆ ಎಂದು ಸಾರಿದರು. ಕೆಲವು ವ್ಯತ್ಯಾಸದ ಗೆರೆಯನ್ನು ಸ್ಪಷ್ಟವಾಗಿ ಎಳೆಯಲು ಬಾರದೆ ಇದ್ದರೂ ಅಲ್ಲಿ ಒಟ್ಟಿನ ಮೇಲೆ ಹಳ್ಳಿ ಮತ್ತು ನಗರಗಳ ದೃಷ್ಟಿಭೇದ ಒಡೆದು ಕಾಣುತ್ತಿತ್ತು. ವ್ಯಾಪಾರ ಕೂಡ ತನ್ನ ನಿಶ್ಚಿತ ಹಿತ ಸಂಬಂಧಗಳಿಗಾಗಿ ಅನಿವಾರ್ಯವಾಗಿ ಅಲ್ಲಿ ಪ್ರವೇಶಿಸಿದ್ದು. ಕಳೆಯ ಪ್ರಕ್ರಿಯೆ ವಿವಿಧಾಧಿಕಾರಿಗಳಿಗೆ ಎಡೆಗೊಟ್ಟಿತು. ಈ ವಿಷಯಗಳಲ್ಲಿ ಸಂಘಟಕರು ಸ್ವವಿವೇಕವನ್ನೇ ಅವಲಂಬಿಸಬೇಕಾಯಿತು. ಅದರ ಪ್ರಕಾರ ಅವರು ಕೆಲ ಪ್ರದರ್ಶನೀಯ ವಸ್ತುಗಳಿಗೂ ಪ್ರದರ್ಶನೀಯ ಅಂಗಡಿಗಳಿಗೂ ಪ್ರವೇಶ ಕೊಡದೆ ಹೊರಗಿಡಬೇಕಾಯಿತು. ಕೆಲವು ವಸ್ತುಗಳ ಬಗ್ಗೆ ಅವರು ತೆಗೆದುಕೊಂಡ ನಿರ್ಣಯ ತಪ್ಪಿರಬಹುದು. ಒಟ್ಟಿನಲ್ಲಿ ಪ್ರದರ್ಶನಕಾರರು ಸ್ವಾಗತ ಸಮಿತಿಯ ಸಂಪೂರ್ಣ ಸಹಕಾರವನ್ನು ಪಡೆದುದರ ಬಗ್ಗೆ ಶ್ರೀ ಜಾಜು ಅವರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಪ್ರದರ್ಶನಕ್ಷೇತ್ರದಲ್ಲಿ ಮಾರಾಟದ ಅಂಗಡಿಗಳಿಲ್ಲದ್ದು ಪ್ರದರ್ಶನದ ಒಂದು ವೈಶಿಷ್ಟ್ಯ. ಅಲ್ಲದೆ ಇದಕ್ಕೆ ಪ್ರವೇಶ ಧನವೂ ಇಲ್ಲ. ಗ್ರಾಮೋದ್ಯಮ ಕಾರ್ಯಕ್ರಮದಲ್ಲಿ ಮನೆ ಬಳಕೆಗಾಗಿ ಸಾಮಾನು ತಯಾರಿಸುವುದೇ ಒಂದು ಮುಖ್ಯಾಂಗವಾಗಿತ್ತು. ಹಳ್ಳಿಗಳ ಅವಶ್ಯಕತೆಗಳನ್ನು ಪೂರೈಸಿದ ನಂತರವೇ ತಾವು ಮಿಕ್ಕವನ್ನು ಮಾರಬೇಕೆಂಬುದನ್ನು ಜನರು ತಿಳಿದುಕೊಳ್ಳಬೇಕು. ಇದನ್ನು ಮನಸ್ಸಿನ ಮೇಲೆ ಚೆನ್ನಾಗಿ ಅಚ್ಚೊತ್ತುವುದರ ಸಲುವಾಗಿ ಸಂಘಟಕರು ಪೇಟೆಯನ್ನು ಪ್ರದರ್ಶನ ಕ್ಷೇತ್ರದ ಹೊರಗೆ ಇರಿಸಿದ್ದರು. ಈ ವ್ಯವಸ್ಥೆಯಿಂದ ಪ್ರೇಕ್ಷಕರಿಗೆ ಪ್ರದರ್ಶನದಲ್ಲಿ ತೋರಿಸಿದ ವಿಧಾನಗಳಲ್ಲಿಯೇ ಲಕ್ಷ್ಯ ಹಾಕಲು ಶಕ್ಯವಾಯಿತು. ಅವರಿಗೆ ಮಾರಾಟಕ್ಕಿಟ್ಟ ವಸ್ತುಗಳಿಂದ ಚಿತ್ತಭ್ರಮೆಯುಂಟಾಗುವಂತಿದ್ದಿಲ್ಲ. ಪ್ರದರ್ಶನವು ಸ್ವಾಗತಸಮಿತಿಗೆ ಲಾಭದಾಯಕವಾಗುವಂಥದಾಗಿಲ್ಲ.

ಅ. ಭಾ. ಚರಕ ಸಂಘದ ಎಲ್ಲ ಶಾಖೆಗಳು ಮತ್ತು ಇತರ ಸಂಸ್ಥೆಗಳು ಪ್ರದರ್ಶನವನ್ನು ಸಂಘಟಿಸುವುದರಲ್ಲಿ ಭಾಗ ವಹಿಸಿದ್ದವು. ಶ್ರೀ ಜಾಜು ಮಾತಾಡುವ ಹೊತ್ತಿಗೆ ಗಂಡಸರು ಹೆಂಗಸರು, ಮಕ್ಕಳು ಎಲ್ಲರೂ ಸೇರಿ ಕೆಲಸಗಾರರ, ಸ್ವಯಂ ಸೇವಕರ ಮತ್ತು ಪ್ರದರ್ಶಕರ ಸಂಖ್ಯೆ ಒಂದು ಸಾವಿರಕ್ಕೆ ಮುಟ್ಟಿತ್ತು. ಈ ಬೃಹನ್ಮೇಲವನ್ನು ಗಮನಕ್ಕೆ ತಂದುಕೊಂಡು ಆ ಕಾಲದಲ್ಲಿ ನಿತ್ಯದ ಕೆಲಸ ಕಾರ್ಯಗಳಲ್ಲಿ ಸಂಯುಕ್ತವಾದ ಸಾಂಘಿಕ ಜೀವನವನ್ನು ನಡೆಸಬೇಕೆಂದು ಸಮಿತಿಗೆ ಅನಿಸಿತು. ಆದುದರಿಂದ ಅವರೆಲ್ಲರೂ ಒಟ್ಟಾಗಿಯೇ ಉಂಡು ತಿಂದು ತಮ್ಮ ಭಂಗಿಯ ಕೆಲಸ ಮತ್ತು ಇತರ ವ್ಯವಸ್ಥೆಗಳನ್ನೂ ಒಟ್ಟಿಗೇ ಮಾಡಿ ಪ್ರಾರ್ಥನೆಗೆ ಎಲ್ಲರೂ ಸಮ್ಮಿಲಿತರಾಗುತ್ತಿದ್ದರು. ಉಡಲು ಖಾದಿಯನ್ನೇ ತೆಗೆದುಕೊಳ್ಳಬೇಕೆಂದು ಕಟ್ಟು ಮಾಡಲಾಗಿತ್ತು; ಆಕಳ ಹಾಲು ಮತ್ತು ತುಪ್ಪಗಳನ್ನೇ ಬಳಸಲಾಯಿತು. ಪ್ರದರ್ಶನಾಲಯದ ರಚನೆಗೂ ಅದರಲ್ಲಿ ಬಳಸಲು ಬೇಕಾದ ಸಾಮುಗ್ರಿಗಳಿಗೂ ಬಹಳ ಮಟ್ಟಿಗೆ ಹಳ್ಳಿಯಲ್ಲಿ ತಯಾರಿಸಿದ ವಸ್ತುಗಳನ್ನೇ ತೆಗೆದುಕೊಳ್ಳಲಾಗಿತ್ತು. ವಿನೋದಾವಳಿಯಲ್ಲಿಯೂ ಗ್ರಾಮಜೀವನವೇ ಪ್ರಧಾನವಾಗಿತ್ತು. ಪ್ರೇಕ್ಷಕರು ಬೇರೆ ಬೇರೆ ಪ್ರಾಂತದ ಗ್ರಾಮ್ಯ ನಾಟಕಗಳು, ನೃತ್ಯಗಳು ಮತ್ತು ಗಾಯನಗಳನ್ನು ಮಾತ್ರ ನೋಡಬಹುದಾಗಿತ್ತು.

ಈ ಸಲದ ಪ್ರದರ್ಶನದಲ್ಲಿ ಕೆಲ ಹೊಸ ವೈಶಿಷ್ಟ್ಯಗಳಿದ್ದವು. ಗೋಸೇವಾ ವಿಭಾಗವು ಮತ್ತು ಗೊಬ್ಬರದ ಪ್ರಾತ್ಯಕ್ಷಿಕೆಯು ಈ ಸಲದ ಹೊಸ ವಿಶೇಷಗಳು. ಆಹಾರ ಸಮಸ್ಯೆಯ ಕೆಲ ನಕ್ಷೆಗಳು ಅದರಲ್ಲಿದ್ದವು (ಅಲ್ಲದೆ ಕೃತ್ರಿಮ ಮತ್ತು ಸೆಗಣಿ ಗೊಬ್ಬರ, ಟ್ರ್ಯಾಕ್ಟರ ಮತ್ತು ಎತ್ತುಗಳಿಂದ ಉಳುವದು ಜಲಜನಕ ಮಿಶ್ರಿತ ಎಣ್ಣೆ ಮತ್ತು ನೈಸರ್ಗಿಕ ಎಣ್ಣೆ ಹಾಗು ತುಪ್ಪ ಇವುಗಳಲ್ಲಿಯ ಭೇದವನ್ನು ತಿಳಿಸುವ ನಕ್ಷೆಗಳು ಹಾಗು ಮೇವು ಕೆಡದಂತೆ ನೋಡಿಕೊಳ್ಳುವ ಮತ್ತು ಗೊಬ್ಬರ ಮಾಡುವ ನಕ್ಷೆ ಮೊದಲಾದವುಗಳೂ ಇದ್ದವು. ಹಿಂದುಸ್ತಾನ ಸರಕಾರ ಮತ್ತು ಗೋಸೇವಾ ಸಂಘದ ಸಹಾಯದಿಂದ ಈ ವಿಭಾಗವನ್ನು ಏರ್ಪಡಿಸಲಾಗಿದ್ದಿತು. ಹಿಂದುಸ್ತಾನ ಸರಕಾರವು ಆರೋಗ್ಯ ವಿಭಾಗವನ್ನು ಏರ್ಪಡಿಸಿತ್ತು. ಅದರಲ್ಲಿಯ ಕುಷ್ಠರೋಗದ ವಿಭಾಗವು ಹೆಚ್ಚಾಗಿ ಗಮನಿಸತಕ್ಕದಾಗಿತ್ತು. ಸ್ವದೇಶೀ ಔಷಧಗಳು ಮತ್ತು ವನಸ್ಪತಿಗಳ ವಿಭಾಗವೂ ಇದ್ದಿತು. ಹಳ್ಳಿಗಳ ಸ್ವಚ್ಛತೆಯ ವಿಭಾಗವೂ ಬೇರೆ ಇದ್ದಿತು. ಕಸ್ತೂರಬಾ ವಿಶ್ವಾಸ ನಿಧಿಯ ವಿದ್ಯಾರ್ಥಿನಿಯರು ಸ್ತ್ರೀ ಕಾರ್ಯಕರ್ತರು ಹರಿಜನ ಸೇವಕ ಸಂಘದ ಕೆಲಸಗಾರರು ಮತ್ತು ಹಿಂದುಸ್ತಾನೀ ಪ್ರಚಾರ ಸಭೆಯ ಹಾಗು ನಿಸರ್ಗ ಚಿಕಿತ್ಸಾ ಸಂಸ್ಥೆಯ ಕೆಲಸಗಾರರು ಇವರೆಲ್ಲ ತಮ್ಮ ತಮ್ಮ ಕುಶಲ ಕೃತಿಗಳನ್ನು ಪ್ರದರ್ಶಿಸಿದರು. ರಚನಾತ್ಮಕ ಸಂಸ್ಕೃತಿಯನ್ನು ಪ್ರದರ್ಶಿಸುವ ವಿಶೇಷ ವಿಭಾಗವೊಂದು ಪ್ರತ್ಯೇಕವಾಗಿ ಇದ್ದಿತು.

ಮಾದರಿ ಹಳ್ಳಿಯ ಆಕೃತಿಯನ್ನು ರಚಿಸಬೇಕೆಂದು ಸಮಿತಿಯು ಬಗೆದಿದ್ದಿತು. ಆದರೆ ಆ ದಿಸೆಯಲ್ಲಿ ಹೆಚ್ಚು ಮುಂಬರಿಯಲು ಅದಕ್ಕೆ ಸಾಧ್ಯವಾಗಲಿಲ್ಲ. ಒಕ್ಕಲಿಗನ ಗುಡಿಸಲನ್ನು ಮತ್ತು ಕೆಲ ಅಂಕಿ ಸಂಖ್ಯೆಗಳ ನಕ್ಷೆಗಳನ್ನು ಮಾತ್ರ ನಿರ್ಮಿಸಲು ಅದಕ್ಕೆ ಶಕ್ಯವಾಯಿತು. ಬಾಪೂ ಭವನವು ಒಳ್ಳೆ ಆಕರ್ಷಕವಾದ ವಿಭಾಗವಾಗಿದ್ದಿತು. ಗಾಂಧೀಜಿ ಉಪಯೋಗಿಸುತ್ತಿದ್ದ ಬಗೆಬಗೆಯ ಚಿತ್ರಗಳು ಮತ್ತು ವಸ್ತುಗಳು ಅಲ್ಲಿ ಪ್ರದರ್ಶಿಸಲ್ಪಟ್ಟಿದ್ದವು. ಆ ವಿಭಾಗದಲ್ಲಿ ಸಾಮೂಹಿಕ ಸೂತ್ರಯಜ್ಞವನ್ನು ನಡೆಸುವ ವ್ಯವಸ್ಥೆಯನ್ನೂ ಮಾಡಲಾಗಿದ್ದಿತು. ಆ ಸೂತ್ರಯಜ್ಞದಲ್ಲಿ ಬೇರೆ ಬೇರೆ ಮುಖಂಡರು ಭಾಗ ತೆಗೆದುಕೊಳ್ಳಬಹುದೆಂದು ಅಪೇಕ್ಷಿಸಲಾಗಿದ್ದಿತು.

ವಿಶಿಷ್ಟ ತತ್ವಪ್ರಣಾಲಿಯ ದೃಷ್ಟಿಯನ್ನಿಟ್ಟುಕೊಂಡು ಆ ಪ್ರದರ್ಶನವನ್ನು ಏರ್ಪಡಿಸಲಾಗಿದ್ದಿತು. ದೇಶವು ರಾಜಕೀಯ ಸ್ವಾತಂತ್ರ್ಯವನ್ನು ಪಡೆದಿದೆ. ಆದರೆ ಸ್ವರಾಜ್ಯವನ್ನು ಇನ್ನೂ ಸಾಧಿಸಿಕೊಳ್ಳಬೇಕಾಗಿದೆ. ಜನತೆಯ ಶಕ್ತಿ ಸಾಮರ್ಥ್ಯಗಳನ್ನು ಅದು ಇನ್ನೂ ಅವಲಂಬಿಸಿ ನಡೆಯುವದಿಲ್ಲ ಅಂದರೆ ರಾಷ್ಟ್ರದ ಪುನರ್‌ರಚನಾ ಕಾರ್ಯದಲ್ಲಿ ಜನತೆಯು ಇನ್ನೂ ಭಾಗವಹಿಸಲು ಪ್ರಾರಂಭಿಸಿರುವದಿಲ್ಲ. ಸರಕಾರದ ಧೋರಣವೂ ಈ ದಿಸೆಯಲ್ಲಿ ಇನ್ನೂ ಸುಸಂಗತವಾಗಿರುವದಿಲ್ಲ. ಗ್ರಾಮೋದ್ಯೋಗಗಳಿಗೆ ಸಹಾಯ ಮಾಡಬೇಕೆಂದು ಅದು ಬಯಸುತ್ತದೆ. ಆದರೆ ಅದೇ ಕಾಲಕ್ಕೆ, ಗ್ರಾಮೋದ್ಯೋಗಗಳೊಡನೆ ಸ್ಪರ್ಧೆ ಮಾಡುತಿರುವ ಜವಳಿ ಗಿರಣಿಗಳು, ಎಣ್ಣೆ ಗಿರಣಿಗಳು, ಸಕ್ಕರೆ ಗಿರಣಿಗಳು, ವನಸ್ಪತಿ ಯಂತ್ರ ಇವೇ ಮೊದಲಾದ ಔದ್ಯೋಗಿಕ ಯೋಜನೆಗಳನ್ನು ಪುರಸ್ಕರಿಸುತಿರುವದು. ಹಳ್ಳಿಗಳ ಸಂಬಂಧದಲ್ಲಿ ತಾನು ಮಾಡತಕ್ಕ ಕರ್ತವ್ಯವಾವುದೆಂಬುದು ಸರಕಾರಕ್ಕೆ ಇನ್ನೂ ಚೆನ್ನಾಗಿ ಮನವರಿಕೆಯಾಗಿರುವದಿಲ್ಲ. ವಿಲಾಸ ಭೋಗದ ವಸ್ತುಗಳಾವುವು ಮತ್ತು ಅತ್ಯಂತ ಆವಶ್ಯಕವಾದ ವಸ್ತುಗಳಾವುವು ಎಂಬುದನ್ನೂ ಸರಕಾರದವರು ವಿಂಗಡಿಸಿ ತಿಳಿಯಬೇಕಾಗಿದೆ. ರಾಜಾ ಕಾಲಸ್ಯ ಕಾರಣಂ ಎಂಬ ಸಂಸ್ಕೃತಿಯ ಯುಗವು ಹಿಂದಿನಂತೆ ಈಗಲೂ ಊರ್ಜಿತದಲ್ಲಿ ಇದೆ. ಅರಸ ಎಂದರೆ ದೇಶವನ್ನು ಪರಿಣಾಮಕರ ರೀತಿಯಲ್ಲಿ ನಿಯಂತ್ರಿಸುವವರೆಲ್ಲರೂ ಎಂಬದಾಗಿ ತಿಳಿದುಕೊಳ್ಳತಕ್ಕದ್ದು. ಈ ಪ್ರದರ್ಶನವು ಒಂದು ಜಾತ್ರೆ ಇಲ್ಲವೆ ಉತ್ಸವದಂತಿರಲಿಲ್ಲ. ವಿಶಿಷ್ಟ ನೀತಿ ಮತ್ತು ಸಂದೇಶವನ್ನೊಳಗೊಂಡ ಶೈಕ್ಷಣಿಕ ಪ್ರದರ್ಶನ ಇದಾಗಿದ್ದಿತು. ಗಾಂಧೀಜಿ ನಮ್ಮ ಮುಂದೆ ಇಟ್ಟ ರಾಮರಾಜ್ಯದ ಧ್ಯೇಯವನ್ನು ಮುಟ್ಟಬೇಕೆಂದು ಅವರೆಲ್ಲರ ಬಯಕೆ. ಗಾಂಧೀಜಿಯ ಧ್ಯೇಯಕ್ಕನುಸಾರವಾಗಿ ಇದು ಕಾರ್ಯ ಪ್ರವೃತ್ತವಾಗಬಲ್ಲುದೊ ಎಂಬುವನ್ನು ತಿಳಿದುಕೊಳ್ಳಲು ಇದನ್ನು ಸೂಕ್ಷ್ಮ ರೀತಿಯಿಂದ ಅಭ್ಯಸಿಸಿ ಇದರಿಂದ ಸ್ಫೂರ್ತಿ ಪಡೆಯುವಂತೆ ಈ ಪ್ರದರ್ಶನ ನೋಡಿದವರೆಲ್ಲ ಇದರ ಸಂಪೂರ್ಣ ಲಾಭ ಪಡೆಯಲೆಂದು ಶ್ರೀ ಜಾಜು ಇವರು ಆಶಿಸಿದ್ದರು.

(ಹಿಂದುಸ್ತಾನಿಯಿಂದ ಅನೂದಿತ)

ವ್ಯಾಪಾರ ಪ್ರಪಂಚ

ಮುಂಬಯಿ ಶೇರಪೇಟೆ

ತಾ. ೬

ಕ್ರಿಸ್ಮಸ್ ರಜೆಯ ನಂತರ ಶೇರ ಪೇಟೆಯಲ್ಲಿ ಅನಿರೀಕ್ಷಿತವಾಗಿ ಮಂದ ಪ್ರವೃತ್ತಿ ಪ್ರಾರಂಭವಾಗಿ ಬೆಲೆಗಳು ಇಳಿದು ಹೋದವು. ಟಾಟಾ ಸ್ಟೀಲ ಡೆಫರ್ಡ ಪಾಲುಗಳು ೧೭೦೦ ಮೇಲ್ಪಟ್ಟು ಇದ್ದುದು ೧೫೦೦ ಕ್ಕಿಂತಲೂ ಕೆಳಗೆ ಹೋದವು. ಮುಂದೆ ಅವು ಸ್ವಲ್ಪ ಸುಧಾರಿಸಿದವಾದರೂ ಉಳಿದ ಪಾಲುಗಳಲ್ಲಿ ಈ ಸುಧಾರಣೆ ಕಂಡುಬರಲಿಲ್ಲ. ಇಂದಿನ ಕೊನೆಯ ದರಗಳು ಇಂತಿವೆ.

ಅಹಮದಾಬಾದ ಅಡ್ವಾನ್ಸ್	೨೭೦-೧೦-೦
ಮುಂಬಯಿ ಡಾಯಿಂಗ್	೯೮೫-೦-೦
ಕೆಂಚುರಿ	೨೩೨-೮-೦
ಸೆಂಟ್ರಲ ಇಂಡಿಯಾ	೨೫೨-೦-೦
ಗೋಕಾಕ	೨೭೨ ೦ ೦
ಕೋಹಿನೂರು	೨೮೦-೦-೦
ಫಿನಿಕ್ಸ್	೨೨೫-೦-೦
ಸಿಂಪ್ಲೆಕ್ಸ್	೧೭೮-೮-೦
ಸ್ವದೇಶಿ	೨೮೩-೦-೦
ಬೇಲಾಪುರ ಸಕ್ಕರೆ	೨೩೮-೦-೦
ಮುಂಬಯಿ ಬರ್ಮ	೩೨೬-೦-೦
ಸಿಂಧ್ಯಾ ಸ್ಟೀಮ	೧೯-೯-೦
ಟಾಟಾ ಸ್ಟೀಲ ಡೆಫರ್ಡ	೧೬೩೬-೪-೦
ಇಂಡಿಯನ್ ಆಯರ್ನ	೨೪-೧೪-೦
ಅಸೊ ಸಿಮೆಂಟ್ಸ	೧೭೫-೦-೦
ಸೆಂಟ್ರಲ ಬ್ಯಾಂಕ್	೮೯-೮-೦
ಇಂಪೀರಿಯಲ್ ಪೂರ್ಣ	೧೮೦೫-೦-೦
ಬ್ಯಾಂಕ ಅಫ್ ಇಂಡಿಯಾ	೧೮೯-೦-೦

ಚಿನ್ನ ಬೆಳ್ಳಿ

ಚಿನಿವಾರಗಟ್ಟೆಯಲ್ಲಿ ಬೆಲೆಗಳು ಸ್ಥಿರವಾಗಿವೆ. ಚಿನ್ನದ ಬೆಲೆ ೧೧೩ ರ ಗಡಿದಾಟಿ ಹೋಗಿದ್ದವು. ಇಂದಿನ ಕೊನೆಯ ದರಗಳು ಹೀಗಿವೆ–

ಚಿನ್ನ	೧೧೨-೪-೦
ಬೆಳ್ಳಿ	೧೭೭-೦-೦
ಸಾವರೀನ್	೭೪-೦-೦

ಅರಳೆ

ಈ ವರ್ಷದ ಹತ್ತಿ ಬೆಳೆ ಸಾಕಷ್ಟು ಸಮೃದ್ಧವಿಲ್ಲೆಂಬ ಗ್ರಹಿಕೆಯಿಂದಲೂ ಗಿರಣಿಗಳು ಕೊಳ್ಳುತ್ತಿರುವದರಿಂದಲೂ ಅರಳೆ ಬೆಲೆಗಳು ಸ್ವಲ್ಪ ಏರಿವೆ. ಬೆಲೆಗಳ ಇಂದಿನ ಸ್ಥಿತಿ ಹೀಗಿದೆ–

ಮೇ	೬೧೭-೦-೦
ಜುಲೈ	೬೧೭-೦-೦
ಸೆಪ್ಟೆಂಬರ	೬೧೭-೦-೦

ಬೆಲೆಗಳ ಓಡಾಟ ಕೆಲವು ಆಣೆಗಳು ಮಾತ್ರ ಇತ್ತು.

ಎಣ್ಣೆಕಾಳು

ಶೇಂಗಾ	೧೭೦-೦-೦
ಅಗಸಿ	೨೭-೦-೦
ಅಗಸಿ ಎಣ್ಣೆ	೧೬-೧೨-೦
ಔಡಲ	೨೮-೮-೦

ಶಿವಮೊಗ್ಗ

ತಾ. ೫

ದೇಶಾವರ ನಂ. ೧		೨೬-೩೦
,,	೨	೨೫-೨೭
,,	೩	೨೦-೨೫
ರಾಜಾ ಅಲವು		೨೩-೨೯
ತೊರಸಾಲು		೧೮-೨೫
ಚಿಟ್ಟವಂತಿ		೧೫-೧೬
ಬೆಟ್ಟೆ		೧೨-೧೪

ಬೆಲೆಗಳು ಆಕರ್ಷಣೀಯವಾಗಿಲ್ಲ.

ಹುಬ್ಬಳ್ಳಿ

ತಾ. ೬

ಜ. ಹತ್ತಿ ನಗಕ್ಕೆ		೪೭೫-೪೯೫
ಮುಂ. ಹತ್ತಿ		೪೩೦-೪೬೪
ಜ. ಅರಳೆ	,,	೨೮೦-೩೦೫
ಹತ್ತಿಕಾಳು	ರೂ.ಗೆ	೫? ಪೌಂಡು
ಕುಸುಬಿ	ಚೀಲಕ್ಕೆ	೩೪-೩೫
ಅಗಸಿ	,,	೩೭-೩೯
ಔಡಲ	,,	೪೦-೪೧
ಜ. ಹೆಸರು	,,	೫೨-೫೫
ಕರಿ ಎಳ್ಳು	,,	೫೮-೬೦
ಬಿಳಿ ಎಳ್ಳು	,,	೭೩-೭೮
ಕಡಲೆ	,,	೬೪-೬೬
ಎ. ತೊಗರಿ	,,	೩೩-೩೪
ಮುರಳಿ	,,	೩೪-೩೫
ಕೆಂ. ಅಲಸಂದಿ	,,	೫೩-೫೬
ಬಿ. ಅಲಸಂದಿ	,,	೫೬-೬೨
ಶೇಂಗಾ (ಹೇರು)		೪೩-೪೫

ಹರಕೆ

ಓಂ ಓಂ ಸತ್ ಹೀಗಾಗಲಿ
ಲೋಕವೆಲ್ಲ ಮನೆಯಲಿ
ಓ ದೇವ ವಿಶ್ವವೆಲ್ಲ
ನಿನ್ನ ಬಿಡದೆ ನೆನೆಯಲಿ!
    ಒಲೆಯ ಮೇಲೆ ಇಟ್ಟ ಹಾಲು
    ಕಾದು ಕೆನೆಯು ಕೂಡಲಿ
    ಅದಕೆ ಹೆಣ್ಣು ಹೆಪ್ಪುಹಾಕೆ
    ಗಟ್ಟಿಮೊಸರು ಮೂಡಲಿ
ಮೊಸರ ಕಡೆಯೆ ಬೆಣ್ಣೆ ಮುದ್ದೆ
ಮಜ್ಜಿಗೆ ಸಹ ಹೊರಡಲಿ
ಬೆಣ್ಣೆ ಕಾಸಿ ಇಟ್ಟ ಮೇಲೆ
ತುಪ್ಪದ ಹೆರೆ ಹರಡಲಿ
    ಇಂಥ ಒಳ್ಳೆ ತುಪ್ಪದಲ್ಲಿ
    ಸಂಡಿಗೆಯನು ಕರಿಯಲಿ
    (ಕರಿಯುವವಳು ಕೆಮ್ಮಲಿ
    ಸಂತಸವೂ ಹೊಮ್ಮಲಿ)
    ಹಾಲುಹಳ್ಳ ಹರಿಯಲಿ
    ಬೆಣ್ಣೆ ಬಂಡೆ ಝುರಿಯಲಿ.
ಓಂ ಓಂ ಸತ್ ಹೀಗಾಗಲಿ
ಲೋಕವೆಲ್ಲ ಮನೆಯಲಿ
ಓ ದೇವ ವಿಶ್ವವೆಲ್ಲ
ನಿನ್ನ ಬಿಡದೆ ನೆನೆಯಲಿ
    ಮೇಲೆ ಹೇಳಿದಂಥ ತುಪ್ಪ
    ಗಂಡಸರೂ ತಿನ್ನಲಿ
    ಪರಮಾತ್ಮನ ಕರುಣೆಯೆಂದು
    ಭಕ್ತಿಯಿಂದೆ ಅನ್ನಲಿ.
ಮನುವಿನ ಹೆಣ್‌ಮಕ್ಕಳೆಲ್ಲ
ಹೆರಲಿ ದಿವಸ ತುಂಬಲು
ಹುಟ್ಟಿದೊಡನೆ ತಮ್ಮ ಮಗುವ
ನೋಡಿ, ಬೀರಿ ಒರಲಿ ನಗುವ
ತಂದೆಯಾದ ಗಂಡು ತನ್ನ
ಪೌರುಷವನು ನಂಬಲು
ಗಂಡು ಹೆಣ್ಣು ಬಾಳಲಿ
ಪ್ರೀತಿ ರಾಜ್ಯವಾಳಲಿ.
    ಸೂರ್ಯಚಂದ್ರರೆಲ್ಲ ತಮ್ಮ
    ಕೆಲಸ ಬಿಡದೆ ಮಾಡಲಿ
    ಪರಮಾತ್ಮನು-ಸಾಕ್ಷಿಯಾಗಿ
    ಜಗವನೆಲ್ಲ ನೋಡಲಿ.
ಜನರೆನ್ನಲಿ "ದೇವ ನಿನ್ನ
ಶಿಶುವು ನಾವು ಕಂಡೆಯಾ"
ಅವನು ಆಲಿಸಿದಾಗ
ಚಿವುಟಿಬಿಡಲಿ ಕುಂಡೆಯ!
    ಸಿರಿವಂತಗೆ ಸೂಳೆಯಂತೆ
    'ಬಾಳು ಸುಲಭವಾಗಲಿ
    ಓಂ ಶಾಂತಿ ಓಂ ಶಾಂತಿ
    ಎಂಬ ಮಂತ್ರ ಸಾಗಲಿ.
ಮಾನವಕುಲ ಹಗಲಿರುಳೂ
ಜೀವಗತಿಯ ಚಿಂತಿಸಿ
ಆ ಚಿತ್‌ಸುಖ ಸಾಗರದಲಿ
ಬೆಂದ ಬಾಳ ಕಂತಿಸಿ
    ಪರಂಜ್ಯೋತಿ ಬೆಳಕಿನಲ್ಲಿ
    ಕೈವಲ್ಯವ ಕಾಣಲಿ
    ಓಂ ಬ್ರಹ್ಮ ಪರಬ್ರಹ್ಮ
    ಅಂತು ಇಂತು ಈ ನಮ್ಮ
    ಮಣ್ಣ-ಬಾಳು ಮಾಣಲಿ
    ಅಥವ ಮೂಡಿ ಬರಲಿ ಬೇಗ
    ಕೋಡು ಜನರ ಗೋಣಲಿ!
    -ಶ್ರೀ. ವಿ. ಜಿ. ಭಟ್ಟ ಎಂ. ಎ.

ಪಾನನಿರೋಧಕ ಮದ್ದು

ಕೋಪನ್ ಹೇಗನ್ನಿನ ಡಾ. [illegible] ಸೆನ್ ಲಾರ್ಸೆನ್ನರು ಒಂದು ಹೊಸ ಮದ್ದನ್ನು ತಯಾರಿಸಿದ್ದಾರೆ. ಅದನ್ನು ತೆಗೆದುಕೊಂಡವರು ಮದ್ಯಸೇವನೆ ಮಾಡಿದರೆ ಮುಖವೆಲ್ಲ ಕೆಂಪಾಗಿ ಹೋಗುವದು. ಮೇಲಿಂದ ಮೇಲೆ ಕುಡಿದರೆ ತಲೆ ಮತ್ತು ಎದೆಗೇರಿ ಉಸಿರು ಕಟ್ಟಿದಂತಾಗುವದಲ್ಲದೆ ಮದ್ಯದ ವಾಸನೆಯೇ ಬೇಡವೆಂಬಷ್ಟು ಜುಗುಪ್ಸೆಯುಂಟಾಗುತ್ತದೆ. ಅನಂತರ ಯಾವಾಗ ಮದ್ಯವನ್ನು ನಾಲಿಗೆಗೆ ತಗುಲಿಸಿದರೂ ಅದು ಸವಿಸತ್ತಲಾರದು.

ವಾರದ ಭವಿಷ್ಯ

[illegible] - [illegible] , ಫಲ ಭವಿಷ್ಯ [illegible]

ಜನೆವರಿ ತಾ. ೧೦ರಿಂದ [illegible]

ಮೇಷ

ಎಲ್ಲರ ಪ್ರಕೃತಿಯೂ ಉತ್ತಮ. ಅವರ ಹೆಂಡತಿ, ತಾಯಿ ಮತ್ತು [illegible] ಯೊಡನೆ ವಿಶೇಷ ಮತಭೇದ [illegible] ಅಲ್ಲಿ ಪ್ರಾಪಂಚಿಕ ಸುಖ [illegible] ಮನೆತನದ ಹಿರಿಮೆಯನ್ನು ಹೆಚ್ಚಿಸುವ ಒಂದು ಘಟನೆ ಕೈಗೂಡುವ ಯೋಗವುಂಟು. ಉದ್ಯೋಗದಲ್ಲಿ ಉತ್ಕರ್ಷ, ಪ್ರತಿಷ್ಠೆ ಮತ್ತು ಲಾಭ ದಿನೇ ದಿನೇ ಅಭಿವೃದ್ಧಿ ಹೊಂದುವವು. ದೊಡ್ಡ ಮನುಷ್ಯರೊಡನೆ ಭೆಟ್ಟಿಯಾಗುವ ಯೋಗ ಆಗಾಗ್ಗೆ ಸಂಘಟಿಸಿ ಭಾವೀ ಉತ್ಕರ್ಷಕ್ಕೆ ಪೋಷಕವಾಗುವ ಒಂದು ಸಂಚಿಕೆಯ [illegible] ಸ್ಪರ್ಧೆಗಳಲ್ಲಿ ಗೆಲ [illegible] ಭರಣಿಯು ೧, ೩ ಮತ್ತು ೪ ನೆ ಚರಣಗಳಿಗೆ ಒಳಿತು. ತಾ. ೧೦, ೧೧, ೧೩, ೧೪ ಉತ್ತಮ.

ವೃಷಭ

[illegible] ಪ್ರಕೃತಿ ಉತ್ತಮ. ಅವರ [illegible] ಬಹಳ ಕೆಡುವ ಸಂಭವವುಂಟು. [illegible] ಹೀಗೆ ಆತ್ಮವಿಶ್ವಾಸ ಹಾರಿಹೋಗುವದು. ಇತರ ವಿಚಾರಗಳಲ್ಲಿ ಪ್ರಾಪಂಚಿಕ ಸುಖ ಸಾಧ್ಯವು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಲಾಭಗಳು [illegible] ಮಿತ್ರರಿಂದ ದರ್ಶನ [illegible] ಭೆಟ್ಟಿ ಮತ್ತು ಪತ್ರವ್ಯವಹಾರ, ಅನುಕೂಲ [illegible] ತಾ. ೧೧, ೧೨, [illegible]

ಮಿಥುನ

ನಿಮ್ಮ ಪ್ರಕೃತಿಗೆ ಧಕ್ಕೆ ತಗಲಿದರೂ ಹೆಂಡತಿ ಮಕ್ಕಳು ಮೊದಲಾದ ಪ್ರಾಪಂಚಿಕ [illegible]

ಕರ್ಕ

[illegible] ಸ್ನೇಹಿತರು ನಿಮಗೆ ನಿಜವಾಗಿ ಸಂಬಂಧವಿಲ್ಲದ ಒಂದು ನಿಂದ್ಯ [illegible] ಸೇವಕರು ಸರಳ ಕೆಲಸಗಳಲ್ಲಿಯೂ [illegible] ಮಾಡುವರು. ಒಳ್ಳೆ ಬೆಲೆ ಬಾಳುವ ಒಂದೆರಡು ವಸ್ತುಗಳು ಕಳೆದು ಹೋಗುವ [illegible] ಉದ್ಯೋಗ [illegible] ಲಾಭಗಳು ಸ್ವಲ್ಪವಾದರೂ [illegible] ಇರುವದು. ವಾದದಲ್ಲಿಯೂ ಸ್ಪರ್ಧೆ [illegible] ಎರಡೂ ಪಕ್ಷಗಳಿಗೆ [illegible] ವ್ಯವಹಾರಗಳಿಂದ ಭೆಟ್ಟಿಯೇ-

[illegible]

ಸಿಂಹ

[illegible] ಮತ್ತು ಹೆಂಡತಿ [illegible] ಸ್ಥಾನವಾಗಿದ್ದರೂ [illegible] ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ [illegible] ಆದರೆ ಲಾಭ ಮಾತ್ರ ಅಲ್ಪ [illegible] ಭವಿಷ್ಯತ್ [illegible] ಉದ್ಯೋಗ [illegible] ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ [illegible] ಪ್ರವಾಸ ಸ್ವಲ್ಪ ಉತ್ತಮ. [illegible] ತಾ. ೧೧, ೧೩, ೧೪ ಉತ್ತಮ.

ಕನ್ಯಾ

ಎಲ್ಲರ ಪ್ರಕೃತಿಯೂ ಉತ್ತಮ. ಆದರೂ ಒಳಗಿನ ಮತಭೇದಗಳಿಂದ ದಿನ [illegible] ಪ್ರಾಪಂಚಿಕ ವ್ಯವಹಾರದಲ್ಲಿಯೂ [illegible] ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಲಾಭ ಸಾಧಾರಣವಾಗಿದ್ದರೂ ದಿನ [illegible] ಹೊಸ ಹೊಸ ತೊಂದರೆಗಳು [illegible] ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ [illegible] ಪ್ರವಾಸಾದಿ ಕಾರ್ಯಗಳು ಸಾಧಾರಣ ಉತ್ತಮ. [illegible] ತಾ. ೧೧, ೧೩, ೧೪ ಲೇಸು.

ತುಲಾ

ಪ್ರಕೃತಿ ಉತ್ತಮ. ಪ್ರಾಪಂಚಿಕ ಸುಖ [illegible] ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಲಾಭಗಳು [illegible] ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ [illegible] ಮಿತ್ರಸುಖ ಉತ್ತಮ. ಪ್ರವಾಸ ಮತ್ತು ಪತ್ರವ್ಯವಹಾರಗಳು, ಭೆಟ್ಟಿಗಳು ಉತ್ತಮ. [illegible] ತಾ. [illegible] ಒಳಿತು.

[illegible]

ಧನು

[illegible]

ಮಕರ

[illegible] ಬಹಳ. ಕೆಲವು ದೇಶಿ [illegible] ಭೆಟ್ಟಿಗಳು ಪತ್ರವ್ಯವಹಾರ ಉತ್ತಮ. [illegible]

ಕುಂಭ

[illegible] ವಿರೋಧ ಹೆಚ್ಚು. ಪತ್ರವ್ಯವಹಾರ ಭೆಟ್ಟಿಗಳು ಪ್ರವಾಸ ಲೇಸು.

ಮೀನ

ಪ್ರಕೃತಿ ಉತ್ತಮ. ಹೆಂಡತಿ ಮಕ್ಕಳ [illegible] ಉದ್ಯೋಗದಲ್ಲಿ ಭಾವೀ ಪ್ರಗತಿ [illegible] ಪ್ರತಿಷ್ಠೆಗಳ [illegible] ಪ್ರವಾಸಾದಿ ಕಾರ್ಯಗಳು [illegible] ತಾ. ೧೧, ೧೨, ೧೩, ೧೪ ಉತ್ತಮ.

ರೂಪರಂಗ

"ಪ್ಯಾರಕೀ ಜೀತ್"




ರಾಧೆಯ ಪಾತ್ರದಲ್ಲಿ ಸುರಯ್ಯಾ

[illegible] ಪಾತ್ರವನ್ನು ವಹಿಸಿದ್ದಾರೆ. ಗೋಪಾ [illegible] ಪಾತ್ರವನ್ನು ಮನೋರಮೆ [illegible]

ರಾಧೆ ಹಳ್ಳಿಯ ಹುಡುಗಿ. [illegible] ಕಥಾನಾಯಕ ಬಿಹಾರಿಯನ್ನು [illegible] ಪ್ರೀತಿಸುವಳು. ಬಿಹಾರಿ ಅದೇ ಊರಿನ [illegible] ಸುಂದರ ಪಾಲಿಯ. ಗೆಳೆಯ [illegible] ಮನೆಯಲ್ಲಿಯೇ [illegible] ತನ್ನ ಮಗಳಾದ [illegible] ಬಿಹಾರಿಗೆ ಕೊಡಬೇಕೆಂದು [illegible] ರಾಧೆ ಗೋಪಾಲನ ಮಗಳು. [illegible] ಊರಿನ ಜಹಾಗೀರದಾರನಲ್ಲಿ [illegible]

[illegible] ಬಿಹಾರಿಯ [illegible] ವಿಷ ತೆಗೆದುಕೊಳ್ಳುವಳು.



ಜಗತ್ತಿನ ಅತ್ಯುತ್ತಮ ಚಲಚ್ಚಿತ್ರ: ಈಚೆಗೆ ಚಲಚ್ಚಿತ್ರ ಲೋಕಕ್ಕೆ ಪರಿಚಯಿಸಲ್ಪಟ್ಟ ಜಗತ್ಪ್ರಸಿದ್ಧ ಶೇಕ್ಸ್‌ಪಿಯರ ಕವಿಯ ಅಮರ ಕೃತಿ "ಹ್ಯಾಮಲೆಟ್" ಜಗತ್ತಿನ ಅತ್ಯುತ್ತಮ ಚಲಚ್ಚಿತ್ರವೆಂದು ನಿರ್ಧರಿಸಲ್ಪಟ್ಟಿದೆ. ಜೀನ್ ಸೈಮನ್ಸ್ ಮತ್ತು ಲಾರೆನ್ಸ ಆಲಿವರರ, ಆಫೀಲಿಯಾ ಮತ್ತು ಹ್ಯಾಮಲೆಟ್ (ನಾಯಕ-ನಾಯಕಿಯರ ಪಾತ್ರದಲ್ಲಿ)

[illegible] ಜಹಾಗೀರದಾರನಾದ ಮೋತಿಲಾಲನು ರಾಧೆಯನ್ನು ಕಂಡು ಮರುಳನಾಗಿ ಮದುವೆಯಾಗಲು ನಿಶ್ಚಯಿಸುವನು. ಆದರೆ ರಾಧೆಯು [illegible] ಆದರ ಸಿಟ್ಟಿನಾಗಿ ಮೋತಿಯು ಅವನ ಹೊಲಕ್ಕೆ ಬೆಂಕಿ ಹಚ್ಚುವನು. ಬಡವನಾದ ಗೋಪಾಲನಿಗೆ "ಸಾಲ [illegible] ಕೊಡಬೇಕು [illegible] ರಾಧೆಯನ್ನು [illegible] ಬೇಕು" ಎಂದು ಕಾಡುವನು.

ರಾಧೆ ಬಿಹಾರಿಯ ಮನಸ್ಸಿಗೆ ಈ ಸುದ್ದಿ ಹೇಳುವಳು. ಬಿಹಾರಿ ರೊಕ್ಕ ಗಳಿಸಲು ತನ್ನ ಊರಿಗೆ ಹೋಗುವನು. ತಡಮಾಡಿದರೆ "ಮದುವೆ ಮಾಡುವೆನೆಂದು" ಮೋತಿ ಗೋಪಾಲನಿಗೆ ಜೀವ [illegible] ಅಗ [illegible] ಮದುವೆ ಮಾಡಬೇಕಾಗುತ್ತದೆ. ಮದುವೆ ನಡೆದಾಗ ಬಿಹಾರಿ ತನ್ನ ಮನೆಯನ್ನು ಮಾರಿ ರೂಪಾಯಿ ತರುವನು. ಬಿಹಾರಿ ರಾಧೆಯ ಮದುವೆಯಾದದ್ದನ್ನು ನೋಡಿ ಸಿರಾಶನಾಗಿ ತಂದ ರೂಪಾಯಿಗಳನ್ನು [illegible] ಚೆಲ್ಲುವನು. ಮೋತಿ ರಾಧೆಯ ಪ್ರೇಮ ತನ್ನಕಡೆ

ಆಗ [illegible] ಬಂದು ತಾನೂ ವಿಷ ತೆಗೆದುಕೊಳ್ಳುವನು. ಅಷ್ಟರಲ್ಲಿ ಅಲ್ಲಿಗೆ ಬಂದ [illegible]

ಕಥೆಯು [illegible] ಸುರಯ್ಯ ಚೆನ್ನಾಗಿ ಅಭಿನಯಿಸಿದ್ದಾಳೆ. ರಹಮಾನ್ ಸಾಧಾರಣ. ಗೋಪನು ತನ್ನ ಹಾಸ್ಯ ಪಾತ್ರದಲ್ಲಿ ಉತ್ತಮವಾಗಿ ಅಭಿನಯಿಸಿದ್ದಾನೆ. ಮನೋರಮೆಯ ಅಭಿನಯ ಸ್ವಲ್ಪ ಅಶ್ಲೀಲ ಕಾಣಿಸಿದರೂ ಸಂದರ್ಭಕ್ಕೆ ಯುಕ್ತವಾಗಿದೆಯೆಂದು ಕೆಲವರೆನ್ನಬಹುದು. ಆದರೂ ಅವಳ ಪಾತ್ರ ಹಳ್ಳಿಯ ಜೀವನಕ್ಕೆ ಹೊಂದಿಕೆಯಾಗು

ವದಿಲ್ಲ. ಕೆಲವು ಸನ್ನಿವೇಶಗಳು ಹಳ್ಳಿಯ ಜೀವನದ ಅವಾಸ್ತವಾಂಶವನ್ನು ತೋರಿಸಿ ಅಪಪ್ರಚಾರಮಾಡುವಂಥವಾಗಿವೆ. ಕಾರಣಾಂತರದಿಂದ ಹುಬ್ಬಳ್ಳಿಯ ಮಿಕ್ಕ ರೂಪರಂಗಗಳು ಮುಚ್ಚಿದ್ದರೂ ಈ ಚಿತ್ರ ನಡೆಯುತ್ತಿರುವ "ರೂಪಂ" [illegible] ನೆರೆದು ಚಿತ್ರಪ್ರದರ್ಶನವನ್ನು [illegible]

ಉಪಾಯದ ಉತ್ತರ

ಕರಿಯಪ್ಪಗೌಡರು ಅಂಗಡಿ ಕಾರಕೂನರಾಗಿದ್ದರೂ ಬಹಳ ಮಿತವ್ಯಯ ಮಾಡಿ ತಿಂಗಳು ತಿಂಗಳೂ ಹುಬ್ಬಳ್ಳಿಯ ಬ್ಯಾಂಕೊಂದರಲ್ಲಿ ಹಣವನ್ನು ಕೇಖರಿಸುತ್ತ ಬಂದಿದ್ದರು. ಎರಡು ವರ್ಷದ ಸತತ ಶ್ರಮದ ಬಳಿಕ ಅವರೊಮ್ಮೆ ರಜೆ ತೆಗೆದುಕೊಂಡು ಊರು ಸುತ್ತಿಕೊಂಡು ಬರಲು ಹೊರಟರು. ಬೆಂಗಳೂರಲ್ಲಿ ಆವರಿದ್ದಾಗ ಕೈಯಲ್ಲಿದ್ದ ಹಣ ತೀರಿಹೋಯಿತು. ಆಗ ಅವರು ಗೆಳೆಯನೊಬ್ಬನನ್ನು ಹಿಡಿದು ಹುಬ್ಬಳ್ಳಿಯಲ್ಲಿದ್ದ ತಮ್ಮ ಬ್ಯಾಂಕ ಲೆಕ್ಕದ ಮೇಲೆ ಚೆಕ್ ಪಟಾಯಿಸಿದರು.

ಕರಿಗೌಡರು ಇನ್ನೂ ಬೆಂಗಳೂರು ಬಿಟ್ಟಿದ್ದಿಲ್ಲ. ಒಂದು ದಿನ ಅವರ ಗೆಳೆಯ ಸೊಟ್ಟ ಮೋರೆ ಮಾಡಿಕೊಂಡು ಬಂದು ಅವರ ಚೆಕ್ಕನ್ನು ಹುಬ್ಬಳ್ಳಿ ಬ್ಯಾಂಕಿನ ಲಿಪಿಯೊಂದಿಗೆ ತಿರುಗಿ ತಂದು ಕೊಟ್ಟ. "ಸಾಕಷ್ಟು ಹಣವಿಲ್ಲ" ಎಂದು ಆ ಲಿಪಿಯಲ್ಲಿ ಬರೆದಿತ್ತು.


ಗೌಡರಿಗೆ ತೀರ ಅಪಮಾನವಾಯಿತು. ಅವರು ಒಡನೆ ಹುಬ್ಬಳ್ಳಿಗೆ ಟ್ರಂಕ್ ಟೆಲಿಫೋನ ಮಾಡಿ ಬ್ಯಾಂಕಿನ ಏಜಂಟರನ್ನು ಜಬ್ಬರಿಸಿದರು. ನನ್ನ ಲೆಕ್ಕದಲ್ಲಿ ಸಾಕಷ್ಟು ಹಣವಿದ್ದೇ ತೀರಬೇಕು. ಹೀಗಿರುವಾಗ ಹೀಗೇಕೆ ಪರಊರಲ್ಲಿ ನನ್ನ ಮಾನ ತೆಗೆದಿರಿ?"

ಏಜಂಟ ಕೆಲವು ಕ್ಷಣ ಮೌನವಾಗಿದ್ದು [illegible] ಸವಿಸವಿಯಾದ ನಗೆಯೊಂದಿಗೆ [illegible]

"ಗೌಡರೇ ಸಿಟ್ಟಾಗಬೇಡಿರಿ. 'ಸಾಕಷ್ಟು ಹಣವಿಲ್ಲ' ಎಂದಾಕ್ಷಣ ನಿಮ್ಮ ಲೆಕ್ಕದಲ್ಲಿ ಎಂದು ಮಾತ್ರ ಅರ್ಥವೇ? ನಮ್ಮ ಬ್ಯಾಂಕಿನಲ್ಲಿ ಏಕೇಕೆ ಆಗಬಾರದು?"

ಕಾಲರಾ

ಭಾರತದಲ್ಲಿ ಸಾವಿರಾರು ಜನರು ಕಾಲರಾ ಬೇನೆ ಬಡಿದು ಸಾವಿನ ಬಾಯಿಗೆ ತುತ್ತಾಗುವರು. ಊರೂರಿಗೆ ಯಾತ್ರೆಗೆ ಹೋಗುವವರಿಗೆ ಈ ಬೇನೆ ಯಾವಾಗ ಬಡೆದೀತು ಎಂಬದರ ಗೊತ್ತೆ ಇಲ್ಲ. ಕಾಲರಾದ ಸಂಶಯ ಬಂದ ಕೂಡಲೇ ಜವೇರಿಯನ್ ಜೀವನ ಮಿಕ್ಚರದ ಒಂದೆರಡು ಹನಿ ನೀರಲ್ಲಿ ಹಾಕಿ ಕುಡಿದರೆ ಜೀವ ಉಳಿಯುವದು. ಅತಿಸಾರ, ಮಕ್ಕಳ ಅಜೀರ್ಣ, ಹೊಟ್ಟೆ ಉಬ್ಬುವದು, ಶೀತ, ನೆಗಡಿ, ಹಲ್ಲು ನೋವು, ಹೊಟ್ಟೆ ನೋವು, ಮುಂತಾದ ಸಣ್ಣ ದೊಡ್ಡ ಬೇನೆಗಳಿಗಾಗಿ ಬಹಳೇ ಗುಣಕಾರಿಯಾದ್ದರಿಂದ ಮನೆಯಲ್ಲಿಯೂ, ಪ್ರವಾಸ ಮಾಡುವಾಗಲೂ ಹತ್ತರ ಈ ಔಷಧದ ಒಂದು ಬಾಟಲಿ ಇಟ್ಟುಕೊಂಡರೆ ಬೇನೆಯ ಭಯವೂ ಹೋಗುವದು ಮತ್ತೂ ಡಾಕ್ಟರರಿಗೆ ಕೊಡಬೇಕಾದ ಹಣವೂ ಉಳಿಯುವದು. ಕೆಮಿಸ್ಟರಲ್ಲಿಯೂ ಹಳ್ಳಿಹಳ್ಳಿಗಳ [illegible] ಅಂಗಡಿಗಳಲ್ಲಿಯೂ ಸಿಗುತ್ತದೆ.



ಕರ್ನಾಟಕ

ಧಾರವಾಡ

ಧಾರವಾಡ ಸಿವಿಲ್ ಜಡ್ಜ ಸೀನಿಯರ ಡಿವಿಜನ ಕೋರ್ಟಿನ ನಾಝರರಾದ ಶ್ರೀ ಪಡಕೆಯವರು ಜಪ್ತಾದ ಮಾಲನ್ನು ತಿರುಗಿ ಕೊಡುವಾಗ ೧೦ ರೂಪಾಯಿ ಲಂಚ ತೆಗೆದುಕೊಳ್ಳುವಾಗ ಲಂಚ ನಿರ್ಮೂಲನ ಶಾಖೆಯ ಸ. ಇ. ಶ್ರೀ ಕಲ್ಲೂರರು ಅವರನ್ನು ಸೆರೆಹಿಡಿದರೆಂದು ತಿಳಿಯುತ್ತದೆ.

ಮುಂಬಯಿ-ಹುಬ್ಬಳ್ಳಿ ಕೇಪಕಾನೋರಿನ ರಸ್ತೆಯನ್ನು ರಾಜಮಾರ್ಗವನ್ನಾಗಿ ಮಾಡುವ ಕುರಿತು ಕೇಂದ್ರ ಸಾರಿಗೆ ಮಂತ್ರಿ ಶ್ರೀ ಕೆ. ಸಂತಾನಂ ಮತ್ತು ಮುಂಬಯಿ ಮಂತ್ರಿ ಡಾ. ಗಿಲ್ಡರ ಇವರಲ್ಲಿ ಚರ್ಚೆ ನಡೆಯಿತು. ಹಿಂದುಸ್ತಾನದಲ್ಲಿ ಇದೇ ಮೊದಲನೆ ರಾಜಮಾರ್ಗವಾಗಲಿದ್ದು ರಾಜಮಾರ್ಗವಾದ ಮೇಲೆ ಅದರ ಸಂಪೂರ್ಣ ಹೊಣೆ ಹಿಂದುಸ್ತಾನ ಸರಕಾರಕ್ಕೆ ಸೇರುವದು.

ಹುಬ್ಬಳ್ಳಿ ಸಿಟಿ ಮೋಟರ ಬಸ್ ಸರ್ವಿಸ್ಸು ಇಡಲು ಹುಬ್ಬಳ್ಳಿಯ ಶ್ರೀ. ಮಹಾಲಿಂಗಶೆಟ್ಟಿ ಮೊದಲಾದವರು ಸ್ಥಾಪಿಸಿದ ಕಂಪನಿಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಕೊಟ್ಟ ಅಪ್ಪಣೆಯನ್ನು ಪ್ರಾಂತದ ಸಾರಿಗೆ ಮಂಡಲವು ರದ್ದುಪಡಿಸಿ ಪುನರ್ವಿಚಾರ ಮಾಡಲು ಪ್ರಾದೇಶಿಕ ಮಂಡಳಕ್ಕೆ ವಿಧಿಸಿರುವದೆಂದು ವಿಶ್ವಸನೀಯವಾಗಿ ತಿಳಿಯುತ್ತದೆ.

ಹುಬ್ಬಳ್ಳಿ-ಗದಗ ರಸ್ತೆಯಲ್ಲಿ ರೇಲ್ವೆ ಗೇಟಿನ ಸಮೀಪದ ಹೊಲದಲ್ಲಿ ಅದೇ ಒಕ್ಕಿದ ಹೊಸ ಜೋಳದ ರಾಶಿಯನ್ನು ಕಾಯುತಿದ್ದ ಹಳ್ಳಿಗರ ಮೇಲೆ ೨೫ ಲಾಠಿಧಾರಿಗಳು ಏರಿಹೋಗಿ ಗಾಯಗೊಳಿಸಿ ೧೨ ಚೀಲ ಜೋಳ ತೆಗೆದುಕೊಂಡು ಹೋಗಿರುವರು. ೬ ಜನ ತೀವ್ರ ಗಾಯಗೊಂಡಿದ್ದು ಒಬ್ಬನು ನಿಧನಹೊಂದಿದನು.

ಹುಬ್ಬಳ್ಳಿಯಲ್ಲಿರುವ ಏಳು ಚಿತ್ರಮಂದಿರಗಳಲ್ಲಿ ರೂಪಂ ಚಿತ್ರಮಂದಿರವನ್ನುಳಿದು ಉಳಿದ ಆರು ಚಿತ್ರಮಂದಿರಗಳೂ ಇದೇ ಒಂದನೆ ದಿನಾಂಕದಿಂದ ಮುಚ್ಚಿವೆ. ಚಿತ್ರಮಂದಿರಗಳಿಗೆ ಹೊಸ ಲಾಯಸೆನ್ಸ ಕೊಡದೇ ಇದ್ದುದೇ ಮಂದಿರಗಳು ಮುಚ್ಚಲಿಕ್ಕೆ ಕಾರಣ.

ಹುಬ್ಬಳ್ಳಿಯಲ್ಲಿ ಬಿ. ವಿ. ಭೂಮರೆಡ್ಡಿ ಎಂಜನಿಯರಿಂಗ ಕಾಲೇಜಿಗೆ ಗದುಗಿನ ಶ್ರೀ ಫಕೀರಪ್ಪ ಲಕ್ಷ್ಮೇಶ್ವರ, ಶಾಂತಪ್ಪಣ್ಣ ಎಳಮಲಿ, ಸಿದ್ದಪ್ಪಣ್ಣ ಭೂಮರಡ್ಡಿ ಮೊದಲಾದವರು ಕೂಡಿಕೊಂಡು ಒಟ್ಟು ೧೪೫೦೨ ರೂಪಾಯಿಗಳನ್ನು ಬೇರೆ ಬೇರೆ ಜನರಿಂದ ಕೂಡಿಸಿ ಕಳಿಸಿದುದನ್ನು ಸಂಸ್ಥೆಯ ಸಂಚಾಲಕರು ಆದರದಿಂದ ಸ್ವೀಕರಿಸಿದ್ದಾರೆ.

ಬದಾಮಿ ತಾಲೂಕಿನ ೫೬, ಬಾಗಲಕೋಟೆ ತಾಲೂಕಿನ ೧೪, ಹುನಗುಂದ ತಾಲೂಕಿನ ೧೧, ಬೀಳಗಿ ಪೇಟಾ ೩೭, ಬಾಗೇವಾಡಿ ೬, ಹಾವೇರಿ ೫. ಕಲಘಟಗಿ ೧. ಹುಬ್ಬಳ್ಳಿ ೨. ಹೀಗೆ ೧೩೪ ಹಳ್ಳಿಗಳ ಕುಲಕರ್ಣಿಯರು ರಾಜೀನಾಮೆ ಕೊಟ್ಟಿದ್ದಾರೆ. ಇದಕ್ಕೂ ಮೊದಲು ಬಾಗಲಕೋಟೆ ೩೬, ನರಗುಂದ ೨೦, ಹಾನಗಲ್ಲ ೮, ಹುಬ್ಬಳ್ಳಿ ೭, ಶಿಗ್ಗಾವಿ ೯, ಹಿರೇಕರೂರ ೬ ನವಲಗುಂದ ೧ ಅಥಣಿ ೧೯ ಹೀಗೆ ೧೦೬ ಕುಲಕರ್ಣಿಯರು ರಾಜೀನಾಮೆ ಕೊಟ್ಟಿದಾರೆ.

ಬೆಳಗಾವಿ

ಗೋಕಾವಿ ತಾಲೂಕ ವೆಂಕಟಾಪುರದಲ್ಲಿ ಕಳೆದ ವಾರ ಸಂಭವಿಸಿದ ವೆಂಕಪ್ಪ ನಾಯಕರ ಇವರ ಕೊಲೆಯ ಸಂಬಂಧದಲ್ಲಿ ಅದೇ ಊರಿನ ಶ್ರೀ ಎಸ್ ಆರ್ ಪಾಟೀಲ ವಕೀಲ ಮತ್ತು ಅವರ ಅಣ್ಣಂದಿರಾದ ವಿ ಆರ್ ಪಾಟೀಲ ಇವರನ್ನು ಬಂಧಿಸಲಾಗಿದೆ. ಹೊಲದ ಸಂಬಂಧದಲ್ಲಿ ಈ ಕೊಲೆಯಾಗಿದೆ.

ಕಳೆದ ಶುಕ್ರವಾರ ಗೋಕಾಕ ತಾಲೂಕಿನ ತಪಸಿಯಲ್ಲಿ ಸಿದ್ದಾ ಎಂಬವನನ್ನು ಕಲ್ಲಿನಿಂದ ಜಜ್ಜಿ ಕೊಲೆ ಮಾಡಲಾಯಿತು. . ಅಮಾನುಷ ರೀತಿಯಿಂದ ಇವೆರಡೂ ಕೊಲೆಗಳಾಗಿವೆಯೆಂದು ತಿಳಿಯುತ್ತದೆ.

ಗೋಕಾವಿ ಭಾಗದಲ್ಲಿ ಹೆಚ್ಚಾಗಿ ಬಿದ್ದ ಮಳೆಯ ದುರಂತದ ಪರಿಣಾಮವಾಗಿ ಗೋದಿ ಬೆಳೆಗೆ ಕುಂಕುಮ ರೋಗ ಬಿದ್ದು ಅದು ಪೂರ್ಣ ಹೋಯಿತು. ಬಿಳಿ ಜೋಳಕ್ಕೆ ಅಂಟು ರೋಗ ಹತ್ತಿ ಕೈಗೆ ಬರದಂತೆ ಆಗಿದೆ. ಇದರಿಂದ ದುರ್ಭಿಕ್ಷೆಯ ಚಿನ್ಹ ತೋರಹತ್ತಿವೆ.

ಕಳೆದ ಶುಕ್ರವಾರ ಬೆಳಗಾವಿ ಅಳಣಾವರ ಮೋಟರ ಸರ್ವಿಸ್ ಬಸ್ಸು ನಂದಗಡದಿಂದ ೯ ಮೈಲುಗಳ ಮೇಲೆ ಬೆರಡೆ ಅಡವಿಯಲ್ಲಿ ಭಯಂಕರ ಸ್ವರೂಪದ ಅಪಘಾತವಾಯಿತು. ಗಾಡಿ ಉರುಳಿ ಬಿದ್ದು ಒಮ್ಮೆಲೆ ಅದಕ್ಕೆ ಬೆಂಕಿ ಹತ್ತಿದ್ದರಿಂದ ಸುಟ್ಟು ಬೂದಿಯಾಯಿತು. ಅದರಲ್ಲಿ ಇದ್ದ ಒಬ್ಬ ಬಾಗವಾನನು ಕೂಡಲೆ ಅಲ್ಲಿಯೇ ಸತ್ತು ಹೋದನು. ೭ ಜನರಿಗೆ ಭಯಂಕರ ಸ್ವರೂಪದ ಗಾಯಗಳಾಗಿವೆ.

ಬೆಳಗಾವಿಯಲ್ಲಿ ಮರಾಠಾ ಲಾಯಿಟ ಇನ್‌ಫಂಟರಿ ರೆಜಿಮೆಂಟಿನ ಪರವಾಗಿ ಕ್ಯಾಂಪಿನಲ್ಲಿಯ ಕವಾಯತ ಪಟಾಂಗಣದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಭಾವಚಿತ್ರದ ಅನಾವರಣ ಸಮಾರಂಭ ಕೊಲ್ಹಾಪೂರ ಮಹಾರಾಜರ ಹಸ್ತದಿಂದ ಜರುಗಿತು.

ಬೆಳಗಾವಿಯ ವಕೀಲರಾದ ಶ್ರೀ ಎಸ್. ಎಸ್. ಶ್ರೀಖಂಡೆಯವರು ಕಾರವಾರ ನ್ಯಾಯಾಧೀಶರಾಗಿ ನೇಮಿಸಲ್ಪಟ್ಟಿದ್ದಾರೆ.

ಸಾಂಗಲಿಯಲ್ಲಿ ೨ ನೇ ತಾರೀಕು ಆರ್ ಎಸ್ ಎಸ್ ದ ೭ ಜನ ಸ್ವಯಂಸೇವಕರು ಕಾಯದೆ ಮುರಿದದ್ದರಿಂದ ಸೆರೆ ಹಿಡಿಯಲ್ಪಟ್ಟರು.

ಗೋಕಾಕದಲ್ಲಿ ಮಳೆಗಾಲದಲ್ಲಿ ನದಿಗಳ ನೀರು ಬಹಳ ಕೆಡುವದರಿಂದ ನಗರದಲ್ಲಿ ಬೇರೆ ನೀರು ಇಲ್ಲದ್ದರಿಂದ ಹೊಲಸು ನೀರು ಬಳಸಿ ಬಗೆಬಗೆಯ ಬೇನೆಗಳಿಗೆ ಜನರು ಆಹುತಿಯಾಗುತ್ತಿರುವದರಿಂದ ಇದನ್ನು ನಿವಾರಿಸಲು ಬೇಗನೆ ನಗರದಲ್ಲಿ ನಳಗಳನ್ನು ಹಾಕಲು ಮತ್ತು ಡ್ರೇನೇಜ ವ್ಯವಸ್ಥೆ ಮಾಡಲು ನಗರ ಸಭೆಯವರು ಗೊತ್ತುವಳಿ ಸ್ವೀಕರಿಸಿದ್ದಾರೆ.

ಬೆಳಗಾವಿಯ ರಾಣಿ ಪಾರ್ವತೀಬಾಯಿ ಕಾಲೇಜಿಗೆ ಶ್ರೀ. ಬೆಳವಿ ದತ್ತೋಪಂತರು ೫೫೦೦ ರೂಪಾಯಿಗಳ ಕಾಣಿಕೆಯನ್ನು ತಮ್ಮ ಮಗ ದಿವಂಗತ ನಾರಾಯಣರಾಯರ ಸ್ಮರಣಾರ್ಥ ಕೊಟ್ಟಿದ್ದಾರೆ. ಇದರಲ್ಲಿ ೫೦೦೦ ರೂಪಾಯಿ ಬಡ್ಡಿಯಲ್ಲಿ ಆ ಕಾಲೇಜಿನ ಜ್ಯುನಿಯರ ಬಿ. ಎ. ಪರೀಕ್ಷೆಯಲ್ಲಿ ಆಂಗ್ಲ ಭಾಷೆಯಲ್ಲಿ ಪ್ರಥಮ ಸ್ಥಾನಪಡೆದ ವಿದ್ಯಾರ್ಥಿ ವಿದ್ಯಾರ್ಥಿನಿಗೆ ಬಹುಮಾನ ಕೊಡಬೇಕೆಂದು ವಿಧಿಸಲಾಗಿದೆ. ೫೦೦ ರೂ. ಕಾಲೇಜಿನ ಕಟ್ಟಡ ನಿಧಿಗೆ ಕೊಡಲಾಗಿದೆ.

ಶ್ರೀ ಬೆಳವಿ ದತ್ತೋಪಂತರು ಧಾರವಾಡದಲ್ಲಿಯ ಕೆ. ಈ. ಬೋರ್ಡ ಕಾಲೇಜಿನ ಕಟ್ಟಡ ನಿಧಿಗೆ ತಮ್ಮ ಮಗ ದಿ. ನಾರಾಯಣರಾಯರ ಸ್ಮರಣಾರ್ಥ ೫೦೦ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಸಾಮ್ಯವಾದಿ ಪಕ್ಷದ ಧುರೀಣರಾದ ಶ್ರೀ ಸಾನೇ ಗುರೂಜಿಯವರು ಕಳೆದ ವಾರ ಬೆಳಗಾವಿಗೆ ಬಂದಾಗ ಅವರಿಗೆ ೩೫೦೦ ರೂಪಾಯಿಗಳ ಹಮ್ಮಿಣಿಯನ್ನು ಅರ್ಪಿಸಲಾಯಿತು. ಈ ಸಮಾರಂಭಕ್ಕೆ ಶ್ರೀ ಗಂಗಾಧರರಾವ ದೇಶಪಾಂಡೆ ಅಧ್ಯಕ್ಷರಾಗಿದ್ದರು.

ಸೆಂಟ್ರಲ್ ಎಕ್ಸಾಯಿಜ ಇನಸ್ಪೆಕ್ಟರ ಎಂ. ಎನ್. ದೇಸಾಯಿ ಇವರು ಒಂದು ರಜಿಷ್ಟರದಲ್ಲಿ ತಿದ್ದುಪಡಿ ಮಾಡಲು ೪೦ ರೂ. ಲಂಚ ತೆಗೆದುಕೊಳ್ಳುವಾಗ ಲಂಚ ನಿರ್ಮೂಲನ ಶಾಖೆಯ ಡಿ ವಾಯ ಎಸ್ ಪಿ ಶ್ರೀ ಗುಡಿಯವರು ತಮ್ಮ ಸಂಗಡಿಗರ ಸಹಾಯದಿಂದ ಅವರನ್ನು ಸೆರೆ ಹಿಡಿದರು.

ವಿಜಾಪೂರ

ಹುನಗುಂದದ ಶ್ರೀ ಸಂಗಪ್ಪಾ ವೀರಾಪುರ ಇವರು ಹುನಗುಂದ ವಿವಿಧೋದ್ದೇಶ ಸಂಘದ ಕಾರ್ಯದರ್ಶಿ ಶ್ರೀ ಶಿವಪ್ಪಾ ಹಳಪೇಟಿ ಇವರ ಮೇಲೆ ಸಂಘದ ಹಣವನ್ನು ಬಳಸಿದ ಆರೋಪ ಹೊರಿಸಿ ಪತ್ರಿಕೆಗಳಲ್ಲಿ ಲೇಖ ಪ್ರಕಟಿಸಿದ್ದರ ಸಂಬಂಧದಲ್ಲಿ ಶ್ರೀ ಶಿವಪ್ಪನವರು ಮಾನಹಾನಿ ಮೊಕದ್ದಮೆ ಹೂಡಿದ್ದರು. ಇದರಲ್ಲಿ ಸಂಗಪ್ಪ ಇವರಿಗೆ ಒಂದು ದಿನದ ಶಿಕ್ಷೆ ಮತ್ತು ೪೫೦ ರೂ ದಂಡ ವಿಧಿಸಿ ಅದರಲ್ಲಿ ೨೦೦ ರೂ. ಹಳಪೇಟಿಯವರಿಗೆ ಕೊಡಬೇಕೆಂದು ತೀರ್ಪು ಕೊಡಲಾಯಿತು.

ಬರುವ ಫೆಬ್ರುವರಿ ಕೊನೆಯ ವಾರದಲ್ಲಿ ವಿಜಾಪೂರದಲ್ಲಿ ಕರ್ನಾಟಕ ಮಾಧ್ಯಮಿಕ ಶಿಕ್ಷಕರ ಸಮ್ಮೇಲನವು ಕೂಡಲಿದೆ. ಅದರ ಅಂಗವಾಗಿ ಶಾರೀರಿಕ ಡ್ರಾಯಿಂಗ ಮತ್ತು ಕೈಗಾರಿಕೆ ಪ್ರೌಢ ಶಿಕ್ಷಣ ಮತ್ತು ಮುಖ್ಯಾಧ್ಯಾಪಕರ ಕೆಲ ಭಾಗದ ವಿಷಯಗಳ ಸಮ್ಮೇಲನಗಳೂ ಪ್ರದರ್ಶನವೂ ನಡೆಯುವವು. ಪ್ರಬಂಧ ಓದುವವರು ಈ ತಿಂಗಳ ಕೊನೆಯೊಳಗಾಗಿ ಕಳಿಸಬೇಕು.

ಇಲ್ಲಿಯ ಪ್ರಸಿದ್ಧ ವಕೀಲರಾದ ಶ್ರೀ ಆಲಬಾಳ ವೆಂಕಟರಾಯರು ಸಾತಾರಾ ಜಿಲ್ಹಾ ನ್ಯಾಯಾಧೀಶರೆಂದು ನೇಮಿಸಲ್ಪಟ್ಟಿದ್ದಾರೆ. ಶ್ರೀ ಬಪಲೆ ಮತ್ತು ಭಟ್ಟ ಇವರೂ ಹೊಸದಾಗಿ ನ್ಯಾಯಾಧೀಶರೆಂದು ನೇಮಿಸಲ್ಪಟ್ಟಿದ್ದಾರೆ. ಶ್ರೀ ಅಲಬಬಾಳರು ಇಂದು ಅಧಿಕಾರ ಸ್ವೀಕರಿಸುವರು.

ಬಾಗಲಕೋಟೆಯ ಪ್ರಸಿದ್ಧ ಶ್ರೀಮಂತ ಗುರಪ್ಪಾ ಸಕ್ರಿಯವರು ಮೊನ್ನೆ ದಿನ ಮುಂಬಯಿಯಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಶವವನ್ನು ಬಾಗಲಕೋಟೆಗೆ ತಂದು ಅಂತ್ಯ ವಿಧಿಯನ್ನು ಜರುಗಿಸಲಾಗುವದು.

ಬಳ್ಳಾರಿ

ಕೇಂದ್ರ ಸರಕಾರದ ಸುದ್ದಿ ಮತ್ತು ಬಾನುಲಿ ಶಾಖೆಯ ಮಂತ್ರಿಗಳಾದ ಶ್ರೀ ದಿವಾಕರ ಮತ್ತು ಸೇನಾಪತಿ ಕಾರ್‍ಯಪ್ಪನವರನ್ನು ಅಭಿನಂದಿಸುವ ಗೊತ್ತುವಳಿಯನ್ನು ಬಳ್ಳಾರಿ ನಾಗರಿಕ ಸಭೆಯವರು ಸ್ವೀಕರಿಸಿದರು.

ಮದ್ರಾಸ ಸರಕಾರದ ಔದ್ಯಮಿಕ ಮಂತ್ರಿಗಳಾದ ಮಾನ್ಯ ಎಚ್ ಸೀತಾರಾಮರಡ್ಡಿಯವರು ೩೦ ನೇ ತಾರೀಕು ರಾಯಲ್ ಸೀಮಾ ಪೋಲಿಟೆಕ್ನಿಕ್ ಸಂಸ್ಥೆಯ ವಿದ್ಯಾರ್ಥಿ ಸಂಘವನ್ನು ಪ್ರಾರಂಭಿಸುತ್ತ ವಿದ್ಯಾರ್ಥಿಗಳು ರಾಷ್ಟ್ರೀಯ ಧ್ಯೇಯವನ್ನು ಮುಂದಿಟ್ಟುಕೊಂಡು ಕಾರ್‍ಯಮಾಡಬೇಕೆಂದು ಉಪದೇಶಿಸಿದರು.

ಮದ್ರಾಸ ಸರಕಾರದ ಒಕ್ಕಲತನ ಮಂತ್ರಿ ಶ್ರೀ ಕೆ. ಮಾಧವ ಮೆನನ್ ಉದ್ಯೋಗ ಮಂತ್ರಿ ಶ್ರೀ ಎಚ್. ಸೀತಾರಾಮ ರೆಡ್ಡಿಯವರು ಕಳೆದ ಬುಧವಾರ ಬಳ್ಳಾರಿಗೆ ಬಂದು ಭೈರದೇವನಹಳ್ಳಿಯಲ್ಲಿ ಕಟ್ಟಲಾಗುತಿರುವ ಅಣೆಕಟ್ಟನ್ನು ನೋಡಿಕೊಂಡು ಹೋದರು. ಇಲ್ಲಿನ ವಿವಿಧ ಕಾರ್ಯಕ್ರಮಗಳನ್ನು ತೀರಿಸಿಕೊಂಡು ಮಂತ್ರಿದ್ವಯ ಮದ್ರಾಸಕ್ಕೆ ಮರಳಿತು.

ದ. ಕನ್ನಡ

ತಾ. ೧೮ರಂದು ಮಂಗಳೂರಿನ ಕೇಂದ್ರ ಮೈದಾನಿನಲ್ಲಿ ಜಿಲ್ಹಾ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಜರಗಿದ ಸಾರ್ವಜನಿಕ ಸಭೆಯೊಂದರಲ್ಲಿ ಆರ್. ಎಸ್. ಎಸ್, ಕಮ್ಯುನಿಸ್ಟ ಮತ್ತು ಸೋಶಿಯಲಿಸ್ಟರ ಚಟುವಟಿಕೆಗಳನ್ನು ಖಂಡಿಸಲಾಯಿತು. ಸಭೆಗೆ ಹಿರಿಯಡ್ಕ ರಾಮರಾಯ ಮಲ್ಯರು ಅಧ್ಯಕ್ಷತೆ ವಹಿಸಿದ್ದರು.

ಹಿಂದುಸ್ಥಾನ ಸರಕಾರದವರು ತಮ್ಮ ಅಡಿಕೆ ಕೈಗಾರಿಕೆ ಅಭಿವೃದ್ಧಿ ಧೋರಣೆಯಂತೆ ಶಿವಮೊಗ್ಗದ ಶ್ರೀ ಕೆ. ಕಾಮಣ್ಣ, ಬಿ. ಎ, ಎಲ್ ಎಲ್. ಬಿ. ಇವರನ್ನು ಅಡಿಕೆ ಸಂಶೆ ಅಧಿಕಾರಿಗಳಾಗಿ ನೇಮಿಸಿರುವರು.

ಮುಲ್ಕಿಯಲ್ಲಿ ಫೆಬ್ರುವರಿ ತಾ. ೫ರಂದು ಪಶು ಹಾಗು ಕೃಷಿ ಕೈಗಾರಿಕೆಗಳ ಪ್ರದರ್ಶನವೊಂದು ಜರುಗಲಿರುವುದು.

ಉಡುಪಿ ಕರ್ನಾಟಕ ಸಂಘದ ವಾರ್ಷಿಕ ಸಭೆಯು ತಾ. ೨೬ರಂದು ಶ್ರೀ ಎನ್. ರಾಜಗೋಪಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಉಡುಪಿಯಲ್ಲಿ ಸಬ್‌ಕೋರ್ಟ ಒಂದನ್ನು ಸ್ಥಾಪಿಸುವ ಕುರಿತು ಅದು ಅಗತ್ಯ ಎಂದು ಸೂಚಿಸಿದ ಹೈಕೋರ್ಟಿನ ನ್ಯಾಯಾಧೀಶರ ಅಭಿಪ್ರಾಯವನ್ನು ಮದ್ರಾಸು ಸರಕಾರವು ಮನ್ನಿಸಿದೆ ಎಂದು ತಿಳಿಯುತ್ತದೆ.

ದ. ಕ. ಅಟೋಮೋಬೈಲ್ ಕೆಲಸಗಾರರ ಸಭೆಯೊಂದು ತಾ ೨೫ರಂದು ಉಡುಪಿಯಲ್ಲಿ ಉಡುಪಿ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಎನ್ ಎಸ್ ಕಿಲ್ಲೆಯವರು ತಮ್ಮ ಭಾಷಣದಲ್ಲಿ "ಮೋಟಾರು ಕೆಲಸಗಾರರ ಕೋರಿಕೆಗಳು ನ್ಯಾಯ್ಯವಾದುವೆಂದು ಕಾಂಗ್ರೆಸು ತಿಳಿದಿದೆ. ಮಾಲಕರು ಕಾರ್ಮಿಕರಿಗೆ ಸರಿ ಪಾಲನ್ನು ಕೊಡುವ ವರೆಗೆ ಕಾಂಗ್ರೆಸು ಮತ್ತು ಕಾಂಗ್ರೆಸ ಸರಕಾರವು ಸುಮ್ಮನಿರಲಾರದು" ಎಂದು ಹೇಳಿದರು. ಶ್ರೀಗಳಾದ ಬಿ. ಎಸ್. ಭಾಸ್ಕರ ಪೈ, ವಿಠಲದಾಸ ಮೊದಲಾದವರೂ ಮಾತನಾಡಿದರು.

ಉಡುಪಿ ತಾಲೂಕು ರೈತಜನರ ಪರಿಷತ್ತೊಂದು ತಾ೧೪ರಂದು ಕಾಸರಗೋಡಿನ ಶ್ರೀ. ಉಮೇಶರಾಯರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಪೆರಡಾಲದ ಮಹಾಜನ ಸಂಸ್ಕೃತ ಕಲಾಶಾಲೆಯ ೨೭ನೆಯ ವರ್ಷೋತ್ಸವವು ತಾ. ೨೧ರಂದು ಡಾ. ಯು. ಪಿ. ಮಲ್ಯ, ಎಂ ಎಲ್ ಎ ಇವರ ಅಧ್ಯಕ್ಷತೆಯಲ್ಲಿ ಜರುಗಿತು.

ಮಂಗಳೂರಲ್ಲಿ ತಾ ೩೦ ರಂದು ಸರಕಾರದ ನಿರ್ಬಂಧವನ್ನುಳಿದು ಮೆರವಣಿಗೆ ಹೊರಡಿಸಿದ್ದರ ಬಗ್ಗೆ ಆರ್ ಎಸ್ ಎಸ್ ದ ೮ ಜನರನ್ನು ಬಂಧಿಸಲಾಯಿತು ಪೋಲೀಸರು ಮೊದಲು ಅವರಿಗೆ ಚದುರಿ ಹೋಗಲು ಹೇಳಿದ್ದನ್ನು ಅವರು ನಿರಾಕರಿಸಿದ್ದರಿಂದ ಸೌಮ್ಯ ಲಾಠಿ ಪ್ರಹಾರ ಮಾಡಿ ಬಂಧಿಸಿದರು.

ಕನ್ನಡ ಸಂಸ್ಥಾನ

ಸಾಗರದ ಶ್ರೀ [illegible] ಹ. ಪಾಟೀಲ[illegible] ಅಸ್ಪೃಶ್ಯೋದ್ಧಾರ ಎಂಬ [illegible] ತಿಂಗಳು [illegible] ಮುಂಬಯಿ [illegible] ಪ್ರಚಾರ ಮಾಡುವರು.

ಕೊಲ್ಹಾಪುರ ಸಂಸ್ಥಾನದ ಗಡಹಿಂಗ್ಲಜದ ವಾಮದೇವ ಲಕ್ಷ್ಮಣ ಪಟ್ಟೆ ಇವರು ಬನಾರಸ ಹಿಂದೂ ವಿಶ್ವವಿದ್ಯಾಲಯದ ಬಿ. ಎಸ್. ಸಿ. ಇಲೆಕ್ಟ್ರಿಕಲ್ ಮತ್ತು ಮೆಕ್ಯಾನಿಕಲ್ ಪರೀಕ್ಷೆಯಲ್ಲಿ ಮೊದಲನೇ ವರ್ಗದಲ್ಲಿ ಮೊದಲನೇ ನಂಬರಿಗೆ ಬಂದಿರುವರು. ಇವರು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಅಮೇರಿಕೆಗೆ ಹೋಗಲಿರುವರು.

ಸಾರ್ವಜನಿಕ ಕಾರ್ಯಕ್ರಮಗಳನ್ನು ಆವಶ್ಯವೆನಿಸಿದರೆ ಜನಗಣಮನದಿಂದ ಪ್ರಾರಂಭಿಸಬೇಕು, ಕೊನೆಯಲ್ಲಿ ಮೈಸೂರು ರಾಷ್ಟ್ರಗೀತ ಅಥವಾ ವಂದೇಮಾತರಂ ಹಾಡಬೇಕು. ಎರಡೂ ಹಾಡಬೇಕಾದಲ್ಲಿ ವಂದೇಮಾತರಂ ಮೊದಲು ಹಾಡಿ ನಂತರ ಮೈಸೂರು ರಾಷ್ಟ್ರಗೀತೆಯನ್ನು ಹಾಡಬೇಕು ಎಂದು ಮೈಸೂರು ಸರಕಾರದವರು ಆದೇಶಿಸಿದ್ದಾರೆ.

ಹಾಸನ ಜನಗಳ ಪ್ರದರ್ಶನದಲ್ಲಿ ಬಹುಮಾನ ಹಂಚುವದನ್ನು ಹಾಗು ಇಂಟರ ಮೀಡಿಯೇಟ ಕಾಲೇಜಿನ ಶಂಕುಸ್ಥಾಪನೆಯನ್ನು ಮೈಸೂರು ಮಹಾರಾಜರು ಕಳೆದ ಬುಧವಾರ ಜರುಗಿಸಿದರು. ಕಾಲೇಜ ಸಮಿತಿಯ ಪರವಾಗಿ ಮಹಾರಾಜರಿಗೆ ಮಾನಪತ್ರವನ್ನರ್ಪಿಸಲಾಯಿತು. ಸರಕಾರದವರು ಒಕ್ಕಲತನ ಸುಧಾರಣೆಗಾಗಿ ಎಲ್ಲ ಬಗೆಯ ಉಪಾಯ ಕೈಕೊಂಡಿರುವರೆಂದು ಮಹಾರಾಜರು ಉತ್ತರಕೊಟ್ಟರು.

ಕಳೆದ ೨೯ ನೇ ತಾರೀಕು ಮಧ್ಯಾಹ್ನ ೧ ಗಂಟೆಯ ಸುಮಾರಿಗೆ ಮಾನ್ಯಮಂತ್ರಿಗಳಾದ ಶ್ರೀ ರಂಗರಾವ ದಿವಾಕರ ಮತ್ತು ಪ್ರಾಂತೀಯ ಕಾಂಗ್ರೆಸ ಸಮಿತಿಯ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ಮೈಸೂರಿನಲ್ಲಿ ಡಾ. ಮೋದಿಯವರ ನೇತ್ರಚಿಕಿತ್ಸಾ ಶಿಬಿರಕ್ಕೆ ಭೆಟ್ಟಿಕೊಟ್ಟು ಅಲ್ಲಿನ ಕಾರ್ಯಕಲಾಪಗಳನ್ನು ನೋಡಿ ಸಂತೋಷಪಟ್ಟರು.

ಅ. ಭಾ ಕಾಂಗ್ರೆಸ ಕಾರ್ಯಸಮಿತಿಯ ಕಾರ್ಯದರ್ಶಿ ಶ್ರೀ ಶಂಕರರಾವ ದೇವ ಇವರು ೧೭ನೇ ತಾರೀಕಿಗೆ ಕೊಲ್ಹಾಪುರಕ್ಕೆ ಬರಲಿದ್ದಾರೆ. ಆಗ ಅವರು ಕಾಂಗ್ರೆಸ್ಸಿಗರೊಡನೆ ವಿವಿಧ ವಿಷಯಗಳ ಚರ್ಚೆ ಮಾಡುವದಲ್ಲದೆ ಕೋರೇಗಾವಕರ ವಿಶ್ವಸ್ತ ನಿಧಿಯ ಸಭೆಯಲ್ಲಿಯೂ ಭಾಷಣ ಮಾಡುವರು.

ಶಿವಮೊಗ್ಗೆಯಲ್ಲಿ ಆರ್ ಎಸ್ ಎಸ್ ದ ೫ ಜನರು ಬಂಧಿಸಲ್ಪಟ್ಟರು.

ಉತ್ತರ ಕನ್ನಡ

ಹಳ್ಯಾಳ ಸಹಕಾರೀ ಸಂಘದವರು ನಡೆಸಿದ ಅಂಗಡಿಯ ಶಿಲ್ಕಿನಲ್ಲಿ ೧೫೨೦ ರೂಪಾಯಿ ಅಫರಾತಫರಾ ಆದುದನ್ನು ಆಡಿಟರರು ತೆಗೆದಿದ್ದಾರೆಂದು ವಿಶ್ವಸನೀಯವಾಗಿ ತಿಳಿಯುತ್ತದೆ.

ಮುಂಬಯಿ ಸರಕಾರದ ಮಂತ್ರಿಗಳು ನೇಲಿಂದ ಮೇಲೆ ಸಂಚಾರ ಕಾರ್ಯಕ್ರಮ ಕೈಕೊಂಡು ಸಾರ್ವಜನಿಕ ಹಣದ ಅಪವ್ಯಯ ಮಾಡುವದರ ಬದಲು ಸಾರ್ವಜನಿಕ ಹಿತದ ಕಾರ್ಯಕ್ಕಾಗಿ ಆ ಹಣದ ಉಪಯೋಗವಾಗುವಂತೆ ವ್ಯವಸ್ಥೆ ಮಾಡಬೇಕು ಎಂಬಾಶಯದ ಗೊತ್ತುವಳಿಯನ್ನು ಹೊನ್ನಾವರ ವಕೀಲ ಸಂಘದವರು ಮಾಡಿ ಮುಂಬಯಿ ಮುಖ್ಯಮಂತ್ರಿಗಳಿಗೆ ಕಳಿಸಿದ್ದಾರೆಂದು ತಿಳಿಯುತ್ತದೆ.

ಹಿಂದುಸ್ತಾನ

ಕಾಶ್ಮೀರ ಯುದ್ಧ ನಿಂತಿತು

ಜನೆವರಿ ತಾ. ೧ ರಂದು ಮಧ್ಯ ರಾತ್ರಿಗೆ ಒಂದು ನಿಮಿಷವಿರುವಾಗ ಕಾಶ್ಮೀರ ಜಮ್ಮು ರಣಾಂಗಣಗಳಲ್ಲಿ ಈಗ ೧೪ ತಿಂಗಳಿಂದ ನಡೆದ ಯುದ್ಧವು ನಿಂತಿತು! ಹಿಂದಿ ಸೈನಿಕರ ವಿನಾ, ಪಾಕಿಸ್ತಾನದ ಸೈನಿಕರು, ಗುಡ್ಡಗಾಡು ಜನರು, ಅಝಾದ ಕಾಶ್ಮೀರ ಸೈನಿಕರು ಇವರೆಲ್ಲ ಸೇರಿ ೧ ಲಕ್ಷದಷ್ಟು ಸೈನಿಕರು ಹೋರಾಡುತ್ತಿದ್ದರೆಂದು ತಿಳಿಯುತ್ತದೆ.

ಹೊಸ ವರ್ಷದ ಹೊಸ ದಿನದಂದು ಕೃತಿಗಿಳಿದ ಈ ನಿರ್ಣಯದಿಂದ ಜಮ್ಮು ಕಾಶ್ಮೀರದ ಜನರಿಗೆ ಚಿರಶಾಂತಿ ಉಂಟಾದೀತೆಂದೂ ಹಿಂದುಸ್ತಾನ ಪಾಕಿಸ್ತಾನಗಳಲ್ಲಿ ನಿಕಟ ಸೌಹಾರ್ದ ಬೆಳೆಯಬಹುದೆಂದೂ ಹಿಂದುಸ್ತಾನ ಸರಕಾರವು ಬಲವಾಗಿ ಆಶಿಸಿದೆ. ಕಾಶ್ಮೀರ ಜಮ್ಮು ನಿವಾಸಿಗಳು ಈ ವಾರ್ತೆಯನ್ನು ಅತ್ಯಂತ ಹರ್ಷದಿಂದ ಸ್ವಾಗತಿಸಿದರು. ಈ ವಾರ್ತೆ ಕೇಳಿ ಅಡವಿಯಲ್ಲಿ ಅಡಗಿದ್ದ ಅನೇಕ ವೃದ್ಧರು ಮನೆಗೆ ಮರಳಿದರು. ಕಾಶ್ಮೀರ ಯುದ್ಧ ನಿಂತಿತು ಎಂಬ ಬಗ್ಗೆ ಪತ್ರಿಕಾ ಪ್ರಕಟನೆಯನ್ನು ಸ್ವೀಕರಿಸಲು ವಿದೇಶ ಶಾಖೆಯ ಸುದ್ದಿಗಾರರನ್ನು ಒಳ್ಳೆ ಅವಸರದಿಂದ ಕರೆಕಳಿಸಲಾಯಿತು. ಮುಖ್ಯಮಂತ್ರಿ ಪಂ. ಜವಾಹರಲಾಲರು ತಮ್ಮ ಸೋದರ ಸೊಸೆಯ ವಿವಾಹಕ್ಕಾಗಿ ಅಲಹಾಬಾದಕ್ಕೆ ತೆರಳಿದ್ದರು. ಇಲ್ಲದಿದ್ದರೆ ಅವರೇ ಈ ಸಂತೋಷದ ಸಮಾಚಾರವನ್ನು ಸುದ್ದಿಗಾರರಿಗೆ ಬಿತ್ತರಿಸುತ್ತಿದ್ದರು ಎಂದು ವಿದೇಶ ಶಾಖೆಯ ವಕ್ತಾರರೊಬ್ಬರು ಹೇಳಿದರು.

ಯುದ್ಧ ನಿಲ್ಲಿಸುವ ಆಜ್ಞೆಯನ್ನು ಪಾಕಿಸ್ತಾನ—ಹಿಂದುಸ್ತಾನದ ಉಭಯ ಪಕ್ಷದವರು ಒಂದೇ ಸಮಯಕ್ಕೆ ಹೊರಡಿಸಿದರು. ಯಾವ ಸ್ಥಳದಲ್ಲಿಯೂ ಆಜ್ಞಾಭಂಗವಾಗಿಲ್ಲವೆಂದು ಹಿಂದೀ ಸೇನಾಪತಿಗೆ ವರದಿ ಬಂದಿದೆ.

ಯುದ್ಧರಂಗದಲ್ಲಿಯ ಮುಂದಲಗಳಿಗೆ ಮತ್ತು ಸ್ಥಾನಿಕ ದಲಪತಿಗಳಿಗೆ ಯೋಗ್ಯ ಸಮಯದಲ್ಲಿ ಆಜ್ಞೆಯನ್ನು ಅರುಹಲಾಯ್ತು. ಹಿಂದಿ ಸೈನಿಕರು ಗೊತ್ತು ಮಾಡಿದ ಹೊತ್ತಿಗೆ ತಾವಿದ್ದ ಸ್ಥಳದಲ್ಲಿಯೇ ಉಳಿದರು. ಯುದ್ಧ ಸಾಮಗ್ರಿಯ ವಾಹನಗಳ ಸಾಗಾಟವನ್ನು ನಿಲ್ಲಿಸಲಾಯಿತು. ಆಹಾರ ಧಾನ್ಯಗಳ ಸಾಗಾಟಕ್ಕೆ ಮಾತ್ರ ತಡೆ ಇರಲಿಲ್ಲ.

ಶೇಖ ಅಬ್ದುಲ್ಲಾರ ಕೃತಜ್ಞತೆ

ಕಾಶ್ಮೀರದ ಮುಖ್ಯ ಪ್ರಧಾನರಾದ ಶ್ರೀ. ಶೇಖ ಅಬ್ದುಲ್ಲಾ ಅವರು ಹಿಂದುಸ್ತಾನದ ಮುಖ್ಯ ಮಂತ್ರಿ ಪಂ. ಜವಾಹರಲಾಲರಿಗೂ ಉಪ ಮುಖ್ಯ ಮಂತ್ರಿ ಸರದಾರ ಪಟೇಲರಿಗೂ ಸಂರಕ್ಷಣ ಮಂತ್ರಿ ಸರದಾರ ಬಲದೇವ ಸಿಂಗರಿಗೂ ತಂತಿ ಕಳಿಸಿ ಕಳೆದ ೧೪ ತಿಂಗಳಿಂದಲೂ ಭಾರತವು ತಮಗೆ ಕೊಡುತ್ತ ಬಂದ ನೆರವಿಗಾಗಿ ತುಂಬ ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದಾರೆ, ಹಿಂದೀ ಸೈನಿಕರ ಶೌರ್ಯವನ್ನು ಕೊಂಡಾಡಿದ್ದಾರೆ, ಹಿಂದುಸ್ತಾನ ಸರಕಾರದ ಮುತ್ಸದ್ದಿತನವನ್ನೂ ಪ್ರಶಂಸಿಸಿದ್ದಾರೆ.

ಕಾಶ್ಮೀರದಲ್ಲಿ ಮೊದಲಿನಂತೆ ಶಾಂತತೆಯುಂಟಾಗಿ ಕಾಶ್ಮೀರ ಜನರು ತಮ್ಮ ಭವಿತವ್ಯವನ್ನು ನಿರ್ಧರಿಸಲು ಸಮರ್ಥರಾಗುವಂತೆ ಮಾಡುವದೇ ಈ ಯುದ್ಧ ನಿಲ್ಲಿಸುವದರ ಮುಖ್ಯೋದ್ದೇಶವೆಂದೂ ಈ ಉದ್ದೇಶಕ್ಕೆ ಈಗ ಮನ್ನಣೆ ದೊರೆತದ್ದೇ ಕಾಶ್ಮೀರಿಗಳ ಪ್ರಥಮ ವಿಜಯವೆಂದೂ ಕಾಶ್ಮೀರಿಗಳನ್ನು ಕುರಿತು ಶೇಖ ಅಬ್ದುಲ್ಲಾ ಅವರು ಆಕಾಶವಾಣಿಯಲ್ಲಿ ಭಾಷಣ ಮಾಡುತ್ತ ಹೇಳಿದರು. ಹಾಗೂ ಹಿಂದೀ ಸೈನಿಕರನ್ನೂ ಹಿಂದುಸ್ತಾನ ಸರಕಾರವನ್ನೂ ಕಾಶ್ಮೀರಿಗಳ ಹಿತಕ್ಕಾಗಿ ಹೋರಾಡಿದ್ದನ್ನು ಕೊಂಡಾಡಿ ಕಾಶ್ಮೀರಿಗಳೆಲ್ಲ ಹಿಂದುಸ್ತಾನಕ್ಕೆ ಈ ಬಗ್ಗೆ ಚಿರ ಋಣಿಯಾಗಿರಬೇಕೆಂದು ನುಡಿದು ಹಿಂದ ಸರಕಾರವನ್ನು ಕೃತಜ್ಞತಾಪೂರ್ವಕ ಅಭಿನಂದಿಸಿದರು.

ಮುಂಬಯಿ

ಹಿಂದುಸ್ತಾನ ಶಾಸನಸಭೆಯ ಅಧ್ಯಕ್ಷರಾದ ಶ್ರೀ ಜಿ. ವ್ಹಿ. ಮಾವಳಂಕರರು ಅಹಮದಾಬಾದದಲ್ಲಿ ಡಿಸೆಂಬರ ತಾ. ೨೫ ರಂದು ಒಂದು ಪತ್ರಿಕಾ ಪರಿಷತ್ತಿನಲ್ಲಿ ಗುಜರಾತ ವಿಶ್ವವಿದ್ಯಾಲಯದ ೫ ಕೋಟಿ ರೂಪಾಯಿಗಳ ಯೋಜನೆಯನ್ನು ಬಹಿರಂಗ ಪಡಿಸಿದರು. ಸರದಾರ ಪಟೇಲರು ಈ ವಿಶ್ವವಿದ್ಯಾಲಯದ ವಿಶ್ವಸ್ತರಲ್ಲಿ ಒಬ್ಬರಾಗಿದ್ದಾರೆ.

ನೀರಾಪೇಯವು ಕೆಡದಂತೆ ಯಾವ ಕ್ರಮ ಕೈಕೊಳ್ಳಬೇಕೆಂಬ ಬಗ್ಗೆ ಮುಂಬಯಿ ಅರ್ಥ ಸಚಿವ ಶ್ರೀ ವೈಕುಂಠಲಾಲ ಮೆಹತಾ ಅವರ ಅಧ್ಯಕ್ಷತೆಯಲ್ಲಿ ಡಿಸೆಂಬರ ತಾ. ೩೦ ಕ್ಕೆ ಸಭೆ ಸೇರಿ ಕೆಳಗಿನ ಒಂದು ತಜ್ಞ ಸಮಿತಿಯನ್ನು ರಚಿಸಲಾಯಿತು. ೧) ಮುಂಬಯಿ ಹಾಫಕಿನ್ಸ ಇನ್‌ಸ್ಟಿಟ್ಯೂಟಿನ ಡಾಯರೆಕ್ಟರರು ೨) ಅಬಕಾರಿ ಕಮಿಶನರರು ೩) ಸಾರ್ವಜನಿಕ ಆರೋಗ್ಯ ಶಾಖೆಯ ಡಾಯರೆಕ್ಟರರು ೪) ಭಾರತ ಸರಕಾರದ ಸಿಂದಿಬೆಲ್ಲದ ಸಲಹೆಗಾರರಾದ ಶ್ರೀ. ಗಜಾನನ ನಾಯಕರು.

ಹಿಂದುಸ್ತಾನ ಕ್ರಿಕೇಟ ನಿಯಂತ್ರಣ ಮಂಡಳದವರು ಮ. ಗಾಂಧೀ ರಾಷ್ಟ್ರೀಯ ನಿಧಿ ಸಹಾಯಾರ್ಥವಾಗಿ ವೆಸ್ಟ ಇಂಡೀಜ ಸಂಘದವರೊಡನೆ ೨ ದಿನಗಳ ಒಂದು ಕ್ರಿಕೆಟ ಪಂದ್ಯವನ್ನು ಏರ್ಪಡಿಸಲಿರುವರು. ಈ ಪಂದ್ಯದಲ್ಲಿ ಮುಂಬಯಿ ಗವರ್ನರರಾದ ರಾಜಾ ಸರ್ ಮಹಾರಾಜಾ ಸಿಂಗರು ಹಿಂದೀ ಸಂಘದ ನಾಯಕರಾಗಲು ಒಪ್ಪಿರುವರು. ಅಲ್ಲದೆ ಪತಿಯಾಲಾ ಮಹಾರಾಜರು, ವಿ. ಎಂ. ಮರ್ಚಂಟ, ಅಮೀರ ಇಲಾಹಿ, ಬಡೋದೆಯ ಯುವರಾಜರು ಇವರೇ ಮೊದಲಾದವರು ಈ ಸಂಘದಲ್ಲಿ ಆಡಲಿರುವರು. ಈ ಆಟ ನೋಡಲು ಮುಂಬಯಿ ಮುಖ್ಯ ಮಂತ್ರಿ ಶ್ರೀ ಬಿ. ಜಿ. ಖೇರರು ತಮ್ಮ ಎಲ್ಲ ಸಹೋದ್ಯೋಗಿಗಳೊಡನೆ ಬರಲು ಒಪ್ಪಿದ್ದಾರೆಂದು ತಿಳಿಯುತ್ತದೆ. ಆಟದ ನಿಶ್ಚಿತ ದಿನವನ್ನು ಜಾನೇವರಿಯ ಮೊದಲ ವಾರದಲ್ಲಿ ಪ್ರಸಿದ್ಧಿಸಲಾಗುವದು.

ಮುಂಬಯಿ ಪ್ರಾಂ. ಕಾಂ. ಕಮೀಟಿ ಹಾಗು ಇಂಡೋನೇಶಿಯಾ ಲೀಗ ಪರವಾಗಿ ತಾ. ೩೦ ರಂದು ಮುಂಬಯಿಯಲ್ಲಿ ಶ್ರೀ ಎಸ್. ಕೆ. ಪಾಟೀಲರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿ ಇಂಡೋನೇಶಿಯಾ ಮೇಲಿನ ಡಚ್ಚರ ಆಕ್ರಮಣವನ್ನು ನಿಷೇಧಿಸಲಾಯಿತು.

ಪೆಟ್ರೋಲ ಪರಿಸ್ಥಿತಿಯು ಈಗ ಸುಧಾರಿಸಿದ್ದರಿಂದ ಮುಂಬಯಿ ಸರಕಾರದವರು, ಪ್ರಯಾಣಿಕ ಬಸ್ಸುಗಳಲ್ಲಿ ೧೦೦ ಕ್ಕೆ ೨೫ ರಷ್ಟು ಹೆಚ್ಚು ಜನರನ್ನು ಒಯ್ಯಲು ಕೊಟ್ಟ ಸವಲತ್ತನ್ನು ಇದೇ ಜಾನೇವರಿ ತಾ. ೭ ರಿಂದ ಹಿಂತೆಗೆದುಕೊಂಡಿದ್ದಾರೆ. ಇನ್ನು ಮುಂದೆ ಸರಕಾರದವರು ತಾತ್ಪೂರ್ತಿಕವಾಗಿ ಹೆಚ್ಚು ಜನರನ್ನು ಒಯ್ಯಲು ಅಪ್ಪಣೆ ಕೊಟ್ಟರೆ ಆ ಹೆಚ್ಚಿನ ಜನರ ಬಗ್ಗೆ ಕರ ವಸೂಲ ಮಾಡಲಾಗುವದು.

ಹಿಂದಿ ಅರಳೆ ಶಿಷ್ಟಮಂಡಳದ ಧುರೀಣರಾದ ಶ್ರೀ ಕಸ್ತೂರಭಾಯಿ ಲಾಲಭಾಯಿ ಅವರು ಪೂರ್ವ ಆಫ್ರಿಕೆಯಲ್ಲಿ ೧೫ ಕೋಟಿ ರೂಪಾಯಿ ಬೆಲೆಯ ೨ ಲಕ್ಷ ಗಂಟು ಅರಳೆ ಕೊಂಡು ತಾ. ೧ ಕ್ಕೆ ಮುಂಬಯಿಗೆ ಮರಳಿದರು. ಈ ಶಿಷ್ಟ ಮಂಡಳದಲ್ಲಿ ಶ್ರೀ. ಕೆ. ಕೆ. ಚೆಟ್ಟೂರ, ಶ್ರೀ. ಟಿ. ಪಿ. ಬರಾತ, ಶ್ರೀ ಬಿ. ಕೆ. ರಾಯ ಇವರೇ ಮೊದಲಾದವರಿದ್ದರು.

ಸರ್ ದೊರಬಜಿ ಟಾಟಾ ಟ್ರಸ್ಟ ಹಾಗು ಸರ್ ರತನ ಟಾಟಾ ಚಾರಿಟೀಜ ಇವುಗಳ ವಿಶ್ವಸ್ತರು ಗುಜರಾತದಲ್ಲಿಯ ಬರಗಾಲ ಸಂತ್ರಸ್ತರಿಗೆ ಅನುಕ್ರಮವಾಗಿ ೩೫ ಸಾವಿರ ಹಾಗು ೧೫ ಸಾವಿರ ಹೀಗೆ ೫೦ ಸಾವಿರ ರೂಪಾಯಿ ದಾನ ಮಾಡಿದ್ದಾರೆ.

ಮದ್ರಾಸ

ದೇಶವನ್ನು ಎದುರಿಸಿದ ಮಹತ್ವದ ಪ್ರಶ್ನೆಗಳೆಂದು ಮುಖ್ಯಮಂತ್ರಿಗಳಾದ ಪಂ.ಜವಾಹರಲಾಲರು ಹೇಳುತ್ತಿರುವ ಯಾವ ಪ್ರಶ್ನೆಗಳಿಗಿಂತಲೂ ಭಾಷಾನುಗುಣ ಪ್ರಾಂತೀಕರಣದ ಪ್ರಶ್ನೆಯು ಕಡಮೆ ಮಹತ್ವದ್ದಾಗಲಿ ಕಡಮೆ ಪ್ರಯೋಜನದ್ದಾಗಲಿ ಇರುವದಿಲ್ಲವೆಂದು ಆಂಧ್ರಪ್ರಾಂತದ ಪ್ರಸಿದ್ಧ ಮುಖಂಡರಾದ ಶ್ರೀ ಕೊಂಡಾ ವೆಂಕಟಪ್ಪನವರು ಒಂದು ಹೇಳಿಕೆ ಹೊರಡಿಸಿದ್ದಾರೆ.

ಈ ಯುದ್ಧ ನಿಂತ ಬಗ್ಗೆ ಲೆ. ಜ. ಕಾರಿಯಪ್ಪನವರು, ಪತ್ರಿಕಾಕರ್ತರಿಗಿತ್ತ ಸಂದರ್ಶನದಲ್ಲಿ ಎಲ್ಲವೂ ದೇವರ ದಯೆ ಎಂದು ಉದ್ಗಾರ ತೆಗೆದರು.

ಸುಪ್ರಸಿದ್ಧ ಲೇಖಕರಾದ ಶ್ರೀ ಕೆ. ಎಸ್. ವೆಂಕಟರಮಣಿಯವರು ಒಂದು ಹೇಳಿಕೆ ಹೊರಡಿಸಿ, ಭಾಷಾನ್ವಯ ಪ್ರಾಂತರಚನೆಯು ಕೂಡಲೇ ಆಗಬೇಕೆಂದೂ ಸಾಮೂಹಿಕ ಶಕ್ತಿ ಸಂಘಟನೆಗೆ ಭಾಷೆ ಮತ್ತು ಸಂಸ್ಕೃತಿಗಳ ಮೇಲೆ ರಚಿತವಾದ ಪ್ರಾಂತಗಳು ಮಾತ್ರ ನೆರವೀಯಬಲ್ಲವೆಂದೂ ಈ ಪ್ರಶ್ನೆಯನ್ನು ಮುನ್ನೂಕುವದರಿಂದ ಇಡಿ ಭಾರತಕ್ಕಲ್ಲದಿದ್ದರೂ ದಕ್ಷಿಣ ಭಾರತಕ್ಕಂತೂ ಹಾನಿಯು ತಪ್ಪಿಟ್ಟದ್ದೇ ಎಂದೂ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಡಿಸೆಂಬರ ತಿಂಗಳ ಮಧ್ಯದಲ್ಲಿ ಹೈದರಾಬಾದ ಹಾಗು ಆಂಧ್ರ ಗಡಿಗಳ ಜಿಲ್ಹೆಗಳಲ್ಲಿ ಕಮ್ಯುನಿಸ್ಟರ ಹಾವಳಿಯೂ ಅತ್ಯಾಚಾರವೂ ಹೆಚ್ಚಿದೆಯೆಂದೂ ಕೃಷ್ಣಾ ಜಿಲ್ಹೆಯಲ್ಲಿ ೯ ಜನ ಕಾಂಗ್ರೆಸಿಗರ ಕೊಲೆಯಾಗಿದೆಯೆಂದೂ ತಾ ೩೦ ರಂದು ಆಂಧ್ರ ಪ್ರಾಂ. ಕಾ. ಕ. ಅಧ್ಯಕ್ಷರಾದ ಪ್ರೊ. ಎನ್. ಜಿ. ರಂಗಾ ಅವರು ಭಾರತದ ಮುಖ್ಯ ಮತ್ತು ಉಪಮುಖ್ಯ ಮಂತ್ರಿಗಳಿಗೆ ಒಂದು ಮನವಿ ಕಳಿಸಿದ್ದಾರೆ.

ಖಾಸಗಿ ಉಪಯೋಗಕ್ಕಾಗಿ ಟೆಲಿಪ್ರಿಂಟರಗಳನ್ನು ಉಪಯೋಗಿಸಲು ಬರುವಂತೆ ಒಂದು ಯೋಜನೆಯನ್ನು ಅಂಚೆ ಮತ್ತು ತಂತಿ ಶಾಖೆಯವರು ವಿಚಾರಿಸುತ್ತಿರುವರಾಗಿ ಆ ಶಾಖೆಯ ಡೆಪ್ಯುಟಿ ಡಾಯರೆಕ್ಟರ ಜನರಲರಾದ ಶ್ರೀ. ಪಿ. ಎಸ್. ಎಂ. ಸುಂದರಮ್ ಅವರು ಓರ್ವ ಪತ್ರಿಕಾ ಪ್ರತಿನಿಧಿಗೆ ತಾ೩೦ ರಂದು ಹೇಳಿದ್ದಾಗಿ ತಿಳಿಯುತ್ತದೆ.

ಹೊಸದಿಲ್ಲಿ

ಅ. ಭಾ. ಆಕಾಶವಾಣಿಯಿಂದ ಮತ್ತು ಮುಂಬಯಿ ಆಕಾಶವಾಣಿಯಿಂದ ಜಾನೇವರಿ ೧ ನೇ ತಾ. ನಿಂದ ಕನ್ನಡ ಸುದ್ದಿಗಳನ್ನು ದಿನವೂ ಮುಂಜಾನೆ ೭-೩೦ ರಿಂದ ೭-೪೦ ರ ವರೆಗೂ ಸಂಜೆಗೆ ೭-೧೫ ರಿಂದ ೭-೩೦ ರ ವರೆಗೂ ಬಿತ್ತರಿಸಲಾಗುತ್ತಿದೆ.

೧೯೫೦ರ ಮೊದಲ ಮೂರು ತಿಂಗಳಲ್ಲಿ ಹಿಂದುಸ್ತಾನದಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಬೇಕೆಂದು ಭಾರತ ಸರಕಾರದ ಇಚ್ಛೆಯಾಗಿದೆಯೆಂದು ತಿಳಿಯುತ್ತದೆ.

ಕೇಂದ್ರ ಸರಕಾರದಿಂದ ಡಿಸೆಂಬರ ತಾ. ೩೧ ರಂದು ಒಂದು ವಿಶೇಷ ಆಜ್ಞೆ ಹೊರಟದ್ದು ಅದರನ್ವಯ, ಹೈದರಾಬಾದದ ಹಿಂದಿನ ಸರಕಾರವು ಪಾಕಿಸ್ತಾನಕ್ಕೆ ಕೊಟ್ಟಿರುವ ೨೦ ಕೋಟಿ ರೂ. ಬೆಲೆಯ ಸೆಕ್ಯೂರಿಟಿಗಳಿಗೆ ಬದಲಾಗಿ ಹೊಸ ಸೆಕ್ಯೂರಿಟಿಗಳನ್ನು ಕೊಡಲು ರಿಝರ್ವ ಬ್ಯಾಂಕಿಗೆ ಅಧಿಕಾರ ಕೊಡಲಾಗಿದೆ ಮತ್ತು ಪಾಕಿಸ್ತಾನಕ್ಕೆ ಅನಧಿಕೃತವಾಗಿ ಕೊಟ್ಟ ಆ ಸಾಲ ಪತ್ರಗಳನ್ನು ರದ್ದುಗೊಳಿಸಲಾಗಿದೆ.

ಹಿಂದೂ ಮಹಾಸಭೆಯ ಗೊತ್ತುವಳಿಯ ಬಗ್ಗೆ ಹಿಂದುಸ್ತಾನ ಸರಕಾರವು ಈಗಲೇ ಉಗ್ರ ಕ್ರಮ ಕೈಕೊಳ್ಳುವದಿಲ್ಲವೆಂದೂ ಮುಂದಿನ ಅವರ ಚಟುವಟಿಕೆಗಳನ್ನು ನಿರೀಕ್ಷಿಸಿ ಆಮೇಲೆ ಆವಶ್ಯಕ ಉಪಾಯ ಹೂಡಬಹುದೆಂದೂ ತಿಳಿಯುತ್ತದೆ.

ಪೋಲೀಸರು ದಿಲ್ಲಿಯಲ್ಲಿ ತಾ. ೧ ರಂದು ೧೭ ಜನ ಆರ್ ಎಸ್. ಎಸ್. ಕಾರ್ಯಕರ್ತರನ್ನು ಬಂಧಿಸಿದರು. ಹಿಂದೆ ಬಂಧಿತರಾದ ೯ ಜನರು ಕ್ಷಮೆ ಬೇಡಿ ಬಿಡುಗಡೆಹೊಂದಿದರು.

ಹಿಂದೀ ಸಂಸ್ಥಾನ

ಜುನಾಗಡ ಸಂಸ್ಥಾನವನ್ನು ನವಾಬರಿಲ್ಲದೆ ಸೌರಾಷ್ಟ್ರ ಒಕ್ಕೂಟದಲ್ಲಿ ವಿಲೀನಗೊಳಿಸಲು ಹಿಂದುಸ್ತಾನ ಸರಕಾರ ಮತ್ತು ಸೌರಾಷ್ಟ್ರ ಸರಕಾರಗಳನ್ನು ಬಿನ್ನವಿಸುವ ಗೊತ್ತುವಳಿಯು ಡಿಸೆಂಬರ ತಾ ೩೦ ಕ್ಕೆ ಜುನಾಗಡದಲ್ಲಿ ಸೇರಿದ ಸೌರಾಷ್ಟ್ರ ಘಟನಾ ಸಮಿತಿಯ ಸದಸ್ಯರ ಸಭೆಯಲ್ಲಿ ಒಮ್ಮತದಿಂದ ಸ್ವೀಕೃತವಾಯಿತು. ಗೃಹ ಮಂತ್ರಿಗಳಾದ ಶ್ರೀ ಶಾಮಲದಾಸ ಗಾಂಧಿಯವರು, ಜನರಿಗೆ ನವಾಬರು ಅಥವಾ ಅವರ ಮನೆತನವಿಲ್ಲವೆಂದೂ ಅವರನ್ನು ಸಂಪೂರ್ಣ ತಿರಸ್ಕರಿಸಲಾಗಿದೆಯೆಂದೂ ಜನತೆಯ ಸಾರ್ವಭೌಮತ್ವವೇ ಸೌರಾಷ್ಟ್ರ ಸೇರ್ಪಡೆಯನ್ನು ನಿರ್ಧರಿಸಿದೆಯೆಂದೂ ಈ ಸಂದರ್ಭದಲ್ಲಿ ಮಾತನಾಡುತ್ತ ಹೇಳಿದರು.

ಸಂಯುಕ್ತ ಪ್ರಾಂತ

ಡಿಸೆಂಬರ ತಾ ೨೯ ರಂದು ಆಗ್ರಾದಲ್ಲಿ ಅಖಿಲ ಭಾರತ ಹೋಮಿಯೋಪಥಿ ವೈದ್ಯಕೀಯ ಪರಿಷತ್ತು ಸೇರಿತ್ತು. ಡಾ. ಎಸ್. ಜಿ. ಮುಕರ್ಜಿಯವರು ಅದರ ಅಧ್ಯಕ್ಷಸ್ಥಾನದಿಂದ ಮಾತನಾಡುತ್ತ, ಭಾರತ ಸರಕಾರವು ಪ್ರತಿ ಪ್ರಾಂತದಲ್ಲಿಯೂ ಹೋಮಿಯೋಪಥಿ ಆಸ್ಪತ್ರೆಯನ್ನು ಪ್ರಾರಂಭಿಸಬೇಕೆಂದೂ ಹೋಮಿಯೋಪಥಿ ಕಾಲೇಜುಗಳಿಗೆ ಹೆಚ್ಚಿನ ಧನಸಹಾಯ ಮಾಡಬೇಕೆಂದೂ ಹೇಳಿದರು.

ಸಂಯುಕ್ತ ಪ್ರಾಂತದ ರಾ. ಸ್ವ. ಸೇ. ಸಂಘದ ಚಾಲಕರಾದ ಶ್ರೀ ನರೇಂದ್ರಜಿತ ಸಿಂಗ ಹಾಗು ಸಂಘಟಕರಾದ ಶ್ರೀ ದೇವರಾಜ ಇವರಿಗೆ ೨ ವರ್ಷ ಕಠಿಣ ಶಿಕ್ಷೆ ೧೦೦೦ ರೂ. ದಂಡ ಇಲ್ಲವೆ ೬ ತಿಂಗಳ ಶಿಕ್ಷೆ ವಿಧಿಸಿದ್ದಾರೆ.

ಸಂಯುಕ್ತ ಪ್ರಾಂತದ ಗವರ್ನರರಾದ ಶ್ರೀಮತಿ ಸರೋಜಿನಿ ನಾಯಡು ಅವರು ಅ. ಭಾ. ೩೬ ನೆಯ ವಿಜ್ಞಾನ ಪರಿಷತ್ತಿಗೆ ಬಂದ ಪ್ರತಿನಿಧಿಗಳಿಗಾಗಿ ತಾ. ೨ ಕ್ಕೆ ಸತ್ಕಾರ ಕೂಟ ಏರ್ಪಡಿಸಿದ್ದರು. ೧೫೦೦ ಜನರು ಆಮಂತ್ರಿತರಾಗಿ ಆಗಮಿಸಿದ್ದರು. ಅಗ ಪಂ. ಜವಾಹರಲಾಲರೂ ಬಂದಿದ್ದರು.

ಅಲಹಾಬಾದದಲ್ಲಿ ತಾ ೩ ರಂದು ಅ. ಭಾ. ವಿಜ್ಞಾನ ಪರಿಷತ್ತಿನ ೩೬ ನೆಯ ಅಧಿವೇಶನವು ಸೇರಿತು. ಅದನ್ನು ಪಂ. ಜವಾಹರಲಾಲರು ಉದ್ಘಾಟಿಸುತ್ತ, ಸುಖ ಶಾಂತಿಗಳು ಮಾನವ ಕುಲಕ್ಕೆ ಹೇಗೆ ಲಭಿಸಬಹುದೆಂಬುದನ್ನು ಜಗತ್ತಿನ ವಿಜ್ಞಾನಿಗಳು ಗಂಭೀರವಾಗಿ ಆಲೋಚಿಸಬೇಕೆಂದು ಬಿನ್ನಹ ಮಾಡಿಕೊಂಡರು. ೩೦೦ಕ್ಕಿಂತ ಹೆಚ್ಚು ಪ್ರತಿನಿಧಿಗಳು ಆಗಮಿಸಿದ್ದರು. ಸಂಯುಕ್ತ ಪ್ರಾಂತದ ಮುಖ್ಯ ಮಂತ್ರಿ ಪಂ. ಗೋವಿಂದ ವಲ್ಲಭ ಪಂತರು ಮುಖ್ಯ ಅತಿಥಿಗಳನ್ನೂ ಸದಸ್ಯರನ್ನೂ ಸ್ವಾಗತಿಸಿದರು.

ಆಹಾರ ಧಾನ್ಯಗಳ ಏರುತ್ತಿರುವ ಬೆಲೆಯನ್ನು ಇನ್ನು ೨-೩ ತಿಂಗಳೊಳಗೇ ತಡೆಯಲಾಗುವದೆಂದೂ ಮುಂದೆ ಅವು ಖಂಡಿತ ಇಳಿಮುಖವಾಗುವವೆಂದೂ ಮುಖ್ಯ ಮಂತ್ರಿ ಪಂ. ಜವಾಹರಲಾಲರು ಅಲಹಾಬಾದದಲ್ಲಿ ತಾ ೧ ಕ್ಕೆ ಮಾಡಿದ ಒಂದು ಭಾಷಣದಲ್ಲಿ ಹೇಳಿದರೇ.

ಮಾಸ್ಕೋದಲ್ಲಿ ಹಿಂದಿ ರಾಯಭಾರಿಗಳಾಗಿರುವ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ಮಗಳು ಕು. ತಾರಾ ಪಂಡಿತರ ವಿವಾಹವು ಶ್ರೀ ಗೌತಮ ಸಹಗಲ ಅವರೊಂದಿಗೆ ತಾ ೨ ರಂದು ಹಿಂದು ಧರ್ಮ ಶಾಸ್ತ್ರದ ಪ್ರಕಾರ ನೆರವೇರಿತು.

ಪಶ್ಚಿಮ ಬಂಗಾಲ

ಪ. ಬಂಗಾಲದ ಗವರ್ನರರಾದ ಡಾ. ಕಟಜು ಅವರು ತಾ. ೩೧ ರಂದು ಅ. ಭಾ. ಆರ್ಯ ಪರಿಷತ್ತಿನ ೬ ನೆಯ ಅಧಿವೇಶನವನ್ನು ಉದ್ಘಾಟಿಸುತ್ತ, ಸ್ವತಂತ್ರ ಹಿಂದುಸ್ತಾನದ ನಾಗರಿಕರು ಇನ್ನು ಮುಂದೆ ಉಡಿಗೆ ತೊಡಿಗೆ, ರೀತಿ ನೀತಿ, ಊಟ ಉಪಚಾರಗಳಲ್ಲಿ ಪರಕೀಯರನ್ನು ಅನುಸರಿಸಕೂಡದೆಂದೂ ಹಿಂದಿನ ಸಂಸ್ಕೃತಿಯನ್ನೂ ಪರಂಪರೆಯನ್ನೂ ಪುನರುಜ್ಜೀವನಗೊಳಿಸಬೇಕೆಂದೂ ಹೇಳಿದರು.

ಅ. ಭಾ. ಸಂಗೀತ ಪರಿಷತ್ತಿನವರು, ವಂದೇ ಮಾತರಂ ಇದೇ ರಾಷ್ಟ್ರ ಗೀತೆಯಾಗಬೇಕೆಂದೂ ಇದನ್ನು ಆರ್ಕೆಸ್ಟ್ರಾ ಮತ್ತು ಬ್ಯಾಂಡ ಗೀತಕ್ಕೆ ಯೋಗ್ಯವಾಗುವಂತೆ ತಾವು ಸ್ವರ ಪ್ರಸ್ತಾರವನ್ನು ಹಾಕಿ ಕೊಡುವೆವೆಂದೂ ಒಂದು ಗೊತ್ತುವಳಿ ಮಾಡಿ ಅದನ್ನು ಹಿಂದುಸ್ತಾನದ ಘಟನಾ ಸಮಿತಿಯ ಅಧ್ಯಕ್ಷರಿಗೆ ಕಳಿಸಿದ್ದಾರೆ.

ಪಶ್ಚಿಮ ಬಂಗಾಲದ ಅಬಕಾರಿ ಮಂತ್ರಿಗಳಾದ ಶ್ರೀ ಎಂ. ಎಂ. ಬರ್ಮನರನ್ನು ಅವರ ಸೇವಕನೇ ಗುಂಡಿಕ್ಕಿ ಕೊಂದನೆಂದೂ ಆ ಸೇವಕನು ತಾನೂ ಕುತ್ತಿಗೆಗೆ ಗುಂಡಿಕ್ಕಿಕೊಂಡು ಸಾಯುವಾಗ ಮೇಲ್ಕಾಣಿಸಿದಂತೆ ತನ್ನ ಅಪರಾಧವನ್ನು ಒಪ್ಪಿಕೊಂಡನೆಂದೂ ಈ ಕೊಲೆಯ ಕಾರಣ ತಿಳಿದಿಲ್ಲವೆಂದೂ ಪ್ರಸಿದ್ಧಿಸಲ್ಪಟ್ಟಿದೆ. ಶ್ರೀ ಬರ್ಮನರಿಗೆ ಮರಣ ಕಾಲಕ್ಕೆ ೪೪ ವರ್ಷ. ಅವರಿಗೆ ೬೬ ವರ್ಷದ ತಂದೆ, ಹೆಂಡತಿ, ೫ ಚಿಕ್ಕ ಮಕ್ಕಳು ಇದ್ದಾರೆ. ಇವರು ಕಾಂಗ್ರೆಸ ಪಕ್ಷದಿಂದ ಆರಿಸಿ ಹೋದ ದಲಿತ ವರ್ಗದ ಸದಸ್ಯರಿದ್ದು ಡಾ. ಘೋಷರ ಮಂತ್ರಿಮಂಡಲದಲ್ಲಿ ನ್ಯಾಯ ಶಾಖೆಯ ಮಂತ್ರಿಗಳು, ಡಾ. ಬಿಧನಚಂದ್ರ ರಾಯರ ಈಗಿನ ಮಂತ್ರಿಮಂಡಲದಲ್ಲಿ ಅಬಕಾರಿ ಮಂತ್ರಿಗಳೂ ಆಗಿದ್ದರು.

ವಿಜಾಪೂರ ಹರಿಜನ ಕನ್ಯಾ ಮಂದಿರದ ಕಟ್ಟಡದ ಉದ್ಘಾಟನಾ ಸಮಾರಂಭವು ಹಿಂದುಳಿದ ವರ್ಗಗಳ ಶಾಖೆಯ ಮಂತ್ರಿಗಳಾದ ಮಾನ್ಯ ತಪಾಸೆಯವರಿಂದ ಉದ್ಘಾಟಿಸಲ್ಪಡುವದು.

ಮಗುವಿನ ಮನಸ್ಸು

ಮಕ್ಕಳಿಗೆ ಏನೂ ತಿಳಿದಿರುವುದಿಲ್ಲ, ಅವರಿಗೆ ಎಲ್ಲವನ್ನೂ ಹೇಳಿ ಕೊಡಬೇಕು ಎಂದು ತಿಳಿದುಕೊಂಡಿರುವವರೇ ಹೆಚ್ಚು. ಆದರೆ ಮಕ್ಕಳು ದೊಡ್ಡವರಿಗಿಂತ ಎಷ್ಟೋ ವೇಳೆ ಹಲವಾರು ಸಂದರ್ಭಗಳಲ್ಲಿ ಸೂಕ್ಷ್ಮಗ್ರಾಹಿಗಳಿರುತ್ತವೆಂಬುದು ವಿಜ್ಞಾನಸಿದ್ಧವಾದುದು. ತಂದೆ ಅಥವಾ ತಾಯಿ ಮಕ್ಕಳಿಗೆ ಹೇಳಿಕೊಡಹೊರಟರೆ, ತಾನು ನಿರ್ದಿಷ್ಟಾಭಿಪ್ರಾಯದ ಗುಳಿಗೆಗಳನ್ನು ಕೊಡುವಾಗ ಅವುಗಳಿಂದಲೇ ಎಷ್ಟೋ ಹೊಸ ಸಂಗತಿಗಳನ್ನು ಕಲಿತುಕೊಳ್ಳಬಹುದು ಎಂದು ಮನಃಶಾಸ್ತ್ರಜ್ಞರೆನ್ನುತ್ತಾರೆ.

ಮಾತಾಪಿತೃಗಳ ವಾತ್ಸಲ್ಯ ಅತಿರೇಕವಾಗಿ ಕೆಡುವ ಮಕ್ಕಳಿಗಿಂತ ವಾತ್ಸಲ್ಯ ಕಡಿಮೆಯಾಗಿ ಕೆಡುವವೇ ಹೆಚ್ಚಾದರೂ ಅತಿರೇಕದಿಂದ ಕೆಡದಿರುವ ಮಕ್ಕಳೇ ಇಲ್ಲ ಎಂದು ಸ್ಟೆಟ್ನ ಮತ. ವಿವೇಕಯುಕ್ತವಲ್ಲದ ವಾತ್ಸಲ್ಯ ಒಂದೇ ಹೆಚ್ಚಾಗುವುದು ಇಲ್ಲವೆ ಕಡಿಮೆಯಾಗುವುದು. ಅದರಿಂದ ಮಕ್ಕಳ ವ್ಯಕ್ತಿತ್ವ ಪೋಷಣೆಗೆ ಭಂಗ ಬರುವುದು.

ಅನುಭವದ ತೀವ್ರಗತಿ

ದೊಡ್ಡವರಿಗಿಂತ ಮಕ್ಕಳ ಕಾಲ ತ್ವರಿತಗತಿಯಿಂದ ಸಾಗುತ್ತದೆ. ೧೦ ವರ್ಷದಲ್ಲಿ ದೊಡ್ಡವರು ಬದುಕುವುದಕ್ಕಿಂತ ಮಕ್ಕಳು ಒಂದು ವರ್ಷದಲ್ಲಿ ಹೆಚ್ಚು ಬದುಕುತ್ತವೆ. ಮಧ್ಯವಯಸ್ಸಿನವರಿಗಿಂತ ೧೦ ಪಟ್ಟು ಹೆಚ್ಚು ವೇಗದಿಂದ ಮಕ್ಕಳ ಕಾಲ ಸಾಗುತ್ತದೆ ಎಂದು ಪಿ. ಎಲ್. ನೋಯಿ ಪ್ರಯೋಗದಿಂದ ಸಿದ್ಧಮಾಡಿ ತೋರಿಸಿದ್ದಾನೆ. ೧೦ ಮತ್ತು ೧೬ ನೆಯ ವಯಸ್ಸಿನಲ್ಲಿ ಮಗುವಿನ ಶರೀರ ಮತ್ತು ಮನಸ್ಸು ಬೆಳೆಯುವುದು ಹೆಚ್ಚು; ೪೫ ನೆಯ ವಯಸ್ಸಿಗೇರಿದರೆ ಬಹಳ ಮಂದಗತಿಯುಂಟಾಗುತ್ತದೆ. ದೊಡ್ಡವರು ಒಂದು ಇಡಿ ವಾರದಲ್ಲಿ ಅನುಭವಿಸುವ ಸಂತೋಷ, ಮರುಕ, ದುಃಖ, ನಿರಾಶೆಗಳನ್ನು ಮಕ್ಕಳು ಒಂದೇ ದಿನದಲ್ಲಿ ಅನುಭವಿಸುತ್ತವೆ! ದೈಹಿಕವಾಗಿ ಕೂಡ ಮಗುವಿನ ಶಕ್ತ್ಯುತ್ಪಾದನ ಮತ್ತು ಶಕ್ತಿವ್ಯಯಗಳು ದೊಡ್ಡವರಿಗಿಂತ ಹೆಚ್ಚಿರುತ್ತದೆ. ಇದಕ್ಕೆ, ಒಂದು ಗಾಯ ಮಗುವಿಗೆ ಒಂದು ತಿಂಗಳಲ್ಲಿ ಗುಣವಾದರೆ ೪೦ರ ಮನುಷ್ಯನಿಗೆ ೭೬ ದಿನಗಳು ಬೇಕೆಂಬುದೇ ನಿದರ್ಶನ.

ನಿದ್ರೆ

ಅತಿನಿದ್ರೆಯಿಂದ ಮಗು ಮಾನಸಿಕ ರೋಗಿಯಾಗಿ ಪರಿಣಮಿಸುತ್ತದೆ ಎಂದು ಬ್ರಿಟಿಶ್ ಶಿಶುಮಾನಸಜ್ಞ ಜೆ. ಎ. ಮ್ಯಾಕ್ ಕ್ಲಿಸ್ಕಿ ಅಭಿಪ್ರಾಯಪಟ್ಟಿದ್ದಾನೆ. ಒತ್ತಾಯದ ನಿದ್ರೆಯಿಂದ ಮಗು ಜಡವೂ ನಿಸ್ತೇಜವೂ ಹಾಸಿಗೆಯಲ್ಲಿ ಮೂತ್ರವಿಸರ್ಜನೆ ಮಾಡುವ ಅಸಹಾಯತೆಯುಳ್ಳದ್ದೂ ಆಗುತ್ತದೆ; ನಿದ್ದೆಗಣ್ಣಿನಲ್ಲಿ ತಲೆ ಚಚ್ಚಿಕೊಳ್ಳುವುದು ಮತ್ತು ಎದ್ದು ಹರಿದಾಡುವುದು ಮುಂತಾದ ಚೇಷ್ಟೆಗಳನ್ನು ಮಾಡಬಹುದು. ನಿದ್ದೆ ಬರದಾಗಲೂ ಸುಮ್ಮನೆ ಹಾಸಿಗೆಯಲ್ಲಿ ಹೆಣದಂತೆ, ಹೇಡಿಯಂತೆ ಕಣ್ಣು ಮಿಳುಕಿಸುತ್ತ ಬಿದ್ದಿರುವಂತಾಗಬಹುದು. ಮಲಮೂತ್ರ ವಿಸರ್ಜನೆಯಲ್ಲಿ ಒತ್ತಾಯ ಹೇಗೆ ಅಪಾಯಕರವೋ ಹಾಗೇ ನಿದ್ರೆಯಲ್ಲಿಯೂ ಒತ್ತಾಯ ಬಹಳ ಅಪಾಯಕರವಾದುದು. ೧ ವರ್ಷದ ಮಗುವಿಗೆ ೧೨ ಗಂಟೆಗಳ ಕಾಲ ರಾತ್ರಿ ನಿದ್ರೆ ಮತ್ತು ೨½ ಗಂಟೆಗಳ ಹಗಲು ನಿದ್ದೆ ಸಾಕು. ೩ ವರ್ಷದ ಮಗುವಿಗೆ ಒಟ್ಟು ೧೨ ಗಂಟೆ, ೫ ವರ್ಷದ್ದಕ್ಕೆ ೧೧ ಗಂಟೆ ಮತ್ತು ೧೧ ವರ್ಷದ ಮಗುವಿಗೆ ಒಟ್ಟು ೧೦ ಗಂಟೆ ಹೊತ್ತು ಮಲಗಿದರೆ ಸಾಕಾಗುತ್ತದೆ.

ಮಾತು

ಮಕ್ಕಳು ತೊದಲು ನುಡಿಯನ್ನು ತಾಯ್ತಂದೆಯರಿಂದಲೇ ಕಲಿಯುತ್ತವೆ. ತೊದಲು ತೊದಲುವುದನ್ನು ಕಲಿಸುವ ಇವರೇ ಕಡೆಗೆ ಅದನ್ನು ತಿದ್ದಲು ಪ್ರಯತ್ನಿಸುತ್ತಾರೆ! ತೊದಲು ಮಾತು ಮಕ್ಕಳಿಗೆ ಸಹಜವಲ್ಲ ಎಂದು ಕೊಲಂಬಿಯದ ಪ್ರೊ. ಆಲನ್ ವಾಕರ್ ರೀಡರು ಸಿದ್ಧಾಂತಿಸಿದ್ದಾರೆ. ಅವರ ಪ್ರಕಾರ ಹೀಗೆ ತೊದಲುವುದನ್ನು ಮಕ್ಕಳಿಗೆ ಕಲಿಸುವುದರಿಂದ ಅವುಗಳ ಸ್ಪಷ್ಟೋಚ್ಚಾರಣಾ ಸಾಮರ್ಥ್ಯ ಕುಗ್ಗಿ ಹೋಗುತ್ತದೆ. ಮಗುವಿನ ಎದುರು ಮಾತಾಡುವಾಗ ತಾಯ್ತಂದೆಯರು ಅತ್ಯಂತ ಶುದ್ಧವಾದ ಉಚ್ಚಾರಣೆಯನ್ನಿಟ್ಟುಕೊಂಡರೆ ಆರುವರ್ಷವಾದೊಡನೆ ಅದು ಪಾರ್ಲಿಮೆಂಟಿನ ಪ್ರಸಿದ್ಧ ವಾಗ್ಮಿಗಳಷ್ಟು ಶುದ್ಧವಾಗಿ ಮಾತಾಡಬಲ್ಲುದಾಗುತ್ತದೆ ಎಂದು ಪ್ರೊಫೆಸರರು ಆಶ್ವಾಸನವೀಯುತ್ತಾರೆ.

ಭಯಪ್ರದರ್ಶನ

ಮಕ್ಕಳನ್ನು ವಿಧೇಯರನ್ನಾಗಿ ಮಾಡಲು ಅಸಾಧಾರಣ ಭಯಪ್ರದರ್ಶನ ಮಾಡುವುದು ಹಾನಿಕರ. ಮಕ್ಕಳಿಗೆ ಸಹಜವಾಗಿರುವ ಹೆದರಿಕೆಗಳನ್ನು ದೂರ ಮಾಡಬೇಕಲ್ಲದೆ ಹೊಸ ಹೆದರಿಕೆಗಳನ್ನು ಹಾಕಬಾರದು ಮತ್ತು ಇದ್ದ ಹೆದರಿಕೆಗಳನ್ನು ದುರುಪಯೋಗಪಡಿಸಿಕೊಳ್ಳಲೂ ಬಾರದು. ಈ ನಿಯಮವನ್ನು ಪಾಲಿಸದುದರಿಂದ ಮಗುವಿನ ವ್ಯಕ್ತಿತ್ವ ಕುಬ್ಜವಾಗಿ ಶಾರೀರಿಕ ಮತ್ತು ಮಾನಸಿಕ ಶಕ್ತಿಗಳಲ್ಲಿ ಹ್ರಾಸ ಹೊಂದಿ ಅದು ಸದಾ ಅರಕ್ಷಿತತಾ ಭಾವದಿಂದ ನರಳುವ ಸ್ವಭಾವವನ್ನು ಹೊಂದುವಂತಾಗುತ್ತದೆ. "ಗುಮ್ಮ" ನ ಹೆದರಿಕೆಯಿಂದ ಮಗುವಿನ ಮನಸ್ಸಿನ ಮೇಲೆ ವಜ್ರಾಘಾತ ಮಾಡುವ ತಾಯಿ ಅಪತ್ಯದ್ರೋಹಿಯಾಗುತ್ತಾಳೆ! ಅವರ ಹೆದರಿಕೆ ಹೆಚ್ಚಾದರೆ ಮಗು ಮಾನಸಿಕ ಭ್ರಮೆಗೆ ಸಿಲುಕಿ ಶರೀರ ಕ್ಷೀಣತೆ ಹೊಂದುತ್ತದೆ; ಅತಿರೇಕವಾದಲ್ಲಿ ಅದರಿಂದ ಒಮ್ಮೆ ಅದು ಸತ್ತರೂ ಸಾಯಬಹುದು. ದೊಡ್ಡ ಸಪ್ಪಳದ ಹೆದರಿಕೆಯಿಂದ ಮಗು ಸತ್ತದ್ದಕ್ಕೆ ಉದಾಹರಣೆಯಿದೆ. ೬ ವರ್ಷದ ಒಂದು ಮಗು ಒಮ್ಮೆ ಮೋಟಾರು ತುತ್ತೂರಿಯ ಸದ್ದಿನಿಂದ ನಿದ್ದೆಯು ಕೆಟ್ಟು ತೀರಿ ಹೋದುದನ್ನು ಡಾ. ಜೇಮ್ಸ್ ರೀವ್ಸರು ವರದಿ ಮಾಡಿದ್ದಾರೆ. ಗುಡುಗಿನಂತೆ ಇರುವ ಯಾವ ಶಬ್ದವನ್ನು ಕೇಳಿದರೂ ಒಂದು ೨ ವರ್ಷದ ಮಗುವಿಗೆ ಪ್ರಾಣೋತ್ಕ್ರಮಣವಾಗುವಷ್ಟು ಭಯವಾಗುತ್ತಿತ್ತಂತೆ. ಒಮ್ಮೆ ಸೈನಿಕರು ಭೇರಿಯನ್ನು ಬಾರಿಸುತ್ತ ಕಹಳೆಯೂದುತ್ತ ಬೀದಿಯಲ್ಲಿ ಹೋಗುತ್ತಿದ್ದರು. ಆ ಶಬ್ದ ಕೇಳಿ ಅದು ಸತ್ತುಹೋಯಿತಂತೆ! ಅನೇಕ ಮಕ್ಕಳು ಇಷ್ಟು ದುರ್ಬಲರಾಗಿರದಿರಬಹುದು, ಅವು ಹೀಗೆ ಒಮ್ಮೆಲೇ ಸಾಯದಿರಬಹುದು. ಆದರೆ ನಿಜವಾದ ಭಯಕ್ಕಿಂತ ಕಾಲ್ಪನಿಕ ಭಯಗಳಿಂದ ಎಷ್ಟೋ ಮಕ್ಕಳ ಮಾನಸಿಕ ಮತ್ತು ದೈಹಿಕ ಬೆಳವಣಿಗೆ ಕುಂಠಿತವಾಗಬಹುದು; ಅದರಲ್ಲೂ ಅಂಥ ರೂಢಮೂಲ ಭಯಗಳಿಂದ ಪಚನಾಂಗಗಳು ಶಕ್ತಿಗುಂದಿ ಮಕ್ಕಳು ಕೃಶವಾಗುತ್ತ ಹೋಗುವುವು. ಅಥವಾ ಅವು ಒಮ್ಮೆ ಅನೈಸರ್ಗಿಕವಾಗಿ ಶರೀರದಲ್ಲಿ ಅತಿಯಾಗಿ ಕೊಬ್ಬಬಹುದು, ದಪ್ಪವಾಗಬಹುದು. ದಪ್ಪನೆಯವರು ಮದುವೆಯಾಗಲು ಅಂಜುವುದು ಮತ್ತು ಮದುವೆಯಾದರೂ ಸಹವಾಸಕ್ಕೆ ಅಳುಕುವುದು ಅವರಿಗೆ ಚಿಕ್ಕಂದಿನಿಂದ ಮನುಷ್ಯರ ಸಹವಾಸದ ಬಗ್ಗೆ ಒಂದು ವಿಧವಾದ ಹೆದರಿಕೆಯಿರುವುದರಿಂದಲೇ ಎಂದು ಕಂಡುಹಿಡಿಯಲಾಗಿದೆ. ತಮಾಷೆಗಳಿಂದ ಇಂಥ ಮಕ್ಕಳು ಬೇಗ ಮನನೊಂದುಕೊಳ್ಳುತ್ತಾರೆ. ಅಂಥ ಸಮಯದಲ್ಲಿ ಅವರಿಗೆ ಧೈರ್ಯಕೊಟ್ಟು ಅವುಗಳ ಸ್ವಾಭಾವಿಕತೆಯನ್ನು ತಿಳಿಸುವುದು ದೊಡ್ಡವರ ಕರ್ತವ್ಯ.

ಸ್ವಪ್ನ

ಮಕ್ಕಳ ಸ್ವಪ್ನಗಳನ್ನು ವಿವರವಾಗಿ ಕೇಳುವುದರಿಂದ ಅವುಗಳ ಮನಸ್ಸಿನ ಪರಿಪಾಟವನ್ನು ಸುಲಭವಾಗಿ ತಿಳಿದುಕೊಳ್ಳಬಹುದು. ಅದುದರಿಂದ ಹಾಗೆ ಹೇಳಲು ಅವಕ್ಕೆ ಪ್ರೋತ್ಸಾಹ ಕೊಡಬೇಕು. ಮಕ್ಕಳ ಆಲೋಚನೆ ಅಭಿಪ್ರಾಯಗಳನ್ನು ತಪ್ಪೆನ್ನಲು ಬಹಳ ಹಿಂದೆ ಮುಂದೆ ವಿಚಾರಿಸಬೇಕು. ಹಾಗೆ ಮಾಡದಿದ್ದರೆ ಅವುಗಳ ಪ್ರತಿಭೆ ಕುಂದಿ ಹೋಗಿ ಕೇವಲ ಪರಪ್ರತ್ಯಯನೇಯಬುದ್ಧಿಗಳಾಗುತ್ತವೆ. ಎಷ್ಟೋ ವೇಳೆ ಅವುಗಳ ಪ್ರಶ್ನೆ ಮತ್ತು ಅಭಿಪ್ರಾಯಗಳು ದೊಡ್ಡವರವುಗಳಿಗಿಂತ ವೈಜ್ಞಾನಿಕವಾಗಿರುತ್ತವೆ. ಅಂಥ ಸಮಯದಲ್ಲಿ "ಶೇಷಂ ಕೋಪೇನ ಪೂರಯೇತ್" ಎಂಬಂಥ ಉಪಾಧ್ಯಾಯಗಿರಿಯನ್ನು ನಡೆಸಿ, ಗದ್ದರಿಸಿ ಸುಮ್ಮನಿರಿಸುವುದರಿಂದ ಅವುಗಳ ಸ್ವಯಂಪ್ರಭ ಶಕ್ತಿ ಅಡಗಿ, ಅವು ಯಥಾಜಾತ ಇಲ್ಲವೆ ಅತಾರ್ಕಿಕ ಬುದ್ಧಿಯವಾಗಿ ಹೋಗುತ್ತವೆ.

(ಈ ಅಂಶಗಳಿಗೆ ಮಹತ್ವ ಕೊಟ್ಟು ಶಿಶುಸಂಗೋಪನ ಮಾಡದ ತಾಯ್ತಂದೆಯರಿಗೆ ಮಾತೃತ್ವ ಪಿತೃತ್ವಗಳ ಮರ್ಯಾದೆಯನ್ನು ಕಲ್ಪಿಸುವುದು ಬಾರದು [illegible] ಹೇಳಬೇಕು. [illegible] ಕೊಟ್ಟರೆ ಮನಶ್ಶಾಸ್ತ್ರ [illegible] ಎಂಬ ಪೂರ್ವ ಪ್ರಥೆಯನ್ನು [illegible] ಸಮರ್ಥವಾದ [illegible] ವ್ಯವಹಾರದಿಂದ [illegible] ವ್ಯವಹಾರಗಳೇ [illegible] "ಶಾಕ್ಸಪಿಯರ್ [illegible]" ಎಂಬ ಮಾತನ್ನು ಮಕ್ಕಳು [illegible] ತಪ್ಪಿನ ದೆಸೆಯಿಂದ ಅಪರಾಧವರಗೊಳಿಸುವ ಸ್ಥಿತಿಯುಂಟಾಗಬಹುದು. — [illegible]

ಪುಸ್ತಕ ಪರಿಚಯ

[illegible]

ವಕ್ರದೃಷ್ಟಿ

ಬರೆದವರು ಶ್ರೀ ಕೆ. ಟಿ. ದೇಶಪಾಂಡೆ ಎಂ. ಎ., ಪಿ. ಟಿ. ಇ. ಪ್ರಕಾಶಕರು ಪರ್ಣಕುಟಿ ಗ್ರಂಥಮಾಲೆ, ಗೋಕರ್ಣ. ಬೆಲೆ ಒಂದು ರೂಪಾಯಿ, ಪುಟ ೬೧.

"ವಕ್ರದೃಷ್ಟಿ" ಯೊಂದು "ಜಡಹರಟೆಗಳ" ಸಂಗ್ರಹ. ಇದರಲ್ಲಿ ನಾಲ್ಕು ಪ್ರಬಂಧಗಳಿವೆ. ಮೊದಲನೆಯದು "ಸ್ವಾರ್ಥದ ಸ್ವಾರಸ್ಯ". ಸ್ವಪರಾವಲಂಬನೋತ್ಪತ್ತಿಯಲ್ಲಿ ಯಾವ್ಯಾವಲ್ಲಿ ತೋರಿರುವಂತೆ ಜಗತ್ತಿನ ಪ್ರತಿಯೊಂದು ಜೀವಿಯೂ ಮೂಲತಃ ಸ್ವಾರ್ಥಪರವಿರುತ್ತದೆ ಎಂಬುದನ್ನು ಕಾರ್ಯಕಾರಣ ಸಮನ್ವಯದಿಂದ ಕುರುಕ್ಷೇತ್ರಾದಿಗಳ ಉದಾಹರಣೆ ಕೊಟ್ಟು ಸಮರ್ಥಿಸಲಾಗಿದೆ. ಈ ತರ್ಕದ ಮುನ್ನಡೆಯ ಬಗ್ಗೆ ಸಹಜವಾಗಿ ದೇವರು, ದೇವರಿಗಾಗಿ ಪಾರಮಾರ್ಥ, ಪಾರಮಾರ್ಥಕ್ಕಾಗಿ ಸ್ವಾರ್ಥ, ಆ ಸ್ವಾರ್ಥವೇ 'ನಾನು.' ನಾನಿಲ್ಲದೆ ದೇವರಿಲ್ಲ, ನನ್ನಲ್ಲಿಲ್ಲದ ದೇವರು ಬೇರೆಲ್ಲಿಯೂ ಇಲ್ಲ. ನಾನು ಕಾಣದ ದೇವರು ಬೇರೆಲ್ಲಿಯೂ ಕಾಣಸಿಗನು. ಅಂತೆಯೇ ಸ್ವಾರ್ಥವೇ ದೇವರು ಎಂಬುದನ್ನು ನಿದರ್ಶನವಾಗಿ ತೆಗೆದುಕೊಳ್ಳಬಹುದು. ಮನುಷ್ಯನ ಸ್ಥಿತಿ ಹೀಗಿದ್ದರೂ ಜನರು ಪರಹಿತವಾದುತ್ತೇವೆಂದು ಸೇವೆ, ತ್ಯಾಗದ ಹೆಸರಿನಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳುವ ವಂಚನೆ ಹಿಡಿದಿರುವ ಅಪ್ರಾಮಾಣಿಕತೆಯೇಕೆ? ಗಂಡನ ಹೆಸರಿನಲ್ಲಿ ಊಟ, ಮಕ್ಕಳ ಹೆಸರಿನಲ್ಲಿ ನಿದ್ದೆ ಎಂಬ ಗರತಿಯಂತೆ ದೇವರ ಹೆಸರಿನಲ್ಲಿ ಸ್ವನೇನ್ನ ಭಕ್ತರ ಹೊಟ್ಟೆಯುಕ್ಷೆ ಅವರ ಸಮರ್ಪಣೆ!

ಎರಡನೆಯದು "ಹುಳ್ಳನ ಹೊಗಸು". ಇದರಲ್ಲಿ ಪಂಚಪಾಪ್ರಪಂಚದ "ಮೇಲೆಲ್ಲ ಥಳಥಳ ಒಳಗೆಲ್ಲ ಹುಳುಕಂತೆ" ಎಂಬ ಜೀವನ ವಿಧಾನವನ್ನು ಸಾಕ್ಷಾತ್ಕರಿಸಿ ತೋರಲಾಗಿದೆ. ನಮ್ಮ ಪುರಾಣಚಕ್ರವರ್ತಿಯಾದ ಮಹೇಂದ್ರನ ಮೋದಿಯನ್ನು ದೃಷ್ಟಾಂತವನ್ನಾಗಿ ತೆಗೆದುಕೊಂಡು ಅಸತ್ಯವು ಹೇಗೆ ವಿಶ್ವವ್ಯಾಪಿಯಾಗಿದೆ ಎಂಬುದನ್ನು ತೋರಿಸಲಾಗಿದೆ. ಇದನ್ನೋದಿದರೆ ಜಗತ್ತಿನಸತ್ಯಜೀವನಕ್ಕೆ ಸತ್ಯಎಷ್ಟು ಅಗತ್ಯವೋ ಸುಳ್ಳು ಅಷ್ಟೇ ಅಗತ್ಯ ಎಂಬುದು ಸ್ಪಷ್ಟವಾಗುವುದು. ಆದರೆ ಈ ಅಗತ್ಯವನ್ನು ಬಾಯಲ್ಲಿ ಯಾರೂ ಒಪ್ಪುವುದಿಲ್ಲ; ಮತ್ತು ನ್ಯಾಯದೃಷ್ಟಿಯಿಂದ ಬಳಸಿಕೊಳ್ಳುವುದೂ ಇಲ್ಲ. ಇದೇ ಜಗತ್ತಿನ ದುಃಖದ ಮೂಲ; ಹಂಚಿಕೆಯಿಂದ ಜನರು ನೋಡಲು ಜಯ, ಅನಂತರ ಆತ್ಯಂತಿಕ ದುಃಖಹೊಂದುತ್ತಾರೆ. ವೇದದಲ್ಲಿ ಈ ಕಾರಣದಿಂದಲೇ ಸತ್ಯದ ಜೊತೆಗೆ ಋತ ಎಂಬುದನ್ನು ಹೇಳುತ್ತಾರೆ. ಸತ್ಯವೆಂದರೆ ವಾಸ್ತವಜ್ಞಾನ. ಋತವೆಂದರೆ ಜೀವನದಲ್ಲಿ ಇರಬೇಕಾದ ನ್ಯಾಯಬದ್ಧನಿಯಮ. ಶಿಷ್ಟ ತಿಳಿ ಶಿಸ್ತು, ಧರ್ಮದ ಕಟ್ಟು; ಜೀವಿಗಳು ತಂತಮ್ಮ ಇತಿಮಿತಿಗಳನ್ನು ಅರಿತು ಯಥಾಶಕ್ತಿ ಪರಹಿತದಿಂದ ಬಾಳ ತಮ್ಮಾಳಕ ಸ್ವಹಿತ ಸಾಧಿಸಿಕೊಳ್ಳುವ ದಿವ್ಯದೃಷ್ಟಿ. ಈ ವಿಚಾರದಲ್ಲಿ ಈ ಎರಡನೆಯ ಪ್ರಬಂಧ ಪ್ರಬೋಧಿಸುತ್ತದೆ.

"ಗೋಪಾಳದ ಗರ್ಭ" ಮೂರನೆಯದು. ಇದರಲ್ಲಿ ಕೌಟಿಲ್ಯಗ್ರಂಥದ ಕೌಶಲಕ್ಕೆ ಭಾಷ್ಯ [illegible] ಕಲೆಯನ್ನು ಸವಿಸ್ತರವಾಗಿ ತಿಳಿಸಲಾಗಿದೆ. [illegible]

ಗಳು ಕೇಡಿಗೆಳೆಸಿದ್ದಾರಲ್ಲವೆ? ಈ ಲಂಚದ ಹಿನ್ನೆಲೆಯ ವಿಚಾರಪಂಕ್ತಿ ಇದಾಗಿದೆ.

ಕಡೆಯದು "ಹಿಂಸೆಯ ಹಿನ್ನೆಲೆ". ಸಾರ್ವತ್ರಿಕ ಅಹಿಂಸೆ ದುರಾರಾಧ್ಯವೆಂಬುದನ್ನು ತಿಳಿದೂ ನಾನು ಅಹಿಂಸಕನೆಂಬ ಸಾಧುತ್ವದ ವಂಚಕತೆಯನ್ನು ಇಲ್ಲಿ ಬಯಲಿಗೆಳೆಯಲಾಗಿದೆ. ದೇಶಕಾಲ ಕಾರ್ಯ ವ್ಯಪೇಕ್ಷೆಯಿಂದ ಹಿಂಸೆ ಅಹಿಂಸೆಗಳನ್ನು ಉಚಿತ ಪ್ರಮಾಣದಲ್ಲಿ ಅನುಸರಿಸಿ ತನಗೂ ಇತರ ಜೀವಿಗಳಿಗೂ ಹೆಚ್ಚು ಪ್ರಮಾಣದ ಅಹಿಂಸಾತ್ಮಕ ಜೀವನ ದೊರಕುವಂತೆ ನಡೆದುಕೊಂಬ ಬುದ್ಧಿ ಜನರಲ್ಲಿಲ್ಲವಾದುದರಿಂದಲೇ ಹಿಮವುದು ಕೌಶೀಟದ ತಿನ್ನುವುದು ದುಸೀಕೆಂದ ಎಂಬಂತಹ ಸ್ವಪರವಂಚಕ ಜೀವನವನ್ನು ಜಗತ್ತಿನ ಸಾಧು ಅಸಾಧು ಜನರೆಲ್ಲರೂ ಒಂದಲ್ಲ ಒಂದು ವಿಧದಿಂದ ನಡೆಸುತ್ತಿರುವ ಅಂಶವನ್ನು ಕ್ರಿಸ್ತ, ಗಾಂಧಿ ಮುಂತಾದವರ ಕಾರ್ಯಗಳ ಉದಾಹರಣೆಯಿಂದ ವರ್ಣಿಸಲಾಗಿದೆ. ಹಿಂಸೆಯ ಸೂಕ್ಷ್ಮ ಸ್ವರೂಪವನ್ನು ವಿವರಿಸಿ ಅದರ ಸರ್ವವ್ಯಾಪಿತ್ವವನ್ನು ನಿವೇದಿಸಿ ಗ್ರಂಥಕರ್ತರು ಓದುಗರಿಗೆ ಸೃಷ್ಟಿಯ ಮರ್ಮದ ಚಿಂತನದಲ್ಲಿ ಒಂದು ಹೊಸ ಬೆಳಕನ್ನು ಹಿಡಿದಿದ್ದಾರೆ.

ಮೇಲಿನ ನಾಲ್ಕು ಪ್ರಬಂಧಗಳನ್ನು ಓದಿದರೆ ಜೀವನದ ಅವಶ್ಯಕತೆಯ ಮತವನ್ನು ಯಾರಿಗೂ ಬಿಡಲು ಸಾಧ್ಯವಿಲ್ಲವಾದರೂ ಎಲ್ಲರೂ ಸತ್ಯದ ಆದರ್ಶವನ್ನು ಬಾಯಲ್ಲಿ ಹೇಳುತ್ತ ಅವಿದ್ಯೆಯನ್ನು ತಂತಮ್ಮ ಬುದ್ಧಿಗೆ ತೋರಿದಂತೆ ಬಳಸಿಕೊಳ್ಳುತ್ತಿರುವ ಮಾಯಾವಿತನ ಕಣ್ಣಿಗೆ ಕಟ್ಟಿದಂತಾಗುತ್ತದೆ. ತ್ರಿಕರಣ ಶುದ್ಧಿ ಎಂಬುದು ತ್ರಿಕಾಲಗಳಲ್ಲೂ ತ್ರಿಲೋಕಗಳಲ್ಲೂ ಇರದು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇಂಥ ಅಮೂಲ್ಯವೂ ಹರಿತವೂ ಆದ ವಿಚಾರಗಳನ್ನು "ಜಡಹರಟೆಗಳಲ್ಲಿ" ನಮ್ಮ ಮುಂದಿಟ್ಟ ಶ್ರೀ ದೇಶಪಾಂಡೆಯವರೂ ಪರ್ಣಕುಟಿಯ ಜ್ಞಾನಾರಾಧಕರೂ ಅಭಿನಂದನಾರ್ಹರೇ ಸರಿ.

ಸಪ್ತರಂಗ

ಲೇಖಕರು, ಶ್ರೀ ಎಸ್. ಎಸ್. ಗದಗಕರ, ಪ್ರಕಾಶಕರು, ಮನೋಹರ ಗ್ರಂಥ ಭಾಂಡಾರ, ಧಾರವಾಡ, ಪುಟಗಳು, ೪೭, ಬೆಲೆ ೧೨ ಆಣೆ.

ಇದೊಂದು ವ್ಯಕ್ತಿಪರಿಚಯಾತ್ಮಕ ಗ್ರಂಥ. ಕರ್ನಾಟಕದ ಏಳು ಜನರ ಪರಿಚಯವನ್ನು ಲೇಖಕರು ಈ ಗ್ರಂಥದ ಮುಖಾಂತರ ಮಾಡಿಕೊಡಲು ಪ್ರಯತ್ನಿಸಿದ್ದಾರೆ. ಕನ್ನಡದಲ್ಲಿ ಏಕಾಂಕ ನಾಟಕಗಳನ್ನು ಬಳಕೆಗೆ ತಂದ ಶ್ರೀರಂಗ, ಕವಿ ಸಾಲಿ ರಾಮಚಂದ್ರರಾಯರು, ಮಾಧವಿ ಲಿಪಿಯನ್ನು ಸಂಶೋಧಿಸಿದ ಕಬ್ಬೂರ ಮಧ್ವರಾಯರು, ಇಂದು ನಾಟ್ಯಾಚಾರ್ಯರೆಂದು ಪ್ರಸಿದ್ಧರಾಗಿರುವ ಕುಲಕರ್ಣಿ ಶ್ರೀನಿವಾಸ, ಕಾದಂಬರಿಕಾರರಾದ ಶ್ರೀ ರಂ. ಶ್ರೀ. ಮುಗಳಿ, ವಿಮರ್ಶಕರೂ ಕವಿಗಳೂ ಆದ ಶ್ರೀ ವಿ. ಕೃ. ಗೋಕಾಕ, ಕವಿ, ಕತೆಗಾರ ಕಾದಂಬರಿಕಾರರಾದ ಆನಂದಕಂದ ಮತ್ತು ಶ್ರೀ ನಾಕ್ಕೋಡ ಹನುಮಂತರಾಯರು ಇವರೇ ಮೊದಲಾದವರ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ. ಕನ್ನಡದಲ್ಲಿ ಈ ರೀತಿಯಾದ ಪರಿಚಯಾತ್ಮಕ ಬರೆಹ ತೀರ ವಿರಳ. ಲೇಖಕರು ಈ ಬಗೆಯ ಸಾಹಸ ಕೈಕೊಂಡುದು ಪ್ರಶಂಸನೀಯವಾಗಿದೆ. ಆದರೆ ಓದುಗರಿಗೆ ಹೊಸ ಹೊಸ ವ್ಯಕ್ತಿಗಳ ಪರಿಚಯ ಮಾಡಿಕೊಡುವುದು ಲೇಖಕರ ಕರ್ತವ್ಯವಾಗಿದೆ. ಲೇಖಕರು ಅದನ್ನಿಲ್ಲಿ ಗಮನಿಸಿಲ್ಲ. ಶ್ರೀರಂಗ, ಕುಲಕರ್ಣಿ ಶ್ರೀನಿವಾಸ, ಮುಗಳಿ, ಆನಂದಕಂದರ ಬಗೆಗೆ ಬೇರೆ ಬೇರೆ ವೃತ್ತಪತ್ರಗಳಲ್ಲಿ ಪರಿಚಯಗಳು ಬಂದಿವೆ. ಶ್ರೀರಂಗರ ಬಗೆಗೆ ಒಂದು ಹೊತ್ತಿಗೆಯೇ ಪ್ರಕಟವಾಗಿದೆ. ಹಿಂದಿನ ಬಳ್ಳಿಯ 'ಸಾಹಿತ್ಯಕ್ಕರ ಅಕ್ಕಕಡೆ. ಇವರಲ್ಲನೇಕರ ಚಿತ್ರ ಸ್ಪಷ್ಟವಾಗಿ ಅವ ಇದರಲೇ ಚಿತ್ರಿಸಲ್ಪಟ್ಟಿದೆ. ಹೀಗಾಗಿ ಲೇಖ [illegible]

ಕರು ಮುಂದೆ ಬರೆಯುವಾಗ ವಿವೇಚನೆಯಿಂದ ಮಹತ್ವದ ಸ್ಥಾನವನ್ನು ಕುರಿತು ಬಿಟ್ಟಿದ್ದಾರೆ. ಯಾವ ವ್ಯಕ್ತಿ ಚಿತ್ರದಲ್ಲಿಯೂ ಸುಸ್ಪಷ್ಟವಾದ ಅಭಿಪ್ರಾಯವನ್ನು ಕೊಡಲು ಲೇಖಕರು ಹಿಂದು ಮುಂದು ನೋಡುತ್ತಿದ್ದಾರೆಂಬುದು ಕಂಡುಬಾರದಿರದು. ಲೇಖಕರ ವರ್ಣನಾತ್ಮಕ ಶೈಲಿಯೊಂದನ್ನು ಬಿಟ್ಟರೆ ಯಾವ ವಿಶೇಷವೂ ಈ ಗ್ರಂಥದಲ್ಲಿ ಕಂಡು ಬರುವದಿಲ್ಲವೆಂದು ಅನಿವಾರ್ಯವಾಗಿ ಹೇಳಬೇಕಾಗುತ್ತದೆ.

ಶ್ರೀ ಗುರುದೇವರ ವಚನಗಳು

ಸಂಗ್ರಹಕಾರರು, ಶ್ರೀ ಸ್ವಾಮಿ ಬ್ರಹ್ಮಾನಂದ, ಪ್ರಕಾಶಕರು, ಶ್ರೀ ರಾಮಕೃಷ್ಣಾಶ್ರಮ, ಮೈಸೂರು. ಕ್ರೌನ್ ೮. ಪ. ೮೩ ಪುಟ ಬೆಲೆ ರೂ ೧.-

ಆಧುನಿಕ ಕಾಲದ ಅದ್ವಿತೀಯ ಋಷಿ. ಸಿದ್ಧರೆನಿಸಿದ ಶ್ರೀ ರಾಮಕೃಷ್ಣ ಪರಮಹಂಸರು ಆಧ್ಯಾತ್ಮ ಸಿದ್ಧಿಯನ್ನು ಕುರಿತು ಆಗಾಗ್ಗೆ ಅನೇಕ ಮಾರ್ಮಿಕವಾದ ಮಾತುಗಳನ್ನು ಅಂದುದುಂಟು. ಅವನ್ನು ಸಂಗ್ರಹಿಸಿ ಅವರ"ಮಾನಸಪುತ್ರ"ರೆಂದು ಹೆಸರಾದ ಸ್ವಾಮಿ ಬ್ರಹ್ಮಾನಂದರು ಪ್ರಕಟಿಸಿದ್ದರು. ಈಗ ಅವನ್ನು ಕನ್ನಡದಲ್ಲಿ ಅನುವಾದಿಸಿ ಮೈಸೂರಿನ ರಾಮಕೃಷ್ಣಾಶ್ರಮದವರು ಪ್ರಕಟಿಸಿರುವರಿಂದ ಸಾಧಕರಿಗೆ ಮಾತ್ರವಲ್ಲ, ಎಲ್ಲ ಜಿಜ್ಞಾಸುಗಳಿಗೂ ಅನುಕೂಲವಾಗಿದೆ. ಅನುವಾದ ಸರಳವಾಗಿದ್ದರೂ ಹಲವೆಡೆ ದುರ್ಬಲವಾಗಿಯೂ ಕನ್ನಡದ ಭಾಷಾಮರ್ಯಾದೆಗೆ ವ್ಯತಿರಿಕ್ತವಾಗಿಯೂ ಇದೆ. ಮುಂದಿನ ಸಂಸ್ಕರಣದಲ್ಲಿ ಇದನ್ನು ಸರಿಯಾಗಿ ತಿದ್ದಬೇಕೆಂದು ಸೂಚನೆ.

ಭದ್ರತಾ ಮಂಡಲದಲ್ಲಿ ಭಾರತದ ಕುಡುಕರ ದೂರು

[೩ನೆಯ ಪುಟದಿಂದ]

ಅಮೇರಿಕಾ.-ಕುಡುಕಪ್ಪನು ಹೇಳಿಕೆ ಕೊಡುವದು ಮುಗಿದಿದ್ದರೆ ಅವನು ಈ ಸಭೆಯಿಂದ ಹೋಗಲು ಸೂಚಿಸಬಾರದೇಕೆ?

ರಶಿಯಾ-ಏನ್ಮೆ ಅವರ ಹೇಳಿಕೆ ಕೇಳಿಕೊಳ್ಳಲು ಈ ಸಭೆ ನಿರ್ಧರಿಸಿದೆ ಅಂದ ಮೇಲೆ ಅವನು ತಾನಾಗಿ ತನಗೆ ಹೇಳುವದೆಲ್ಲ ಮುಗಿದಿದೆಯೆಂದು ಹೇಳುವ ವರೆಗೆ ಮಾತಾಡಲು ಅಧಿಕಾರವಿದೆ. ಕೂಲಿಕಾರರ ಪಕ್ಷ ವಹಿಸಿ ಅವನು ಒಂದು ಶಬ್ದ ಹೇಳಿದ ಕೂಡಲೇ ನಿಮಗೇಕೆ ಹೆದರಿಕೆ ಎನಿಸಬೇಕು? ಕುಡುಕಪ್ಪಾ, ಹೇಳು. ಕೂಲಿಕಾರರ ಸ್ಥಿತಿಗತಿ ನಿಮಗೆ ಗೊತ್ತಿದ್ದಷ್ಟು ಹೇಳು.

ಸರ ಗಫಲತ್ತುಲ್ಲಾಖಾನ.- ಅವನಿಗೇನೂ ಆ ಬಗ್ಗೆ ಹೇಳಬೇಕಾದುದಿಲ್ಲ. ಉಳಿದ ನಾಗರಿಕರಿಗೆ ಸಾಮಾನ್ಯ ಹಕ್ಕು ಇರುವಂತೇಕೆ ತಮಗೆ ಇರಗೊಡಬಾರದೆಂಬುದೇ ಅವನ ಹೇಳಿಕೆಯ ಸಾರವಾಗಿದೆ. ನಾಗರಿಕರಿಗೆ ತಮ್ಮ ಮನೆಯಲ್ಲಿ ತಮಗೆ ಬೇಕಾದ ಅಡಿಗೆ ಮಾಡಿಕೊಂಡು ಉಣ್ಣುವ ಹಕ್ಕು ಇದೆ. ಅದರಂತೆ ಚಹಾ, ಕಾಫಿ, ಕೋಕೋ ಚಟವಿದ್ದವರಿಗೆ ಅದನ್ನು ಮನೆಯಲ್ಲಿ ಮಾಡಿಕೊಂಡು ಕುಡಿಯಲು ಅಭ್ಯಂತರವಿಲ್ಲ. ಆದೇ ಕುಡುಕಪ್ಪನ ವರ್ಗದವರಿಗೆ ಮನೆಯಲ್ಲಿ ನೀರಿನಲ್ಲಿ ಬೆಲ್ಲ ಬೇಲದ ತೊಗಟೆ ನೆನೆ ಇಟ್ಟು ಕುದಿಸಿ ಅದರ ಕಷಾಯದಿಂದ ಹುಟ್ಟಿದ ಉಗಿಯ ರಸ ಕುಡಿಯುವದು ದೊಡ್ಡ ಅಪರಾಧವೆಂದು ಗಣಿಸುವದರಿಂದ ಅಲ್ಪಸಂಖ್ಯಾಕರಾದ ಕಾರಣದಿಂದ ಅವರ ಮೇಲೆ ಇಂಥ ಅನ್ಯಾಯ ಮಾಡಲಾಗುತ್ತಿದೆ. ಇದು ವ್ಯಕ್ತಿಸ್ವಾತಂತ್ರ್ಯದ ಹರಣ. ನಾಗರಿಕರ ಮೂಲಭೂತ ಹಕ್ಕಿನ ಸಮಾಧಿ. ದಕ್ಷಿಣ ಆಫ್ರಿಕೆಯ ಹಿಂದೀಯರ ಮೇಲೆ ನಡೆದ ವರ್ಣದ್ವೇಷದ ಪ್ರಶ್ನೆಯಷ್ಟೇ ಮಹತ್ವದ್ದಾಗಿದೆ ಎಂದು ವಿಷಯಪಟ್ಟಿಯಲ್ಲಿ ಸೇರಿಸಿ ಹಿಂದುಸ್ಥಾನದ ಈ ವರ್ತನೆಯನ್ನು ಸರಿಪಡಿಸುವಂಥ ಕ್ರಮ ಕೈಕೊಳ್ಳಬೇಕು.

ಅಧ್ಯಕ್ಷ.- ಹಿಂದುಸ್ಥಾನ ಪ್ರತಿನಿಧಿಗೆ ಏನಾದರೂ ಹೇಳುವದಿದೆಯೋ. ?

ಹಿಂದುಸ್ಥಾನ.- ಇದು ಹಿಂದುಸ್ಥಾನದ ಆಂತರಿಕಪ್ರಶ್ನೆ. ಇದನ್ನು ವಿಚಾರಿಸಲು ಈ ಸಭೆಗೆ ಅಧಿಕಾರವಿಲ್ಲ. ಇದನ್ನು ವಿಷಯ ಪಟ್ಟಿಯಲ್ಲಿ ಸೇರಿಸಬಾರದು ಎಂದಿಷ್ಟೇ ಹೇಳಬಯಸುವೆ.

ಅಧ್ಯಕ್ಷ.- ಕುಡುಕತನವು ಒಂದು ಅಪರಾಧವೆಂದು ಯಾವ ಸುಸಂಸ್ಕೃತ ರಾಷ್ಟ್ರವೂ ಮನ್ನಿಸದು. ಕುಡುಕತನಕ್ಕೆ ನಿರೋಧ ಮಾಡುವದು ನಾಗರಿಕ ಹಕ್ಕಿನ ಅಪಹರಣವೆಂದು ಎಲ್ಲ

ರಾಷ್ಟ್ರಗಳ ಅಭಿಪ್ರಾಯವಾಗಿರುವದು. ಈ ಪ್ರಶ್ನೆಯ ಮೇಲೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಚುನಾವಣೆ ನಡೆದರೆ ಪಾನ ವಿರೋಧಿಗಳಿಗೆ ಒಂದು ಮತವೂ ಬೀಳದು. ಈ ಪ್ರಶ್ನೆಯನ್ನು ವಿಷಯ ಪಟ್ಟಿಯಲ್ಲಿ ಸೇರಿಸಲು ಸದಸ್ಯರ ಅಭಿಪ್ರಾಯವೇನು ?

ಬ್ರಿಟನ.-ವಿಷಯಪಟ್ಟಿಯಲ್ಲಿ ಸೇರಿಸಿ ಹಿಂದುಸ್ಥಾನದಲ್ಲಿ ಹೋಗಿ ಈ ಬಗ್ಗೆ ಬಹುಸಂಖ್ಯಾಕರು ಅಲ್ಪಸಂಖ್ಯಾಕರಾದ ಕುಡುಕ ವರ್ಗದವರ ವ್ಯಕ್ತಿ ಸ್ವಾತಂತ್ರ್ಯ ಹರಣವಾದ ವಿಷಯದಲ್ಲಿ ವರದಿ ಮಾಡಲು ಒಂದು ಸಮಿತಿಯನ್ನು ನೇಮಿಸಬೇಕು.

ಸರ್ವಾನುಮತದಿಂದ ಬ್ರಿಟನ ಪ್ರತಿನಿಧಿಯ ಸೂಚನೆ ಅಂಗೀಕಾರವಾಗಿ ಸಭೆಯು ಮುಂದುವರಿಯಿತು. ರಶಿಯಾ ಮತ್ತು ಯುಕ್ರೇನ್ ಪ್ರತಿನಿಧಿಗಳು ಇಷ್ಟರಲ್ಲೇ ಸಭೆಯಿಂದ ಕಣ್ಮರೆಯಾಗಿ ಬಿಟ್ಟಿದ್ದರು. ಮತದಾನದಲ್ಲಿ ಭಾಗವಹಿಸಲಿಲ್ಲ.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಪುರೋಹಿತರವರು ಮುದ್ರಿಸಿ ಪ್ರಕಟಿಸಿದರು.